ಗೌರಿ ಲಂಕೇಶರ

ಲಂಕೇಶ್

ಮೇ 23, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ನೆ ಬಂತೊಂದಾನೆ

ದ್ಧಿ ಚಿತ್ತ BSPಯತ್ತ ◆ ಕಾಂಗ್ರೆಸ್-ಬಿಜೆಪಿಗೆ ನಡುಕ ◆ ಗೌಡರ ಹೊಸ ಲೆಕ್ಕಾಚಾರ

ತೆಯಲ್ಲಿ ಚಳಿ ಕಾಯಿಸಿಕೊಂಡ
ರಕಿಹೊಳಿ


ೂದಗಿರಿಯಲ್ಲಿ
ುದ್ನಾಳ್‌ರ ಹಾವಳಿ!

ಾವಣಗೆರೆಯ
ೃತ್ಯುಕೂಪ
ಟಿ ಸೆಂಟ್ರಲ್ ಆಸ್ಪತ್ರೆ



ನಟಿ ನಮಿತಾಳನ್ನು ಕೊಂದದ್ದು ಯಾರು?

ಜೈವಿಕ ಇಂಧನವೆಂಬ ಅಮೆರಿಕದ ಹೊಸ ಹುನ್ನಾರ!!



ಇಂದು ತೈಲ ಸಂಪನ್ಮೂಲವನ್ನು ನಿಯಂತ್ರಿಸುವವರು ನಾಳೆ ಜಗತ್ತನ್ನೇ ನಿಯಂತ್ರಿಸುತ್ತಾರೆ. ಆದ್ದರಿಂದಲೇ ಅಮೆರಿಕ ಪ್ರಪಂಚದಲ್ಲಿ ಎಲ್ಲೆಲ್ಲಿ ತೈಲ ನಿಕ್ಷೇಪಗಳಿವೆಯೋ ಆ ಎಲ್ಲಾ ದೇಶಗಳ ಮೇಲೆ ಯುದ್ಧ ಮಾಡಿದ್ದು ಮತ್ತು ಮಾಡುತ್ತಿರುವುದು! ಆದರೆ ಈ ಬಗೆಯ ಮಿತಿಮೀರಿದ ಪೆಟ್ರೋಲ್, ಡೀಸೆಲ್ ಬಳಕೆಯಿಂದ ಜಾಗತಿಕ ಜೈವಿಕ ಮತ್ತು ಪರಿಸರ ಸಮತೋಲನವೇ ಏರುಪೇರಾಗುತ್ತಿದೆ. ಒಟ್ಟಾರೆ ಜಾಗತಿಕ ತಾಪಮಾನ ತೀವ್ರಗತಿಯಲ್ಲಿ ಏರುತ್ತಿದೆ. ಇಂದು ಧ್ರುವ ಪ್ರದೇಶಗಳ ಹಿಮಗಡ್ಡೆಗಳನ್ನು ಕರಗಿಸಿ ಒಟ್ಟಾರೆ ಭೂಗೋಳವನ್ನೇ ಜಲಪ್ರಳಯಕ್ಕೆ ಈಡು ಮಾಡಬಹುದೆಂಬ ಆತಂಕ ಇಡೀ ಜಗತ್ತನ್ನು ಆವರಿಸುತ್ತಿದೆ. ದುರದೃಷ್ಟವಶಾತ್ ಮತ್ತೊಂದು ಭೂಮಿ ದೊರೆಯುವವರೆಗಾದರೂ ಅಮೆರಿಕದ ಶ್ರೀಮಂತರೂ ಇದೇ ಭೂಗೋಳದಲ್ಲಿ ಬದುಕಲೇಬೇಕಾಗಿರುವುದರಿಂದ ಈ ತಾಪಮಾನವನ್ನು ಅರ್ಥಾತ್ ತೈಲ ಬಳಕೆಯನ್ನು ಕಡಿಮೆ ಮಾಡುವ ಯೋಜನೆಗಳ ಬಗ್ಗೆ ತಲೆಕೆಡಿಸಿಕೊಳ್ಳಲೇ ಬೇಕಾಗಿದೆ. ಆದರೆ ಅದರಲ್ಲೂ ಅವರ ಸಾಮ್ರಾಜ್ಯಶಾಹಿ ಉದ್ಯಮಾಸಕ್ತಿ ಕೆಲಸ ಮಾಡುತ್ತಿದೆ ಎಂಬುದು ಇತ್ತೀಚಿನ ವಿದ್ಯಮಾನಗಳನ್ನು ನೋಡಿದರೆ ಅರ್ಥವಾಗುತ್ತದೆ.

ಕ್ಯೋಟೋ ಒಪ್ಪಂದ, ಜಾಗತಿಕ ತಾಪಮಾನ ಇಳಿಸುವ ಒಪ್ಪಂದ, ಪರಿಸರ ಒಡಂಬಡಿಕೆ ಇತ್ಯಾದಿ ಅಂತರರಾಷ್ಟ್ರೀಯ ಒಪ್ಪಂದಗಳಿಗೆ ಹೆಚ್ಚೆಚ್ಚು ರಾಷ್ಟ್ರಗಳು ಸಹಿ ಮಾಡುತ್ತಿದ್ದಂತೆ ಜಗತ್ತಿನ ರಾಷ್ಟ್ರಗಳೆಲ್ಲಾ ಇವತ್ತಲ್ಲ ನಾಳೆ ತಮ್ಮ ತೈಲ ಬಳಕೆಯ ಪ್ರಮಾಣವನ್ನು ತಗ್ಗಿಸಲೇ ಬೇಕಾದ ಅನಿವಾರ್ಯಕ್ಕೆ ಒಳಗಾಗುತ್ತಿವೆ. ಆದರೆ ಯಾವುದೇ ದೇಶ ತನ್ನ ಅಭಿವೃದ್ಧಿಯನ್ನು ಇಂಧನ ಮೂಲವಿಲ್ಲದೆ ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಹೀಗಾಗಿ ಪರ್ಯಾಯ ಇಂಧನ ಮೂಲಗಳಿಗೆ ಅನ್ವೇಷಣೆ ಪ್ರಾರಂಭವಾಗಿದೆ. ಅಂದರೆ ಪರ್ಯಾಯ ಇಂಧನಮೂಲಗಳ ವ್ಯಾಪಾರ ಬರುವ ದಿನಗಳಲ್ಲಿ ಯಾವುದೇ ಉದ್ಯಮಕ್ಕಿಂತ ಹೆಚ್ಚಿನ ಲಾಭ ತರುವ ಉದ್ಯಮವಾಗಲಿದೆ.

ಈ ಪರ್ಯಾಯ ಮೂಲಗಳಲ್ಲಿ ಅತ್ಯಂತ ಪ್ರಮುಖವಾದದ್ದು ಜೈವಿಕ ಇಂಧನಮೂಲ. ಅಂದರೆ ಪಾಮ್, ಮೆಕ್ಕೆಜೋಳ, ಸೋಯಬೀನ್ಸ್, ಕಬ್ಬು ಮತ್ತು ಹೊಂಗೆಯಂತಹ ಸಸ್ಯಗಳ ಮೂಲದಿಂದ ಇಂಧನ ಉತ್ಪಾದಿಸುವುದು. ಇವುಗಳಲ್ಲಿ ಮೆಕ್ಕೆಜೋಳ ಮತ್ತು ಹೊಂಗೆಯ ಮೂಲದ ಇಂಧನಗಳು ಈಗಾಗಲೇ ಕಾರ್ಖಾನೆ ಮಟ್ಟದ ಉತ್ಪಾದನೆಯಲ್ಲಿ ತೊಡಗಿಕೊಂಡಿವೆ. ಕಳೆದ ವರ್ಷ ಅಮೆರಿಕದ ಒಟ್ಟಾರೆ ಮೆಕ್ಕೆ ಜೋಳದ ಉತ್ಪಾದನೆಯ ಶೇ.30ರಷ್ಟು ಭಾಗವನ್ನು ಎಥನಾಲ್ ಇಂಧನ ಉತ್ಪಾದನೆಗೆ ಹಾಕಲಾಗಿದೆ. ಆದರೆ ಅದು ಸಹ ಪರಿಸರ ಅಸಮತೋಲನ ಉಂಟುಮಾಡುತ್ತದಾದ್ದರಿಂದ ಈ ಜೈವಿಕ ಇಂಧನ ಉತ್ಪಾದನೆಯಲ್ಲಿರುವ ಅಮೆರಿಕದ ದೊಡ್ಡ ಕಾರ್ಪೊರೇಟ್ ಉತ್ಪಾದಕರ ಕಣ್ಣು ಭಾರತದಂತಹ ಬಡದೇಶಗಳ ಮೇಲೆ ಬಿದ್ದಿದೆ. ಅಂದರೆ ಇಲ್ಲಿ ಲಕ್ಷಾಂತರ ಎಕರೆ ಜಮೀನನ್ನು ವಶಪಡಿಸಿಕೊಂಡು ಜೈವಿಕ ಇಂಧನಕ್ಕಾಗಿ ಈ ಬೆಳೆಗಳನ್ನು ಬೆಳೆಯುವುದು.. ಅದಕ್ಕೆಂದು ಇಲ್ಲಿನ ರೈತರನ್ನು ಒಕ್ಕಲೆಬ್ಬಿಸುವುದು ಮಾತ್ರವಲ್ಲ ದೇಶದ ಆಹಾರ ಸ್ವಾವಲಂಬಿ ಸಾಮರ್ಥ್ಯವನ್ನು ಹಾಳುಗೆಡವುದು. ಅಲ್ಲದೆ ಏಕಕಾಲದಲ್ಲಿ ಆಹಾರಕ್ಕೂ ತನ್ನ ಮೇಲೆ ಅವಲಂಬಿತರನ್ನಾಗಿ ಮಾಡಿಕೊಳ್ಳುವುದಲ್ಲದೆ ಬ್ರಿಟಿಷ್ ವಸಾಹತುಶಾಹಿ ಕಾಲದಂತೆ ಭಾರತವನ್ನು ಕಚ್ಚಾವಸ್ತುವನ್ನು ಪೂರೈಸುವ ವಸಾಹತುವನ್ನಾಗಿ ಮಾಡಿಕೊಳ್ಳುವುದು!

ಚಾರ್ವಾಕ
ಶಿವಸುಂದರ್

ನಗರದ ಮಾಲೀಕರಿಗೆ ಕೋಟಿ, ಗ್ರಾಮೀಣ ನಿರ್ವಸಿತರಿಗೆ ಲಾಟಿ!



ಎಸ್.ಇ.ಜೆಡ್‌ಗಳಿಗೆ, ಟೌನ್‌ಶಿಪ್‌ಗಳಿಗೆ ಹಾಗೂ ಇನ್ನಿತರ ಯೋಜನೆಗಳಿಗೆ ಗ್ರಾಮೀಣ ರೈತಾಪಿಯ ಭೂಮಿಯನ್ನು ವಶಪಡಿಸಿಕೊಳ್ಳುವ ಸರ್ಕಾರ ಅದರ ಜವಾಬ್ದಾರಿಯನ್ನು ಮಾತ್ರ ಕೆಐಎಡಿಬಿಯಂತಹ ಸರ್ಕಾರಿ ದಲ್ಲಾಳಿ ಸಂಸ್ಥೆಗೆ ಒಪ್ಪಿಸುತ್ತದೆ. ಈ ಸಂಸ್ಥೆ ಮಾರುಕಟ್ಟೆ ದರ ಏನೇ ಇದ್ದರೂ ಅತ್ಯಂತ ಕಡಿಮೆ ದರದಲ್ಲಿ ರೈತರಿಂದ ಜಮೀನನ್ನು ವಶಪಡಿಸಿಕೊಂಡು ರಿಯಲ್ ಎಸ್ಟೇಟ್ ಏಜೆಂಟರಿಗೆ, ಬಿಲ್ಡರ್‌ಗಳಿಗೆ, ಉದ್ಯಮಿಗಳಿಗೆ ಪರಭಾರೆ ಮಾಡುತ್ತದೆ. ಅವರು ಅತ್ಯಂತ ಕಡಿಮೆ ಖರ್ಚಿನಲ್ಲಿ ಭೂಮಿ ಪಡೆದುಕೊಂಡು ರೈತರ ಕಣ್ಣೆದುರಲ್ಲೇ ಕೋಟ್ಯಾಧಿಪತಿಗಳಾಗಿ ಮೆರೆಯುತ್ತಾರೆ. ರೈತ ಭಿಕಾರಿಯಾಗುತ್ತಾನೆ. ಸಂಸಾರ ಬೀದಿಪಾಲಾಗುತ್ತದೆ.

ಆದರೆ ಮೊನ್ನೆ ನಂದಿಗ್ರಾಮದಲ್ಲಿ ರೈತ ಘರ್ಜನೆಯನ್ನು ಕೇಳಿದ ಸರ್ಕಾರ ರೈತರ ಜಮೀನನ್ನು ಉದ್ಯಮಿಗಳು ನೇರವಾಗಿ ಮಾರುಕಟ್ಟೆ ದರ ಕೊಟ್ಟು ಖರೀದಿಸಬೇಕೆಂಬ ನೀತಿಯನ್ನು ಸಲಹೆ ಮಾಡಿದೆ. ಅದಿನ್ನೂ ಜಾರಿಗೆ ಬರುವ ಮುಂಚೆಯೇ ಕುಬೇರ ಸಾಫ್ಟ್‌ವೇರ್ ಪತಿಗಳು ಇದರಿಂದ ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ ಎಂಬ ಅಪಸ್ವರ ಎತ್ತಿದ್ದಾರೆ. ಸರ್ಕಾರದ ಧೋರಣೆ ನೋಡಿದರೆ ಬಹಳ ಬೇಗನೇ ಹಳೆಯ ನೀತಿಯೇ ಜಾರಿಗೆ ಬರುವುದರಲ್ಲಿ ಸಂಶಯವಿಲ್ಲ. ಆದರೆ ಯಾವುದೇ ಅಭಿವೃದ್ಧಿ ಯೋಜನೆಗಳಲ್ಲಿ ಕೆಲವರಿಗೆ ಅನ್ಯಾಯ ವಾಗುವುದು ಸಹಜ ಎನ್ನುವ ಸರ್ಕಾರಗಳು ಮತ್ತು ಪಂಡಿತರು ಎಲ್ಲರಿಗೂ ಇದೆ ಅನ್ವಯಿಸುತ್ತಾರೆಯೇ? ಇಲ್ಲ!

ಉದಾಹರಣೆಗೆ ಈಗ ಬೆಂಗಳೂರಿನಲ್ಲಿ ಕೈಗೆತ್ತಿಕೊಂಡಿರುವ ಮೆಟ್ರೋ ಯೋಜನೆಯನ್ನೇ ನೋಡಿ. ಮೊದಲಿಗೆ ಇದರ ಮಾರ್ಗವೇನೆಂದು ನಿರ್ಧಾರವಾಗುವ ವೇಳೆಯಲ್ಲಿ ಪ್ರಭಾವಿಗಳ ಆಸ್ತಿಪಾಸ್ತಿಗಳು ಬರದಂತೆ ನೋಡಿಕೊಳ್ಳಲಾಯಿತು. ಆದರೆ ಬೆಂಗಳೂರಿನಲ್ಲಿ ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿರುವವರೆಲ್ಲಾ ಪ್ರಭಾವಿಗಳೇ. ಆದ್ದರಿಂದ ಏನೇ ಮಾಡಿದರೂ ಮೆಟ್ರೋ ಮಾರ್ಗದಲ್ಲಿ 600 ಆಸ್ತಿ, ಕಟ್ಟಡಗಳು ಅಡ್ಡಿಯಾಗಲಿದೆ. ಹಾಗಿದ್ದಲ್ಲಿ ಸರ್ಕಾರ ಅಭಿವೃದ್ಧಿಗೆ ಕೆಲವರು ಬಲಿದಾನ ಮಾಡಲೇಬೇಕೆಂದು ಅವರಿಗೆ ಬಿಡಿಗಾಸು ಕೊಟ್ಟು ಹೊರಗೆ ಹಾಕುತ್ತಿದೆಯೇ? ಇಲ್ಲ! ಬದಲಿಗೆ ಅವರಿಗೆಂದೇ ಹೊಸ ಮಾರುಕಟ್ಟೆ ದರವನ್ನು ಜಾರಿಗೊಳಿಸಿದೆ. ಒಂದು ಚದುರಡಿಗೆ 4000 ರೂ. ನಿಂದ 12000 ರೂ. ವರೆಗೆ ದರವನ್ನು ನಿಗದಿಗೊಳಿಸಿದೆ. ಅಂದರೆ ಒಂದು 30/40 ಸೈಟಿಗೆ 50 ಲಕ್ಷದಿಂದ 1.5 ಕೋಟಿಯವರೆಗೂ ಹಣ ತೆರುವುದಲ್ಲದೆ ಅದರ ಶೇ.30ರಷ್ಟು ಸಮಾಧಾನಕರ ಹಣವನ್ನೂ ಕೊಡುತ್ತದಂತೆ!! ಇದಕ್ಕೆಂದೇ ಯೋಜನಾ ವೆಚ್ಚದಲ್ಲೇ ಹಣವನ್ನು ತೆಗೆದಿರಿಸಲಾಗಿದೆಯಂತೆ!!

ಹಾಗಿದ್ದರೆ ಈ ದೇಶದಲ್ಲಿ ಶ್ರೀಮಂತರು ಮಾತ್ರ ನಾಗರಿಕರೇ? ಬಡ ರೈತರು ಈ ದೇಶದ ನಾಗರಿಕರಲ್ಲವೇ? ಒಂದೇ ಸರ್ಕಾರ ನಗರಕ್ಕೊಂದು ಮತ್ತು ಗ್ರಾಮಕ್ಕೊಂದು, ಬಡವರಿಗೊಂದು ಆಸ್ತಿವಂತರಿಗೊಂದು ನೀತಿಯನ್ನು ಮಾಡಿದಂತಾಗಲಿಲ್ಲವೇ? ಇದು ಸಂವಿಧಾನದ ಆಶಯಗಳಿಗೂ ವಿರುದ್ಧವಲ್ಲವೇ?

ರೈತ ಭಾರತ ಕಾರ್ಪೊರೇಟ್ ಇಂಡಿಯಾದ ವಿರುದ್ಧ ಯುದ್ಧ ಹೂಡದೇ ನ್ಯಾಯ ಸಿಕ್ಕುವುದೇ?

ಒಂದು ವರದಿ

ಯಾರೋ ಪದ್ಯವೊಂದನ್ನು ಬರೆದರು
ಪಕ್ಷದ ತೆಗಳಿಕೆ ಎಂದರು ನಾಯಕರು
ಯಾರೋ ಪತ್ರಿಕೆಯೊಂದನ್ನು
ಶುರು ಮಾಡಿದರು
ಪಕ್ಷದ ವಿರುದ್ಧ ಅಪಪ್ರಚಾರ ಎಂದರು ನಾಯಕರು

ಸತ್ಯವನ್ನು ಅರಿಯಬೇಕು ಎಂದರೆ
ಕಮಿಟಿ ಸೇರಲಿ ಎಂದರು ನಾಯಕರು

ನ್ಯಾಯ ದೊರೆಯಲಿಲ್ಲ ಎಂದರೆ
ಕಮಿಟಿ ಸೇರಲಿ ಎಂದರು ನಾಯಕರು

ಹತ್ತು ಪರ್ಸೆಂಟ್ ಕಮಿಷನ್ ಎಂದ ಕೂಡಲೇ
ನಮಗೆ ಕೊಡಿ ಎಂದರು ಸ್ಪಷ್ಟವಾಗಿ, ನಮ್ಮ ನಾಯಕರು..!!

ಈ ಮೇಲಿನ ಕವಿತೆಯನ್ನು ಬರೆದಿದ್ದಕ್ಕಾಗಿ ಸಿಪಿಐ(ಎಂ) ಪಕ್ಷದ ಕೇರಳದ ಘಟಕ ಉಮೇಶ್ ಬಾಬು ಎಂಬ ಕವಿಯನ್ನು ತನ್ನ ಪಕ್ಷದಿಂದ ಉಚ್ಚಾಟನೆ ಮಾಡಿದೆ?...... ನೋ ಕಾಮೆಂಟ್..!!

ಕಟಾರ ಹೇಳದ ಕೆಲವು ಸತ್ಯಗಳು!

ಈಗ ಕಟಾರ ಸಂಸತ್ ಸದಸ್ಯರ ಮತ್ತಷ್ಟು ಲಂಚಕೋರ ಹರಕತ್ತುಗಳಿಗೆ, ಮಹಿಳೆಯರ ಸಾಗಾಟದಂತ ವ್ಯವಹಾರಕ್ಕೆ ಒಂದು ರೂಪಕವಾಗಿ ಬಿಟ್ಟಿದ್ದಾನೆ. ಅದರಲ್ಲಿ ಬಿಜೆಪಿ, ಟಿಆರ್‌ಎಸ್, ಬಿಎಸ್ಪಿ ಪಕ್ಷಗಳ ಇನ್ನೂ ಕೆಲವು ಸಂಸತ್ ಸದಸ್ಯರು ಭಾಗವಹಿಸುತ್ತಿರುವುದು ನಿಧಾನವಾಗಿ ಬೆಳಕಿಗೆ ಬರುತ್ತಿದೆ. ಇವರೆಲ್ಲರೂ ಈ ಕಾನೂನು ವಿರೋಧಿ ಕೃತ್ಯಗಳಲ್ಲಿ ಭಾಗವಹಿಸಿರುವುದು ಲಾಭಲಾಲಸೆಯಿಂದಲೇ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಇವರೆಲ್ಲರಿಗೂ ನಿಜಕ್ಕೂ ಶಿಕ್ಷೆಯಾಗುತ್ತದೆಯೇ ಎಂಬುದು ಈ ದೇಶದಲ್ಲಿ ಪ್ರಜಾತಂತ್ರ ಗೆಲ್ಲುತ್ತದೆಯೇ ಎಂಬಷ್ಟೇ ಕಷ್ಟದ ಪ್ರಶ್ನೆ. ಅದಕ್ಕೆ ಸುಲಭ ಉತ್ತರವಿಲ್ಲ ಬಿಡಿ.


ಆದರೆ ಕಟಾರ ಪ್ರಕರಣ ಇನ್ನೂ ಕೆಲವು ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಇಡೀ ಮಾಧ್ಯಮಗಳ ಫೋಕಸ್ ಕಟಾರಗಳ ಮೇಲೆ ಇದ್ದುದರಿಂದ ಅವರ ಜೊತೆ ಹೊರದೇಶಗಳಿಗೆ ಹೋಗುತ್ತಿರುವವರು ಯಾರು ಮತ್ತು ಏಕೆ ಹೋಗುತ್ತಿದ್ದಾರೆ ಎಂಬ ಪ್ರಶ್ನೆ ಎದುರಾಗಲೇ ಇಲ್ಲ. ಈ ಸಂಸದರನ್ನೇ ನೋಡಿದರೆ ಇವರೆಲ್ಲಾ ವರ್ಷಕ್ಕೆ ಕನಿಷ್ಠ ಹತ್ತು ವಿದೇಶಿ ಪ್ರಯಾಣ ಮಾಡುತ್ತಾರೆ. ಅಂದರೆ ವರ್ಷಕ್ಕೆ ಕನಿಷ್ಠ ಹತ್ತಾರು ಜನ ವಿದೇಶಕ್ಕೆ ಸಾಗಹಾಕಲ್ಪಡುತ್ತಾರೆ ಮತ್ತು ಅವರೆಲ್ಲಾ ಹೆಣ್ಣು ಮಕ್ಕಳೇನಲ್ಲ. ಅವರ ಇಷ್ಟಕ್ಕೆ ವಿರುದ್ಧವಾಗಿಯೂ ಹೋಗುವವರಲ್ಲ!

ಇತ್ತೀಚಿನ ಒಂದು ವರದಿ ತಿಳಿಸುವಂತೆ ಕಳೆದ ಕೆಲವು ವರ್ಷಗಳಲ್ಲಿ ಹರಿಯಾಣ ಮತು ಪಂಜಾಬುಗಳಿಂದ ಕನಿಷ್ಠ 9000 ಜನ ಅಮೆರಿಕ, ಕೆನಡಾ ಮತ್ತು ಲಂಡನ್‌ಗಳಿಗೆ ಸಾಗಹಾಕಲ್ಪಟ್ಟಿದ್ದಾರೆ ಮತ್ತು ಅದರ ಹತ್ತು ಪಟ್ಟು ಹೆಚ್ಚು ಆಕಾಂಕ್ಷಿಗಳಿದ್ದಾರೆ. ಇವರೆಲ್ಲಾ ದಲಿತ ಮತ್ತು ಅಷ್ಟೇ ಹಿಂದುಳಿದ ದಲಿತ ರೈತ ಕೂಲಿ ಕುಟುಂಬಗಳಿಗೆ ಸೇರಿದ ಯುವಜನರು. ಹರಿಯಾಣದ ಒಂದು ಹಳ್ಳಿಯಿಂದ ಈ ರೀತಿ ಕಾನೂನುಬಾಹಿರವಾಗಿ ವಿದೇಶಕ್ಕೆ ಹೋಗಿರುವ ದಲಿತ ಯುವಜನ ಅಲ್ಲಿ ದುಡಿದು ಕೋಟಿಗಳನ್ನು ಗಳಿಸುತ್ತಿದ್ದಾರೆ. ಅದನ್ನೇ ವಾಪಸ್ ಭಾರತಕ್ಕೂ ಕಳಿಸುತ್ತಿದ್ದಾರೆ. ವಿಶ್ವಬ್ಯಾಂಕಿನ ಪ್ರಕಾರ ಪಂಜಾಬಿಗೆ ಈ ರೀತಿ ಅನಿವಾಸಿಗಳು ಕಳಿಸುವ ಹಣ ವರ್ಷಕ್ಕೆ ಕನಿಷ್ಠ 15000 ರೂ. ಕೋಟಿ ರೂಪಾಯಿಗಳು! ಇದರಲ್ಲಿ ಕಾನೂನುಬಾಹಿರವಾಗಿ ವಿದೇಶಕ್ಕೆ ವಲಸೆ ಹೋಗಿರುವ ದಲಿತ ಕುಟುಂಬಗಳ ಪಾಲೂ ಇದೆ.

ಆದರೆ ಕಟಾರನನ್ನು ಪ್ರಶ್ನಿಸುವವರು ವ್ಯವಸ್ಥೆಗೆ ಈ ಪ್ರಶ್ನೆ ಏಕೆ ಕೇಳುವುದಿಲ್ಲ? ಮಿಕ್ಕೆಲ್ಲಾ ವಲಸೆಗಳು ಸಕ್ರಮವೇ ಆಗಿರುವಾಗ ದಲಿತರ ಈ ಬಗೆಯ ಉನ್ನತಿಯೂ ಕಾನೂನು ಬಾಹಿರವೇ ಆಗಿಬಿಡುವ ವ್ಯವಸ್ಥೆ ಇರುವುದರಿಂದಲೇ ಕಟಾರಗಳಂತಹ ಮಧ್ಯವರ್ತಿಗಳು ಹುಟ್ಟಿಕೊಳ್ಳುತ್ತಾರಲ್ಲವೇ?

ಎಲ್ಲಕ್ಕಿಂತ ಅಪಾಯಕಾರಿಯಾದದ್ದು ಕಟಾರನನ್ನು ಶಿಕ್ಷಿಸುವ ಭರದಲ್ಲಿ ದಲಿತರು ಕಂಡುಕೊಂಡಿರುವ ಈ ವಿಮೋಚನಾದಾರಿಯೂ ಮುಚ್ಚಿ ಹೋಗುವುದು.. ಏಕೆಂದರೆ ಪಂಜಾಬಿನ ದಲಿತರಿಗೆ ಯಾವುದೇ ಧರ್ಮಕ್ಕಿಂತ ಎನ್‌ಆರ್ ಐ ಎಂಬ ಸರ್ಟಿಫಿಕೇಟ್ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ಗಳಿಸಿಕೊಡುತ್ತದೆ. ಜಾಗತೀಕರಣದಲ್ಲಿ ಬಂಡವಾಳದ ಹರಿವು ಮುಕ್ತವಾಗಿರುವಾಗ ಶ್ರಮದ ಹರಿವಿಗೆ ಮಾತ್ರ ಅಡ್ಡಗೋಡೆಗಳಿರುವುದು ಸಾಮ್ರಾಜ್ಯಶಾಹಿ ವ್ಯವಸ್ಥೆ ಈ ದೇಶದ ಬ್ರಾಹ್ಮಣಶಾಹಿ ವ್ಯವಸ್ಥೆಯೊಂದಿಗೆ ಮಾಡಿಕೊಂಡಿರುವ ರಾಜಿಗೆ ಮತ್ತೊಂದು ನಿದರ್ಶನ!!

No Comments



"ಸರ್ಕಾರ ಹಮ್ಮಿಕೊಂಡಿರುವ ಜನಪರ ಯೋಜನೆಗಳು ಪ್ರಗತಿಪಥದಲ್ಲಿವೆ. ಜನ ಅದರ ಸದ್ಬಳಕೆ ಮಾಡಿಕೊಳ್ಳುತ್ತಿಲ್ಲ ಅಷ್ಟೆ"

-ಎಂ.ಪಿ.ಪ್ರಕಾಶ್



"ಅಧಿಕಾರ ಸ್ವೀಕರಿಸಿದಾಗ ಇದ್ದ ಉಮೇದು, ವ್ಯವಸ್ಥೆಯಲ್ಲಿನ ಲೋಪಗಳು ಮತ್ತು ಅಸಹಕಾರದಿಂದಾಗಿ ಅನುಷ್ಠಾನ ಹಂತದಲ್ಲಿ ಉಳಿಸಿಕೊಳ್ಳಲಾಗಲಿಲ್ಲ ಎಂಬ ನಿರಾಸೆ ಕಾಡುತ್ತಿದೆ"

-ಎಚ್.ಡಿ.ಕುಮಾರಸ್ವಾಮಿ



"ಪ್ರಮೀಳಾ ನೇಸರ್ಗಿಯವರ ಮಹಿಳಾ ಆಯೋಗದಿಂದ ನನಗೆ ನ್ಯಾಯ ಸಿಗಲು ಸಾಧ್ಯವಿಲ್ಲ"

-ನರ್ಸ್ ಜಯಲಕ್ಷ್ಮಿ



"ವಿಜ್ಞಾನ ಬೆಳೆಯುತ್ತಿರುವ ವೇಗದಲ್ಲೇ ಮಾನವೀಯತೆ ನಶಿಸುತ್ತಿದೆ"

-ಶಿವಕುಮಾರ ಸ್ವಾಮೀಜಿ



"ಗೋ ಸಮ್ಮೇಳನದ ಬಗ್ಗೆ ಬರುವ ಟೀಕೆಯನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಟೀಕೆಗಳೂ ನನಗೆ ಅಲಂಕಾರಪ್ರಾಯವೇ"

-ರಾಘವೇಶ್ವರ ಸ್ವಾಮೀಜಿ

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ಈ ವರ್ಷ ಪುಸ್ತಕ ಮತ್ತು ಸಮವಸ್ತ್ರದ ಸಮಸ್ಯೆ ಇರುವುದಿಲ್ಲ"

-ಸರ್ಕಾರದ ಹೇಳಿಕೆ

"ಚುನಾವಣಾ ಆಯೋಗ ಪರ್ಯಾಯ ಸರ್ಕಾರದಂತೆ ವರ್ತಿಸಿದ್ದರಿಂದಲೇ ನಾವು ಚುನಾವಣೆಯಲ್ಲಿ ಸೋಲಬೇಕಾಯಿತು"

-ಮುಲಾಯಂ ಸಿಂಗ್ ಯಾದವ್

"ಸ್ವಪನ್‌ದಾಸ್ ಗುಪ್ತಾ ನನ್ನನ್ನು ಯಾವಾಗಲೂ ನಕ್ಸಲೈಟ್ ಎಂದು ಕರೆಯುತ್ತಾರೆ"

-ರಾಮಚಂದ್ರ ಗುಹ

ವಾರದ ಅಪಾಯ

"ಬೆಂಗಳೂರು ನಗರವನ್ನು ಗೋಮಯ ಮಾಡುವ ಉದ್ದೇಶದಿಂದ ರಾಮಚಂದ್ರಾಪುರ ಮಠದ ರಾಘವೇಶ್ವರ ಸ್ವಾಮೀಜಿ ಜುಲೈ 29ರಿಂದ ಸೆಪ್ಟೆಂಬರ್ 29ರವರೆಗೆ ಬೆಂಗಳೂರು ನಗರದಲ್ಲಿ ತಂಗಲಿದ್ದಾರೆ."

-ಪತ್ರಿಕಾವರದಿ

ವಾರದ ಸುಳ್ಳು



"ಲಾಟರಿ ನಿಷೇಧದಿಂದ ನಿರುದ್ಯೋಗಿಗಳಾದವರು ಉದ್ಯೋಗ ಬಯಸಿ ಬಂದರೆ ಒಂದು ಲಕ್ಷ ಜನರಿಗೆ ಬೆಂಗಳೂರಿನ ಕಾರ್ಖಾನೆಗಳಲ್ಲಿ ಕೆಲಸ ಕೊಡಿಸಲಾಗುವುದು"

-ರಾಮಚಂದ್ರಗೌಡ

ವಾರದ ಅವಿವೇಕ



"ರಾತ್ರಿ ತಡಹೊತ್ತಿನವರೆಗೆ ಕೆಲಸ ಮಾಡುವುದು ಭಾರತೀಯ ಸಂಪ್ರದಾಯಕ್ಕೆ ವಿರುದ್ಧವಾದದ್ದು"

-ಇಕ್ಬಾಲ್ ಅನ್ಸಾರಿ,
ಕಾರ್ಮಿಕ ಮಂತ್ರಿ

ವಾರದ ಪ್ರಶ್ನೆ



"ಪುನರೂರು ಪಂಚೆ ಎಳೆದ ಪ್ರಕರಣದಲ್ಲಿ ಆರೋಪಿಗಳೆಲ್ಲಾ ಖುಲಾಸೆ"

-ಪತ್ರಿಕಾ ವರದಿ

ಹಾಗಿದ್ದಲ್ಲಿ ಪುನರೂರರ ಪಂಚೆ ಎಳೆದವರು ಯಾರು??

ಪುರೋಹಿತಶಾಹಿ, ಪಾಳೇಗಾರರ ರಾಜ್ಯ



ಕಂಡಹಾಗೆ

ಬಿಜೆಪಿ ಎಂಬ ಪುರೋಹಿತಶಾಹಿಗಳ ಪಕ್ಷ ಮತ್ತು ಜಾತ್ಯತೀತ ಜನತಾದಳವೆಂಬ ಪಾಳೇಗಾರರ ಪಕ್ಷ ಜೊತೆಗೂಡಿ ಅಧಿಕಾರ ಹಿಡಿದರೆ ಮಹಿಳೆಯರು ರಾತ್ರಿ ಪಾಳಿ ಕೆಲಸ ಮಾಡಬಾರದೆಂಬ ಪುರುಷಾಧಿಪತ್ಯದ ಕಾನೂನು ಜಾರಿಗೆ ಬರುವುದು ಅಚ್ಚರಿ ಇಲ್ಲ.

ಹೇಗಿದ್ದರೂ ಉಪಮುಖ್ಯಮಂತ್ರಿ ಯಡಿಯೂರಪ್ಪನವರ ಸೈದ್ಧಾಂತಿಕ ಪಿತೃವಾದ ಆರ್‌ಎಸ್‌ಎಸ್‌ನ ನಾಯಕ ಸುದರ್ಶನ್ "ಮಹಿಳೆಯರಿಗೆ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ಉನ್ನತ ಶಿಕ್ಷಣಗಳ ಅಗತ್ಯವಿಲ್ಲ. ಅವರಿಗೆ ತಮ್ಮ ಪತಿಯನ್ನು ಸಂತೃಪ್ತಗೊಳಿಸುವುದು, ಮಕ್ಕಳನ್ನು ಬೆಳೆಸುವುದು ಹೇಗೆಂದು ಗೊತ್ತಿದ್ದರೆ ಸಾಕು. ಅಂತಹ ಶಿಕ್ಷಣ ಮಾತ್ರ ಮಹಿಳೆಯರಿಗೆ ಅಗತ್ಯ" ಎಂದು ಫರ್ಮಾನು ಹೊರಡಿಸಿ ಅದೆಷ್ಟೋ ದಿನಗಳಾಗಿವೆ. ಅವರ ಈ ಸಿದ್ಧಾಂತವನ್ನು ಒಪ್ಪಿಕೊಂಡಿರುವ ಚೆಡ್ಡಿಗಳು "ಮಹಿಳೆಯರು ರಾತ್ರಿ ಪಾಳಿ ಕೆಲಸ ಮಾಡುವುದು ಭಾರತೀಯ ಸಂಸ್ಕೃತಿಯಲ್ಲ. ಹಾಗೆ ಕೆಲಸ ಮಾಡುವುದೂ ಅವರಿಗೆ ಸುರಕ್ಷಿತವಲ್ಲ. ಆದ್ದರಿಂದ ಅವರು ಮನೆಯಲ್ಲೇ ಇರಲಿ" ಎಂಬ ಮನೋಭಾವವನ್ನು ಹೊಂದಿದ್ದಾರೆ.

ಇನ್ನು ಜಾತ್ಯತೀತ ಪಕ್ಷದ ನಾಯಕನಾಗಿದ್ದರೂ ಜಾತ್ಯತೀತತೆ ಎಂಬ ಪದದ ಅರ್ಥ ಗೊತ್ತಿರದ ಮುಖ್ಯ ಮಂತ್ರಿ ಕುಮಾರಸ್ವಾಮಿಯಂತೂ ಅಪ್ಪಟ ಪಾಳೇಗಾರ ಸಂಸ್ಕೃತಿಯವರು. ತಾನೇ ಸ್ವತಃ ಕುಂಟುತ್ತಾ ಕಾಲೇಜು ಡಿಗ್ರಿ ಪಡೆದರೂ ತನ್ನ ಇಂಜಿನಿಯರ್ ಮಡದಿ ಅನಿತಾರನ್ನು ತಮ್ಮ ಮನೆಯಲ್ಲೇ ಕೂಡಿ ಹಾಕಿದ ವ್ಯಕ್ತಿ ಈತ!

ಹೋಗಲಿ ರಾತ್ರಿಪಾಳಿ ಇರಲಿ, ಹೊರಗೆ ಕೆಲಸ ಮಾಡದೇ ಮನೆಯಲ್ಲೇ ಉಳಿದ ಅನಿತಾ ತನ್ನ ಏಕೈಕ ಪುತ್ರ ನಿಖಿಲ್‌ನನ್ನು ಓರ್ವ ಉತ್ತಮ ಯುವಕನಾಗಿ ರೂಪಿಸುವಲ್ಲಿಯಾದರೂ ಯಶಸ್ವಿಯಾದರೆ? ಈ ಪ್ರಶ್ನೆಗೆ "ನನ್ನ ಬಳಿ ನಾಲ್ಕೈದು ವಿದೇಶಿ ಕಾರ್‌ಗಳಿವೆ" ಎಂದು ಯಾವ ಮುಜುಗರವೂ ಇಲ್ಲದೆ ಹೇಳಿಕೊಳ್ಳುವ 20 ವರ್ಷದ ನಿಖಿಲ್ ಕುಡಿದ ಅಮಲಿನಲ್ಲಿ ಇತ್ತೀಚೆಗೆ ಮಾಡಿಕೊಂಡ ರಾದ್ಧಾಂತವೇ ಉತ್ತರ ನೀಡುತ್ತದೆ.


ಇನ್ನೊಂದು ಕುತೂಹಲಕಾರಿ ಅಂಶವನ್ನು ಗಮನಿಸಿ. 'ಹೊರೆ ಹೊತ್ತ ಮಹಿಳೆ'ಯನ್ನೇ ತಮ್ಮ ಪಕ್ಷದ ಚಿಹ್ನೆಯನ್ನಾಗಿಸಿಕೊಂಡಿರುವ ದೇವೇಗೌಡರ ಪಕ್ಷದ ಸರಕಾರದಲ್ಲಿ ಒಂದೇ ಒಂದು ಮಹಿಳೆಗೆ ಮಂತ್ರಿ ಸ್ಥಾನ ನೀಡಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ತಮ್ಮ ಪುತ್ರ ರತ್ನಗಳನ್ನೂ, ಅಳಿಯರೆಂಬ ವಜ್ರವೈಢೂರ್ಯಗಳನ್ನು ಪೋಷಿಸುತ್ತಲೇ ಬಂದಿರುವ ಗೌಡರು ತಮ್ಮ ಹೆಣ್ಣು ಮಕ್ಕಳಿಗಾಗಲಿ, ಸೊಸೆಯಂದಿರಿಗಾಗಲಿ ಎಲ್ಲೂ ಸ್ಥಾನ, ಮಾನ, ಮರ್ಯಾದೆಗಳನ್ನು ನೀಡಿಲ್ಲ. ಅವರೆಲ್ಲರ ಕೆಲಸವೇನಿದ್ದರೂ ಗೌಡರ ಪುತ್ರರು, ಅಳಿಯಂದಿರು ಗಳಿಸುವ ಅಕ್ರಮ ಸಂಪಾದನೆಯನ್ನು ಹಲವಾರು ಆಸ್ತಿಗಳ ಖರೀದಿಯ ಮೂಲಕ ಸಕ್ರಮಗೊಳಿಸುವುದಷ್ಟೇ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಗೌಡರ ವಂಶದ ಹೆಣ್ಣುಮಕ್ಕಳ ಸ್ಥಿತಿ ಅವರ ಪತಿಗಳು ಮಾಡಿರುವ ಪಾಪದ ಹೊರೆಯನ್ನು ಹೊರುವುದು!

ಇಂತಹ ವಂಶದ 'ಅಧಿಕೃತ' ಕುಡಿ ಕುಮಾರಸ್ವಾಮಿಯ ಸರಕಾರದಿಂದ ಇನ್ನೆಂತಹ ಮಹಿಳಾ ಪರ ನೀತಿ, ನಿಲುವುಗಳನ್ನು ನಿರೀಕ್ಷಿಸಲು ಸಾಧ್ಯ?

ಅಂದಹಾಗೆ ಕುಮಾರಸ್ವಾಮಿ ಇತ್ತೀಚೆಗೆ ಮೈಸೂರಿನ ಮುಕ್ತ ವಿ.ವಿ.ಯ ಕುಲಪತಿ ಸುಧಾರಾವ್‌ರವರ ಮುಂದೆ "ಹೆಂಗಸಾದ ನೀನು ಅಕ್ರಮವಾಗಿ ಸೇರಿಸಿಕೊಂಡಿರುವ ಹಂಗಾಮಿ ನೌಕರರ ಸೇವೆಯನ್ನು ಸಕ್ರಮಗೊಳಿಸು" ಎಂದು ಕಿಡಿಕಾರಿದ್ದಾರೆ. ಇದರರ್ಥ ಮಹಿಳೆಯಾದ ಸುಧಾರಾವ್ ಕೇವಲ ಮಹಿಳೆಯಾಗಿ, ಕರುಳಿನ ಮೂಲಕ ಮಾತ್ರ ಎಲ್ಲದಕ್ಕೂ ಪ್ರತಿಕ್ರಿಯಿಸಬೇಕೆಂಬ ಮನೋಭಾವ ಕುಮಾರಸ್ವಾಮಿಯವರದ್ದು ಎಂಬುದು ಸ್ಪಷ್ಟ.

ಅಲ್ಲ, ಪುರುಷ ಕುಮಾರಸ್ವಾಮಿಗೆ ಇಲ್ಲದ ನೈತಿಕತೆ, ಪುರುಷ ಕುಮಾರಸ್ವಾಮಿಗಿಲ್ಲದ ಕಾನೂನಿನ ಅರಿವು, ಪುರುಷ ಕುಮಾರಸ್ವಾಮಿಗಿಲ್ಲದ ಜವಾಬ್ದಾರಿ ಮಹಿಳೆಯಾದ ಸುಧಾರಾವ್‌ಗೆ ಇದೆ ಎಂದು ಪಾಳೇಗಾರ ಮುಖ್ಯಮಂತ್ರಿಗೆ ಅರ್ಥಮಾಡಿಕೊಡುವವರು ಯಾರು? ತನಗಿಲ್ಲದಿರುವ ಬುದ್ಧಿ ಆಕೆಗೆ ಇದೆ ಎಂದು ತಿಳಿಸುವವರು ಯಾರು?

ಇನ್ನು ಮಹಿಳೆಯರನ್ನು ರಕ್ಷಿಸಲೆಂದೇ ಅವರನ್ನು ರಾತ್ರಿ ಪಾಳಿಯಿಂದ ನಿಷೇಧಿಸಬೇಕೆಂಬ ಕೋ-ಜಾ ಸರಕಾರದ ಯೋಜನೆ ಎಷ್ಟು ಸಮಂಜಸ?



ರಾತ್ರಿ ಪಾಳಿಯಿಂದಾಗಿ ಮಹಿಳೆಯರು ಅನುಭವಿಸುವ ಕಷ್ಟಗಳು ಬದಿಗಿರಲಿ, ದಿನ ಪಾಳಿಯಿಂದಾಗಿ ಅವರು ಎದುರಿಸುವ ಸಮಸ್ಯೆಗಳೂ ಬದಿಗಿರಲಿ, ತಮ್ಮ ಮನೆಯಲ್ಲೇ ವರದಕ್ಷಿಣೆ ಕಾಟಕ್ಕೆ ಬಲಿಯಾಗುವ, ಅತ್ಯಾಚಾರಕ್ಕೆ ತುತ್ತಾಗುವ, ದೈಹಿಕ ಹಲ್ಲೆಗೆ ಗುರಿಯಾಗುವ ಮಹಿಳೆಯರನ್ನು ರಕ್ಷಿಸಲು ನಮ್ಮ ಸರಕಾರಗಳು ಇಲ್ಲಿಯವರೆಗೂ ಕಡಿದು ಕಟ್ಟೆ ಹಾಕಿರುವುದೇನು? ಇಲ್ಲಿಯವರೆಗೂ ವರದಕ್ಷಿಣೆ ಕೊಲೆಗಳಿಗೆ ಕಾರಣರಾದ ಎಷ್ಟು ಜನರಿಗೆ ಜೈಲುಶಿಕ್ಷೆ/ಮರಣದಂಡನೆ ವಿಧಿಸಲಾಗಿದೆ? ಲೈಂಗಿಕ ಅತ್ಯಾಚಾರಗಳಿಗೆ ಅಪ್ರಾಪ್ತ ಬಾಲಕಿಯರನ್ನೂ ಬಲಿ ತೆಗೆದುಕೊಂಡವರಿಗೆ -ಎಂತೆಂತಹ ಶಿಕ್ಷೆ ವಿಧಿಸಲಾಗಿದೆ? ತಮ್ಮ ಮನಬಂದಂತೆ ಮಡದಿಯರನ್ನು ಥಳಿಸುವ ಗಂಡಂದಿರಿಗೆ ಯಾವ ಶಿಕ್ಷೆ ನೀಡಲಾಗಿದೆ?

ಇವತ್ತು ವಿವಿಧ ವೃತ್ತಿಗಳಲ್ಲಿರುವ ಮಹಿಳೆಯರಿಗಿಂತ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಗೃಹಿಣಿಯರು ಇಂತಹ ಅಮಾನುಷ ಕೃತ್ಯಗಳಿಗೆ ಬಲಿಯಾಗುತ್ತಿದ್ದರೂ ಅವರ ಬಗ್ಗೆ ಚಕಾರವೆತ್ತದ ಸರಕಾರ ಮಹಿಳೆಯರ ರಕ್ಷಣೆಗೆಂದೇ ಅವರ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಬಾರದೆಂಬ ಕಾನೂನು ತರಲು ಹೊರಟಿದೆ. ಇದಕ್ಕಿಂತ ಅವಿವೇಕದ ಸಂಗತಿ ಇನ್ನೊಂದಿದೆಯೇ?

ವಾಸ್ತವವಾಗಿ ಮಹಿಳೆ ಸ್ವಾವಲಂಬಿಯಾದಷ್ಟೂ ಆಕೆಗೆ ಭಾರತೀಯ 'ಸಂಸ್ಕೃತಿ'ಗಳಾದ ವರದಕ್ಷಿಣೆ, 'ಯಜಮಾನ'ನ ದಬ್ಬಾಳಿಕೆ, ವಿಧಿ ಇಲ್ಲದೆ ಎಲ್ಲವನ್ನೂ ಸಹಿಸಬೇಕಾದ ಅನಿವಾರ್ಯತೆಗಳಿಂದ ಬಿಡುಗಡೆ ಸಾಧ್ಯ. ಆಕೆ ಹೆಚ್ಚು ಸ್ವಾವಲಂಬಿಯಾದಷ್ಟೂ ಮಹಿಳೆ ಮೇಲೆ ನಡೆಯುವ ದುಷ್ಕೃತ್ಯಗಳಿಗೆ ಕಡಿವಾಣ ಹಾಕಿದಂತೆ.

ಇಲ್ಲೊಂದು ವಿಪರ್ಯಾಸವಿದೆ. ಮಹಿಳೆಯ ಆರ್ಥಿಕ ಬಲವೇ ಆಕೆಗೆ ಶ್ರೀರಕ್ಷೆ ಆಗುವುದೂ ನಮ್ಮ ಪುರುಷ ಪ್ರಧಾನ ಸಂಸ್ಕೃತಿಯ ಒಂದು ಅಂಗ ಮತ್ತು ವ್ಯಂಗ್ಯ. ಏಕೆಂದರೆ ಪಾಳೇಗಾರ ಗೌಡರ ಪುತ್ರರು ಕೋಟ್ಯಂತರ ರೂಪಾಯಿಗಳನ್ನು ಗಳಿಸುತ್ತಾರೆ. ಪುರೋಹಿತಶಾಹಿಗಳ ಗರ್ಭಗುಡಿಯ ಕಾವಲುಗಾರ ಯಡಿಯೂರಪ್ಪನ ಪುತ್ರ ಎಲ್ಲಾ ಕಾಮಗಾರಿಗಳನ್ನು ಪಡೆದು ಅಪಾರ ಸಂಪತ್ತನ್ನು ಸಂಗ್ರಹಿಸುತ್ತಾನೆ. ಆದರೆ ಸಾಧಾರಣ ಕುಟುಂಬಗಳಲ್ಲಿ - ಅದರಲ್ಲೂ ಇವತ್ತಿನ ಪೈಪೋಟಿಯ ಕೊಳ್ಳುಬಾಕು ಸಂಸ್ಕೃತಿಯಲ್ಲಿ - ಪತ್ನಿಯೊಬ್ಬಳು ದುಡಿಯುವ ಆದಾಯವೂ ಆಕೆಯ ನೆಮ್ಮದಿಗೆ ಮುಖ್ಯವೆನಿಸುತ್ತದೆ. ಆದ್ದರಿಂದ ಆಕೆಗೆ ಇಷ್ಟವಿಲ್ಲದಿದ್ದರೂ ಆಕೆ ದಿನನಿತ್ಯ ಕೂಲಿಗೊ, ಕೆಲಸಕ್ಕೊ ಹೋಗುವುದು ಅನಿವಾರ್ಯವಾಗುತ್ತದೆ.

ಇಂತಹ ಸೂಕ್ಷ್ಮಗಳನ್ನು ಅರಿತುಕೊಳ್ಳದ ಸರಕಾರ ಮಾತ್ರ "ಮಹಿಳೆಯರ ರಕ್ಷಣೆಗೆ ಅವರು ಮನೆಯಲ್ಲಿ ಬಂಧಿತರಾಗಿದ್ದರೆ ವಾಸಿ" ಎಂಬ ಸಿದ್ಧಾಂತವನ್ನು ಅನುಸರಿಸುತ್ತದೆ.

ಇವತ್ತು ರಾತ್ರಿಪಾಳಿಯಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗಿಂತಲೂ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ದಿನಪಾಳಿ ವೃತ್ತಿಗಳಲ್ಲಿ ತೊಡಗಿದ್ದಾರೆ. ಉದಾಹರಣೆಗೆ ಬೆಂಗಳೂರೊಂದರಲ್ಲೇ ಲಕ್ಷಾಂತರ ಮಹಿಳೆಯರು ಗಾರ್ಮೆಂಟ್ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದಾರೆ. ಕಾನೂನಿನ ಪ್ರಕಾರ ಆ ಕಾರ್ಖಾನೆಗಳಲ್ಲಿ ಮಕ್ಕಳಿಗೆಂದು ಕ್ರೆಷ್‌ಗಳು, ಸ್ವಚ್ಛ ಮೂತ್ರಾಲಯಗಳು, ಲೈಂಗಿಕ ಶೋಷಣೆ ಬಗ್ಗೆ ದೂರು ನೀಡುವ ಘಟಕಗಳು ಇರಬೇಕು. ಆದರೆ ಬಹಳಷ್ಟು ಕಾರ್ಖಾನೆಗಳಲ್ಲಿ ಇವೆಲ್ಲ ನಾಪತ್ತೆ. ಅಂತಹ ಜಾಗೆಗಳಲ್ಲಿ ಪ್ರತಿನಿತ್ಯ ಮಹಿಳೆಯರು ಅನುಭವಿಸುವ ಪಾಡು ಹೇಳತೀರದು. ಆದರೆ ಇದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದ ಸರಕಾರ ತಾನು ಮಹಿಳೆಯರ ರಕ್ಷಕನೆಂಬಂತೆ ಪೋಸು ಕೊಡುತ್ತಾ ಮಹಿಳೆಯರಿಗೆ ರಾತ್ರಿ ಪಾಳಿಯನ್ನು ನಿಷೇಧಿಸಹೊರಟಿದೆ.

"ಯಾವತ್ತು ನಮ್ಮ ದೇಶದಲ್ಲಿ ಮಹಿಳೆಯೊಬ್ಬಳು ಯಾವ ಭಯ-ಭೀತಿ ಇಲ್ಲದೆ ನಡುರಾತ್ರಿ ಏಕಾಂಗಿಯಾಗಿ ನಡೆದು ಹೋಗುತ್ತಾಳೋ ಅವತ್ತು ನಮ್ಮ ದೇಶಕ್ಕೆ ನಿಜವಾದ ಸ್ವಾತಂತ್ರ್ಯ ಸಿಕ್ಕಿದಂತೆ" ಎಂದು ಮಹಾತ್ಮ ಗಾಂಧಿ ಹೇಳಿದ್ದರು. ಅದರರ್ಥ ಯಾವತ್ತು ಈ ದೇಶದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯವನ್ನೇ ತನ್ನ ಅಸ್ತ್ರವಾಗಿರಿಸಿಕೊಂಡಿರುವ ಪುರೋಹಿತಶಾಹಿ ಮತ್ತು ಪಾಳೇಗಾರ ಸಂಸ್ಕೃತಿ ನಶಿಸುತ್ತದೋ ಅಂದು ಈ ದೇಶಕ್ಕೆ ಸ್ವಾತಂತ್ರ್ಯ ಸಿಗುತ್ತದೆ ಎಂಬುದು. ಆದರೆ ಕಾಲ್‌ಸೆಂಟರ್ ಉದ್ಯೋಗಿ ಪ್ರತಿಭಾ ಎಂಬ ಹೆಣ್ಣುಮಗಳು ನಡುರಾತ್ರಿ ಕೆಲಸಕ್ಕೆ ಹೊರಟು ಅಮಾನುಷವಾದ ಅತ್ಯಾಚಾರಕ್ಕೆ ಗುರಿಯಾಗಿ ಕೊಲೆಯಾದಳು. ಆಕೆಯನ್ನು ಕೊಂದವನನ್ನು ಜೈಲಿಗೆ ಹಾಕಿದ ಸರಕಾರ ವಿಚಾರಣೆಯನ್ನು ನಡೆಸುತ್ತಿದೆ. ಆದರೆ ಆಕೆಗೆ ರಕ್ಷಣೆ ನೀಡುವಲ್ಲಿ ವಿಫಲವಾಗಿದ್ದ ಅಂತರ ರಾಷ್ಟ್ರೀಯ ಕಂಪನಿಯ ನಿರ್ಲಕ್ಷ್ಯದ ಬಗ್ಗೆ ಸರಕಾರ ಎಂದೂ ಚಕಾರವೆತ್ತಿಲ್ಲ. ಇದರಿಂದಲೇ ಮಹಿಳೆಯರ ರಕ್ಷಣೆ ಬಗ್ಗೆ ಸರಕಾರಕ್ಕೆ ನಿಜವಾಗಲೂ ಎಷ್ಟು ಕಾಳಜಿ ಇದೆ ಎಂಬುದು ಗೊತ್ತಾಗುತ್ತದೆ.

ಇವತ್ತು ಸಬಲೀಕರಣಗೊಳ್ಳುತ್ತಿರುವ ಮಹಿಳೆ ಹಲವಾರು ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾಳೆ, ತನ್ನ ಛಾಪು ಮೂಡಿಸುತ್ತಿದ್ದಾಳೆ. ಆಕೆ ಸ್ವಾಭಿಮಾನಿ, ಸ್ವತಂತ್ರಳಾದಷ್ಟೂ ಆಕೆ ಇಡೀ ಸಮಾಜವನ್ನು ಪ್ರಗತಿ ಹೊಂದುವ ದಿಕ್ಕಿನತ್ತ ಸಾಗಿಸುತ್ತಾಳೆ. ಇದರಲ್ಲಿ ಆಕೆಗೆ ಯಾವ ಅಡೆತಡೆಗಳೂ ಇರಬಾರದೆಂದು ಸರಕಾರ ನೋಡಿಕೊಳ್ಳಬೇಕೇ ಹೊರತು ಆಕೆ ಎಲ್ಲಿ, ಯಾಕೆ, ಯಾವಾಗ ಕೆಲಸ ಮಾಡಬೇಕು ಅಥವಾ ಬೇಡ ಎಂದು ನಿರ್ಧರಿಸುವುದಲ್ಲ.

ಈ ಕೋ-ಜಾ ಸರಕಾರಕ್ಕೆ ತನ್ನ ಸಾಮಾಜಿಕ ಜವಾಬ್ದಾರಿ ಗೊತ್ತಿದ್ದರೆ ಇಂತಹದ್ದೊಂದು ಅಸಂಬದ್ಧ ಕಾನೂನನ್ನು ಜಾರಿಗೊಳಿಸಲು ಹೊರಡುತ್ತಿರಲಿಲ್ಲ. ಆದರೆ ಹಿಂದಿನಿಂದಲೂ ಮಹಿಳೆಯರ ಬದುಕಿಗೆ ಕಂಟಕಗಳೇ ಆಗಿರುವ ಪುರೋಹಿತಶಾಹಿ ಮತ್ತು ಪಾಳೇಗಾರ ಸಂಸ್ಕೃತಿಯವರಿಂದ ಮಹಿಳಾಪರ ನಿಲುವನ್ನು ನಿರೀಕ್ಷಿಸುವುದು ಪೆದ್ದುತನವಾಗುತ್ತದಷ್ಟೇ...


* * * * * * * *

ಲಂಕೇಶ್ ಪ್ರಕಾಶನದಿಂದ ಪ್ರಕಟವಾಗಿರುವ ಎಲ್ಲಾ ಪುಸ್ತಕಗಳಿಗೂ ಉತ್ತಮ ಪ್ರತಿಕ್ರಿಯೆ ಬರುತ್ತಿದ್ದು, ಈಗ ಇನ್ನೂ ಹಲವಾರು ಹೊಸ ಪುಸ್ತಕಗಳನ್ನು ಕನ್ನಡ ಓದುಗರಿಗೆ ನೀಡಲು ಸಜ್ಜಾಗಿದ್ದೇವೆ. ಅವುಗಳಲ್ಲಿ ಈ ವಾರವೇ 'ಡಿಸೆಂಬರ್ 13' ಎಂಬ ಅತ್ಯುತ್ತಮ ಪುಸ್ತಕ ಸಿದ್ಧವಾಗಿ ನಿಮ್ಮ ಕೈಸೇರಲಿದೆ.

ಅರುಂಧತಿ ರಾಯ್, ಎ.ಜಿ. ನೂರಾನಿ, ನಂದಿತಾ ಹಕ್ಸರ್, ಎಸ್.ಎ.ಆರ್. ಗಿಲಾನಿ, ಇಂದಿರಾ ಜೈಸಿಂಗ್, ಅಶೋಕ್ ಮಿತ್ರ, ಪ್ರಫುಲ್ ಬಿದ್ವಾಯ್ ಸೇರಿದಂತೆ ಹಲವಾರು ಖ್ಯಾತ ಲೇಖಕರು, ನ್ಯಾಯವಾದಿಗಳು, ಪತ್ರಕರ್ತರು ಬರೆದಿರುವ ಲೇಖನಗಳ ಸಂಗ್ರಹವಾಗಿರುವ ಈ ಪುಸ್ತಕ 2001ರ ಡಿಸೆಂಬರ್ 13ರಂದು ಪಾರ್ಲಿಮೆಂಟಿನ ಮೇಲೆ ನಡೆದ ದಾಳಿಯನ್ನು ಕುರಿತದ್ದು. ಅಫ್ಜಲ್‌ಗುರು ನೇಣು ಶಿಕ್ಷೆಗೆ ಸಂಬಂಧಿಸಿದ ಸುಳ್ಳು ಆರೋಪಗಳ ಬಗ್ಗೆಯೂ ಈ ಪುಸ್ತಕ ಹೇಳುತ್ತದೆ.

ಇಂತಹ ಒಂದು ಮಹತ್ವದ ಪುಸ್ತಕ ಕನ್ನಡಿಗರಿಗೆ ಸಿಗಬೇಕೆಂಬ ಆಶಯದಿಂದ ಸುಕನ್ಯಾ ಕನಾರಳ್ಳಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಓದಿ ನಿಮ್ಮ ಪ್ರತಿಕ್ರಿಯೆ ತಿಳಿಸಿ.

-ಗೌರಿ ಲಂಕೇಶ್



ಕೂಡಲ ಸಂಗಮದೇವನ ಕುಲ ಯಾವುದು?

ಬಸವಣ್ಣನ ಜಾತಿ ಮೂಲ ಕುರಿತು ಬಂಜಗೆರೆ ಜಯಪ್ರಕಾಶ್ ಬರೆದಿರುವ 'ಆನು ದೇವಾ ಹೊರಗಣವನು' ಕೃತಿಯ ಬಗ್ಗೆ ಈಗ ಎಲ್ಲೆಡೆ ಚರ್ಚೆಯಾಗುತ್ತಿದೆ. ಆ ಚರ್ಚೆಯ ಭಾಗವಾಗಿ ನಮ್ಮ ಹಲವಾರು ಓದುಗರು ತಮ್ಮ ಅನಿಸಿಕೆಗಳನ್ನು ಕಳುಹಿಸಿದ್ದಾರೆ. ಅವುಗಳಲ್ಲಿ ಹಲವನ್ನು ಆಯ್ದು ಇಲ್ಲಿ ಪ್ರಕಟಿಸಿದ್ದೇವೆ.

ಜಗಜ್ಯೋತಿ ಬಸವಣ್ಣನು ಬ್ರಾಹ್ಮಣನೇ ಅಥವಾ ಮಾದಿಗನೇ ಎಂಬುವ ಹುಡುಕಾಟದಲ್ಲಿ ಮಹನೀಯರಿಗೆ ಒಂದು ಚಿಕ್ಕ ಪ್ರಶ್ನೆ. ಬಸವಣ್ಣನ ಕುಲವನರಸುವ ಮುನ್ನ ಅವನ ಆರಾಧ್ಯ ದೈವ ಕೂಡಲ ಸಂಗಮದೇವನ ಅರ್ಥಾತ್ ಸಾಕ್ಷಾತ್ ಶಿವ ಯಾವ ಕುಲದವನೆಂದು ಹೇಳಬಲ್ಲಿರಾ? ಇದೆಂತಹ ಪ್ರಶ್ನೆ. ದೇವರಿಗೂ ಕುಲವುಂಟೆ ಎಂದು ಕೇಳುವಿರಾ? ಆಶ್ಚರ್ಯಪಡಬೇಡಿ. ದೇವರು ಕೈಲಾಸದಲ್ಲಿ ಅಥವಾ ವೈಕುಂಠದಲ್ಲಿ ಇರುವವರೆಗೆ ಖಂಡಿತಾ ಅವನಿಗೆ ಕುಲಜಾತಿಗಳಿಲ್ಲ. ಆದರೆ ಅವನು ದುಷ್ಟನಿಗ್ರಹಕಾರ್ಯ, ಧರ್ಮ ಪ್ರತಿಷ್ಠಾಪನೆ ಅಥವಾ ಭಕ್ತರ ಬೇಡಿಕೆ ಪೂರೈಸಲು ಭೂಲೋಕದಲ್ಲಿ ಅದರಲ್ಲಿಯೂ ಪುಣ್ಯಭೂಮಿ ಭಾರತದಲ್ಲಿ ಅವತಾರವೆತ್ತಿದಾಕ್ಷಣ ಅವನಿಗೂ ಜಾತಿ ಮಾಯೆ ಆವರಿಸಿಕೊಳ್ಳುವುದು ಶತಸಿದ್ಧ. ಆದ್ದರಿಂದಲ್ಲವೇ ಪರಶುರಾಮ ಬ್ರಾಹ್ಮಣ, ಶ್ರೀರಾಮ ಕ್ಷತ್ರಿಯ ಮತ್ತು ಶ್ರೀಕೃಷ್ಣ ಯಾದವರೆಂದು ಕರೆಸಿಕೊಂಡದ್ದು. ಇದೇ ರೀತಿಯಲ್ಲಿ ಶಿವನು ಭೂಲೋಕದಲ್ಲಿ ತನ್ನ ಲೀಲೆಗಳನ್ನು ತೋರಿಸಲು ಆವಿರ್ಭವಿಸಿದಾಗ ಅವನಿಗೂ ಒಂದು ಜಾತಿ ಸುತ್ತಿಕೊಂಡಿರುತ್ತದೆಯಲ್ಲವೆ! ಅದು ಯಾವುದೆಂದು ನೋಡೋಣ. ಈ ಹಿಂದೆ ಶಿವ ಅರ್ಜುನನಿಗೆ ಒಬ್ಬ ಕಿರಾತಕನಾಗಿ, ಶಂಕರಾಚಾರ್ಯರಿಗೆ ಚಂಡಾಲನಾಗಿ ಮತ್ತು ಮಹರ್ಷಿ ಶಿವಾನಂದರಿಗೆ ಭಂಗಿಯಾಗಿ ಕಾಣಿಸಿಕೊಂಡಿದ್ದಾನೆ. ಚೆನ್ನಯ್ಯ ಕವಿಯ ಕೆಂಭಾವಿ ಭೋಗಣ್ಣನ ಸಾಂಗತ್ಯದಲ್ಲಿನ ಪ್ರಸ್ತಾಪದಂತೆ "ಹಿರಿಯ ಭಕ್ತರು ನಾವು, ಕುಲವುಳ್ಳ ಭಕ್ತನು ನೀನು ಬೆರೆಸಿ ನಮ್ಮನ್ನು ಮುಟ್ಟಬಹುದೆ? ನಾನು ಅಸ್ಪೃಶ್ಯ ಎಂದು ಶಿವ ತಾನೇ ಭೋಗಣ್ಣನಿಗೆ ಹೇಳುತ್ತಾನೆ. ತದೇಕಚಿತ್ತದಿಂದ ಪಾದರಕ್ಷೆಗಳನ್ನು ಹೊಲೆಯುತ್ತಿದ್ದ ಮಾದಾರ ಧೂಳಯ್ಯನಿಗೆ ಅವನು ಹಿಡಿದಿದ್ದ ಮೆಟ್ಟು ಚುಚ್ಚುವ ಉಳಿಯ ತುದಿಯಲ್ಲಿ ಕಾಣಿಸಿಕೊಳ್ಳುತ್ತಾನೆ. ರಾಷ್ಟ್ರ ಕವಿಗಳಾದ ರವೀಂದ್ರನಾಥ ಟಾಗೂರರ ಮತ್ತು ಕುವೆಂಪುರವರ ಕಲ್ಪನೆಯಲ್ಲಿ ಶಿವ ಒಬ್ಬ ಜಲಗಾರ.

ಭಾರತೀಯ ಸಮಾಜದಲ್ಲಿ ವರ್ಣ/ಜಾತಿ ವಿಂಗಡನೆಗೆ ಬುನಾದಿ ಹಾಕಿ, ಅಂತಹ ವಿಂಗಡನೆ ಧರ್ಮ ಸಮ್ಮತವೆಂದು ರಾಜಮಹಾರಾಜರ ಒಪ್ಪಿಗೆಯನ್ನು ಪಡೆದು, ಸಮಾಜದಲ್ಲಿ ಜಾತಿ ವ್ಯವಸ್ಥೆ ಶಾಶ್ವತವಾಗಿ ನೆಲೆಗೊಳ್ಳುವಂತೆ ಮಾಡಿದವನು ಮನು. ಆ ಮಹಾಶಯ ಪ್ರತಿ ವರ್ಣ/ಜಾತಿಗೂ ನಿರ್ದಿಷ್ಟ ಗುಣಕರ್ಮಗಳನ್ನು ವಿಧಿಸಿ, ತಪ್ಪಿ ನಡೆಯುವುದು ಶಿಕ್ಷಾರ್ಹ ಅಪರಾಧವೆಂದೂ ನಿರೂಪಿಸಿದ್ದನು. ಅದೇ ಮನು ಅಸ್ಪೃಶ್ಯರಿಗೆ/ಚಂಡಾಲರಿಗೆ ಕೊಟ್ಟ ಸ್ಥಾನಮಾನವೇನು? ಚಂಡಾಲನು ಸೊಂಟದಿಂದ ಮೇಲೆ ಮತ್ತು ಮೊಣಕಾಲಿನಿಂದ ಕೆಳಗೆ ಬಟ್ಟೆ ಉಡಕೂಡದು. ಚಿನ್ನಾಭರಣಗಳನ್ನು ತೊಡಬಾರದು. ಒಡೆದ ಮಡಿಕೆಯಲ್ಲಿ ಅನ್ನ ತಿನ್ನಬೇಕು ಮತ್ತು ಸ್ಮಶಾನದಲ್ಲಿ ವಾಸವಿರಬೇಕು ಮೊದಲಾದವುಗಳು. ಈ ಕಟ್ಟುಪಾಡುಗಳನ್ನು ತಪ್ಪದೆ ಪಾಲಿಸುವ ದೇವರು ಮತ್ಯಾರು ಅಲ್ಲ ಸಾಕ್ಷಾತ್ ಶಿವನೇ ಅಲ್ಲವೆ. ಅವನು ಚರ್ಮ ಉಟ್ಟು, ಹಾವಿನ ಆಭರಣ ತೊಟ್ಟು, ಕಪಾಲ ವಿಡಿದು ಭಿಕ್ಷೆ ಬೇಡುತ್ತಾ ಸ್ಮಶಾನದಲ್ಲಿ ವಾಸ ಮಾಡುತ್ತಾನೆ. ಈ ಎಲ್ಲ ಪರಿಗಣನೆಗಳಿಂದ ಕುಲದಲ್ಲಿ ಅವನು ಅಸ್ಪೃಶ್ಯರಿಗೆ ತೀರ ಹತ್ತಿರದವನೆಂದು ಊಹಿಸಬಹುದಲ್ಲವೆ. ದಕ್ಷನ ಯಜ್ಞಕ್ಕೆ ಶಿವನಿಗೆ ಆಹ್ವಾನವಿರುವುದಿಲ್ಲ. ಯಾವ ಯಜ್ಞಯಾಗಾದಿಗಳಲ್ಲಿಯು ಅವನಿಗೆ ಹವಿಸ್ಸನ್ನು ವೈದಿಕರು ಸಮರ್ಪಿಸುತ್ತಾರೆಂಬುದು ಅನುಮಾನದ ಸಂಗತಿ. ಹೀಗಿರುವಾಗ ಶಿವನು ತನ್ನ ಪರಿಚಾರಕರಾದ ಭೂತಗಣಂಗಳೊಡಗೂಡಿ ಯಾವ ಉತ್ತಮ ಜಾತಿ ಜನರೊಡನೆ ಹೇಗೆ ಬೆರೆಯಬಲ್ಲ. ಬಸವಣ್ಣ ಸಹಿತ ಇತರೆ ಕೆಲವು ವಚನಕಾರರು "ಕೊಲುವನೆ ಮಾದಿಗ" ಎಂದು ಹೇಳಿರುವಾಗ ಈ ಸೃಷ್ಟಿಯ ಲಯಕರ್ತನಾದ ಶಿವನನ್ನು ಮಾದಿಗ ಅರ್ಥಾತ್ ಮಹಾಆದಿಗನೆಂದು ಕರೆಯದೆ ವಿಧಿಯಿಲ್ಲವೇಕು? "ಕರ್ಮಜಾತವ ಕಳೆದು ಶ್ರೀ ಗುರುಲಿಂಗವ ಕೊಟ್ಟು ಪುಣ್ಯಜಾತನ ಮಾಡಿದ ಬಳಿಕ ಆತಂಗೆ ಶಿವಕುಲವಲ್ಲದೆ ಬೇರೆ ಮತ್ತೊಂದು ಕುಲವುಂಟೆ?" ಎಂಬುವ ಚನ್ನಬಸವಣ್ಣನವರ ವಚನದಂತೆ ಲಿಂಗದೀಕ್ಷೆ ಪಡೆದ ಬಸವಣ್ಣ ಕೂಡಲ ಸಂಗಮದೇವ/ಶಿವನ ಕುಲ (ಮೇಲ್ಕಂಡಂತೆ) ಮಾದಿಗನಿರಬೇಕೆಂದು ಊಹಿಸಿದರೆ ಅದಕ್ಕೆ ಮುಜುಗರ ಪಡಬೇಕೆ?


ಸರ್ವೇ ಸಾಮಾನ್ಯವಾಗಿ ನಾಗರಿಕ ವಾಸಸ್ಥಳಗಳಿಂದ ದೂರದಲ್ಲಿ ಅಂದರೆ ಊರಹೊರಗಣ ಬೆಟ್ಟ ಗುಡ್ಡಗಳಲ್ಲಿ ಕಟ್ಟಲ್ಪಟ್ಟಿರುವ ದೇವಮಂದಿರಗಳಲ್ಲಿ ತಲೆಯ ಮೇಲೆ ಬಿಲ್ವಪತ್ರೆಗಳನ್ನು ಮೂರುಕಾಲವು ಅಭಿಷೇಕದ ನೀರನ್ನು ಸುರಿಸಿಕೊಳ್ಳುತ್ತಿರುವ ಲಿಂಗ ಸ್ವರೂಪಿ ಶಿವನಿಗೆ ಅಥವಾ ಸ್ಮಶಾನದಲ್ಲಿ ಕುಳಿತು ಬೂದಿಲೇಪನ ಮಾಡಿಕೊಳ್ಳುವವನಿಗೆ, ಶ್ರೀಗಂಧ ಪೂಸಿ, ಒಡವೆ ವಸ್ತ್ರ ತೊಡಿಸಿ, ಜನಿವಾರವನ್ನೂ ಹಾಕಿ ಮಹಾಬ್ರಾಹ್ಮಣನೆಂದು ಕರೆದು ಅವನ ಕುಲದವನಾದ ಬಸವಣ್ಣನು ಬ್ರಾಹ್ಮಣನೇ ಎಂದು ಹೇಳುವ ಉಳ್ಳವರು ಹೇಳಿಕೊಳ್ಳಲಿ. ಅದಕ್ಕೆ ಅಲ್ಲವೆಂಬ ತರ್ಕವೇಕೆ?

ಮುಪ್ಪಿನ ಷಡಕ್ಷರಿಯವರ "ಅವರವರ ದರುಶನಕೆ ಅವರವರ ವೇಷದಲ್ಲಿ ಅವರವರಿಗೆಲ್ಲ ಗುರು ನೀನೊಬ್ಬನೆ. ಅವರವರ ಭಾವಕ್ಕೆ ಅವರವರ ಪೂಜೆಗಂ ಅವರವರಿಗೆಲ್ಲ ದೇವ ನೀನೊಬ್ಬನೆ" ಎಂಬ ಕೀರ್ತನೆಯ ಭಾವಾರ್ಥದಂತೆ ಸಕಲರಿಗೂ ದೈವವಾದ ಶಿವನ ಕುಲದ ಬಸವಣ್ಣನನ್ನು ವಿವಿಧ ಜಾತಿಗಳವರು "ಇವ ನಮ್ಮವ, ಇವ ನಮ್ಮವ" ಎಂದು ಕರೆದುಕೊಂಡು, ಆನಂದದಿಂದ ಅವನ ಆದರ್ಶಗಳನ್ನು ತಾವೂ ಪಾಲಿಸಿ ಜನ್ಮ ಸಾರ್ಥಕ ಮಾಡಿಕೊಳ್ಳುವುದಾದರೆ ಆ ರೀತಿ ಮಾಡಿಕೊಳ್ಳಲಿ. ಅದನ್ನು ಪ್ರಶ್ನಿಸಿ ವಾದ ವಿವಾದಕ್ಕೆ ಇಳಿಯುವವರು ಮರವ ಹತ್ತಿ ಹಣ್ಣು ಸವಿಯದೆ ಎಲೆ ಎಣಿಸುವ ಕಾರ್ಯ ಮಾಡುವವರಾಗುತ್ತಾರೆ. ಅಷ್ಟಕ್ಕೂ ಈ ಹಿಂದೆ ನಡೆದ ಬ್ರಾಹ್ಮಣ ವಿಶಿಷ್ಟರ ಮತ್ತು ಮಾದಿಗತ್ತಿ ಅರುಂಧತಿಯ ವಿವಾಹ, ಜಾತಿ ಸಾಮರಸ್ಯ ಮತ್ತು ಸಮಾನತೆಯ ಪ್ರತೀಕ ಎಂಬುದನ್ನು ಮರೆಯಬಾರದಲ್ಲವೆ.

-ಪ್ರೊ. ಟಿ. ಯಲ್ಲಪ್ಪ ಬೂತಯ್ಯ,
ಮೈಸೂರು

ಡಾ. ಬಂಜಗೆರೆ ಜಯಪ್ರಕಾಶರ "ಆನು ದೇವಾ ಹೊರಗಣವನು...." ಎಂಬ ಸಂಶೋಧನಾ ಕೃತಿ ವಿವಾದದ ಕಿಡಿ ಹೊತ್ತಿಸಿದೆ ಎನ್ನುವುದಕ್ಕಿಂತ ನಮ್ಮ ಸಮಾಜದಲ್ಲಿ ಜಾತಿ ಶ್ರೇಷ್ಠತೆಯ ಪೂರ್ವಗ್ರಹ ಶರಣ ಚಳವಳಿಯಂಥ ಪ್ರಗತಿಪರ, ಕ್ರಾಂತಿಕಾರಕ ಹೋರಾಟಗಳನ್ನೂ ಹೇಗೆ ನುಂಗಿ ನೊರೆಯುತ್ತಿದೆ ಎಂಬುದನ್ನೂ ಅನಾವರಣಗೊಳಿಸಿದೆ. ಒಂದೊಮ್ಮೆ ದಲಿತ ವರ್ಗ ಬಸವಣ್ಣನನ್ನು ತಮ್ಮವನೆಂದು ಅಪ್ಪಿಕೊಂಡರೆ ತಮ್ಮ ಜಾತಿಶ್ರೇಷ್ಠತೆಗೆ ಧಕ್ಕೆಯೊದಗಬಹುದು ಎಂಬ ಭೀತಿಯಿಂದ ಲಿಂಗಾಯತ ಮಠಾಧಿಪತಿಗಳು ಅಸಹನೆಯಿಂದ ಹೂಂಕರಿಸುತ್ತಿದ್ದಾರೆ. ಈಗಾಗಲೇ ತಮ್ಮ ಜಾತಿಶ್ರೇಷ್ಠತೆಯನ್ನು ಕಾಯ್ದುಕೊಳ್ಳಲು ಬಸವಣ್ಣನನ್ನೂ ತೊರೆಯುವ ಮುನ್ಸೂಚನೆಯಾಗಿ ಆತ ವಿರೋಧಿಸಿದ ವೈದಿಕ ಆಚರಣೆಗಳಿಗೆ ತಮ್ಮ ಮಠಮಾನ್ಯಗಳಲ್ಲಿ ಆದ್ಯತೆ ನೀಡುತ್ತಿದ್ದಾರೆ.

ದಲಿತ ದನಿ ಅಂಬೇಡ್ಕರ್ ವೈಚಾರಿಕ ನೆಲೆಯಲ್ಲಿ ವರ್ಣಾಶ್ರಮದ ವಿರುದ್ಧ ಆಂದೋಲನ ಕಟ್ಟಿದರೆ, ಬಸವಣ್ಣ ಆಧ್ಯಾತ್ಮಿಕತೆ ಮತ್ತು ದೇವರುಗಳನ್ನು ಬಳಸಿಕೊಂಡು ಸಮಾಜದಲ್ಲಿ ಕ್ರಾಂತಿ ಮಾಡಿದರು. ಆದ್ದರಿಂದಲೇ ಆಧ್ಯಾತ್ಮಿಕತೆಯ ಮುಸುಕಿನಲ್ಲಿ ಬಸವಣ್ಣ ಮತ್ತು ಆತನ ಶರಣ ಚಳವಳಿಯನ್ನು ಬ್ರಾಹ್ಮಣೀಕರಿಸುವುದು ವೈದಿಕರ ಪಾಲಿಗೆ ಬಹಳ ಸುಲಭವಾಯಿತು. ಬಸವಣ್ಣನಂತೆ ಬುದ್ಧ ಕೂಡಾ ಅಹಿಂಸೆಯನ್ನು ಪ್ರತಿಪಾದಿಸಿದ್ದರೂ ಕೂಡಾ ಬಸವಣ್ಣ ಹಿಂದೂಗಳ ಆರಾಧ್ಯ ದೈವರಾದ ಪರಶಿವನನ್ನು ತನ್ನ ಆರಾಧ್ಯ ದೈವವಾಗಿಸಿಕೊಂಡಿದ್ದರಿಂದ ಆತನ ಶರಣ ಚಳವಳಿ ವೈದಿಕ ಧರ್ಮರೊಂದಿಗೆ ಥಳಕು ಹಾಕಿಕೊಂಡು ಸ್ವಾಹಾರವನ್ನೇ ಜಾತಿಶ್ರೇಷ್ಠತೆಯ ಅಸ್ತ್ರವನ್ನಾಗಿ ಬಳಸಿಕೊಂಡ ವೈದಿಕ ಧರ್ಮದೊಂದಿಗೆ ಸಮಾನಸ್ಥಾನ ಪಡೆಯಲು ಪೈಪೋಟಿ ನಡೆಸಿ ತಕ್ಕಮಟ್ಟಿಗೆ ಯಶಸ್ವಿಯೂ ಆಗಿದೆ. (ವೈದಿಕರ ದೃಷ್ಟಿಯಲ್ಲಿ ಈ ಸಸ್ಯಹಾರಿಗಳು ಈಗಲೂ ಶೂದ್ರರೇ!) ಈವೊಂದು ಅಪ್ಪುಗೆಯಲ್ಲಿ ಸಾಕಷ್ಟು ದೂರ ಕ್ರಮಿಸಿ ಜಾತಿಶ್ರೇಷ್ಠತೆ ಪಡೆದು ಈಗ ಬಸವಣ್ಣ ಮಾದಿಗ ಸಮುದಾಯದವನು ಎಂದ ಕೂಡಲೇ ತಮ್ಮ ಪೂರ್ವಾಶ್ರಮವನ್ನು ನೆನಪಿಸಿಕೊಳ್ಳುವ ಸಂದಿಗ್ಧತೆ ಅಸಹನೀಯವಾಗಿ ಸತ್ಯದ ವಿರುದ್ಧ ದಮನಕಾರಿ ಪ್ರತಿವಾದ ಹೂಡಿದ್ದಾರೆ. ತಳ ಸಮುದಾಯಗಳಲ್ಲಿ ಪುರೋಹಿತಶಾಹಿ ದಬ್ಬಾಳಿಕೆಗಳ ವಿರುದ್ಧ ಜಾಗೃತಿ, ಸಂಚಲನ ಮೂಡಿಸಬೇಕಿದ್ದ ಬಸವ ಧರ್ಮ, ಆ ಸಮುದಾಯಗಳ ಜಾಗೃತ ದನಿಯನ್ನೇ ಮಟ್ಟಹಾಕುವ ಮತ್ತದೇ ವೈದಿಕ ಧರ್ಮವಾಗಿ ರೂಪಾಂತರಗೊಂಡಿದೆ. ಒಂದು ವೇಳೆ ಲಿಂಗಾಯತರು ಬಸವಣ್ಣ ಮಾದಿಗ ಸಮುದಾಯಕ್ಕೆ ಸೇರಿದವನು ಎಂಬ ಸತ್ಯವನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡಿದ್ದೇ ಆದರೆ, ವರ್ಣಾಶ್ರಮ ಜಾತಿ ವ್ಯವಸ್ಥೆಯ ಒಟ್ಟಾರೆ ಸ್ವರೂಪವನ್ನೇ ಬದಲಿಸಿದ ಶರಣ ಚಳವಳಿಯನ್ನು ಇನ್ನಷ್ಟು ತೀವ್ರಗೊಳಿಸಿ ಪಟ್ಟಭದ್ರ ಜಾತಿವ್ಯವಸ್ಥೆಯನ್ನೇ ಬುಡಮೇಲು ಮಾಡಬಹುದಾಗಿದೆ.



ಬಸವಣ್ಣನ ಮಾನವತಾವಾದವೇ ಆತನ ಅನುಯಾಯಿಗಳಿಗೆ ಅನುಕರಣೀಯವಾಗಿದ್ದರೆ "ತಾನು ಹಾರುವನೆಂದರೆ ಕೂಡಲ ಸಂಗಮ ನಗುವನಯ್ಯ...." ಎಂದು ತನ್ನನ್ನೇ ಗೇಲಿ ಮಾಡಿಕೊಂಡ ಬಸವಣ್ಣ ಹೇಗೆ ಜಾತಿ ಶ್ರೇಷ್ಠತೆಯನ್ನು ಹೀಗಳೆದನೋ ಹಾಗೆಯೇ ಆತನ ಅನುಯಾಯಿಗಳು ಮುಕ್ತ ಮನಸ್ಸಿನಿಂದ ಆತನ ಜಾತಿ ಹಿನ್ನೆಲೆ ಬಗ್ಗೆ ಆರೋಗ್ಯಕರ ಚರ್ಚೆ, ಸಂವಾದಗಳನ್ನು ಆಯೋಜಿಸಿ ಸಮಾಜಕ್ಕೆ ಮಾದರಿ ದಾರಿ ದೀಪವಾಗಬೇಕು. ದುರದೃಷ್ಟವಶಾತ್ ಬಸವಣ್ಣನ ಜಂಗಮ ಸ್ವರೂಪಿ ಮಾನವತಾವಾದವು ಆತನೊಂದಿಗೇ ಕಣ್ಮರೆಯಾಗಿ ಈಗ ಕೇವಲ ಸ್ಥಾವರ ಸ್ವರೂಪಿ ಮಠಮಾನ್ಯಗಳಾಗಿ ಮಾತ್ರ ಉಳಿದುಕೊಂಡಿದೆ. ಇಂಥ ದುರಂತ ಘಟಿಸಿದ್ದರಿಂದಲೇ ಬಹುತೇಕ ಮಠಾಧಿಪತಿಗಳಲ್ಲಿ ಜಾತಿ ಪೂರ್ವಗ್ರಹ ಕ್ರೋಢೀಕರಣಗೊಂಡಿದೆ. ನಮ್ಮ ಸಮಾಜದಲ್ಲಿ ಸಂಭವಿಸುವ ಸಕಲ ಕ್ರಾಂತಿಕಾರಕ ಸಂಕ್ರಮಣಗಳಿಗೂ ಮೇಲ್ಜಾತಿಯ ವರಪುರುಷರೇ ಕಾರಣ ಎಂಬ ಸ್ಥಾಪಿತ ಹಿತಾಸಕ್ತಿಗಳ ಹುಸಿ ವಿಚಾರಗಳನ್ನು ವೈಚಾರಿಕ ಪೆಟ್ಟುಗಳಿಂದ ಪುಡಿಗಟ್ಟುವುದು ಬಸವನ ನಿಜ ಅನುಯಾಯಿಗಳ ಆದ್ಯ ಕರ್ತವ್ಯವಾಗಬೇಕು. ಆಗ ಮಾತ್ರ ವರ್ಣಸಂಕರದ ಮೂಲಕ ಸ್ಥಾಪಿತ ಹಿತಾಸಕ್ತಿಗಳನ್ನು ಬುಡಮೇಲು ಮಾಡಿದ ಬಸವಣ್ಣನನ್ನು ನಮ್ಮ ಭವಿಷ್ಯದ ತಲೆಮಾರಿಗೂ ಜೀವಂತವಾಗಿ ಉಳಿಸಿಕೊಳ್ಳಲು ಸಾಧ್ಯ.

ಬಸವಣ್ಣ ಮಾದಿಗ ಸಮುದಾಯಕ್ಕೆ ಸೇರಿದವನೆಂಬ ವಿಚಾರಕ್ಕೆ ತಳಸಮುದಾಯಗಳು ಅತ್ಯುತ್ಸಾಹದ ಪ್ರತಿಕ್ರಿಯೆ ತೋರುವ ಅಗತ್ಯವಿಲ್ಲ. ಆಧ್ಯಾತ್ಮಿಕತೆ ಪ್ರಬಲವಾಗಿದ್ದ ಕಾಲದಲ್ಲಿ ಬಸವಣ್ಣನು ಆಧ್ಯಾತ್ಮವನ್ನು ಬಳಸಿಕೊಂಡೇ ವರ್ಣಸಂಕರ ಚಳವಳಿ ಪ್ರಾರಂಭಿಸಿ, ಆ ಮೂಲಕ ವರ್ಣವ್ಯವಸ್ಥೆಗೆ ಪ್ರಭಲ ಕೊಡಲಿ ಪೆಟ್ಟು ಕೊಟ್ಟು ಪಾಚಿಗಟ್ಟಿದ ಸಮಾಜದಲ್ಲಿ ಹೊಸ ಸಂಕ್ರಮಣಕ್ಕೆ ಕಾರಣೀಭೂತನಾದ. ಈಗಿನ ಆಧುನಿಕ ಸಮಾಜದಲ್ಲಿ ಆಧ್ಯಾತ್ಮವು ಧಾಂಬಿಕ ಆಚರಣೆಯ ಮಟ್ಟದಲ್ಲಿ ಉಳಿದುಕೊಂಡಿದ್ದು, ತಳಸಮುದಾಯವು ಬಸವಣ್ಣನನ್ನು ವೈಚಾರಿಕವಾಗಿ ತನ್ನವನ್ನಾಗಿಸಿಕೊಂಡು, ಆತನ ಕಾಣ್ಕೆಗಳನ್ನು ತಮ್ಮ ಸಮುದಾಯಗಳಲ್ಲಿಯೇ ಜಾರಿಗೆ ತಂದು, ಆ ಸಮುದಾಯಗಳಲ್ಲಿ ಹೊಸ ಸಂಕ್ರಮಣಕ್ಕೆ ನಾಂದಿ ಹಾಡಬೇಕಿದೆ.

-ಸದಾನಂದ ಸಿ. ಗಂಗನಬೀಡು,
ಬೆಂಗಳೂರು

ಡಾ. ಬಂಜಗೆರೆ ಜಯಪ್ರಕಾಶರದು 'ಬಸವಣ್ಣನವರದು ಮಾದಿಗ ಜಾತಿ' ಎಂಬುದು ಏಕಮುಖ ನೋಟ. ಅವರು ಉದ್ದೇಶಪೂರ್ವಕವಾಗಿ ಬಸವಣ್ಣನವರ ಬ್ರಾಹ್ಮಣ ಮೂಲ ಹೇಳುವ ವಚನಗಳನ್ನು ನಿರ್ಲಕ್ಷಿಸುತ್ತಾರೆ. ಅವರದು ವಾದವಾಗುತ್ತದೆಯೇ ವಿನಃ ಶೋಧನೆಯಾಗುವುದಿಲ್ಲ. 'ಕೂಡಲ ಸಂಗಮ ದೇವನು ವಿಪ್ರಕರ್ಮವ ಬಿಡಿಸಿ ಅಶುದ್ಧನ ಶುದ್ಧನ ಮಾಡಿದನಾಗಿ' (ವ. 716) 'ಆನು ಹಾರುವನೆಂದರೆ ಕೂ.ಸಂ. ದೇವ ನಗುವನಯ್ಯ' (ವ. 449). ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ (ವ. 344). ಈ ವಚನಗಳು ಬಸವಣ್ಣನವರದು ಹಾರುವ (ವಿಪ್ರ, ದ್ವಿಜ, ಬ್ರಾಹ್ಮಣ) ಜಾತಿ ಎಂದು ಸ್ಪಷ್ಟವಾಗಿ ನಿರೂಪಿಸುವವು. ವಚನಗಳ ಆಧಾರದಲ್ಲಿ ಬಸವಣ್ಣನವರದು ಬ್ರಾಹ್ಮಣ ಮೂಲವೆಂಬುದು ವಾಸ್ತವ ಸತ್ಯ. 'ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ ಸಲಿಗೆವಂತರಾಗಿ ಒಳಗೈದಾರೆ. ಆನುದೇವಾ ಹೊರಗಣವನು ಸಂಬೋಳಿ, ಸಂಬೋಳಿ ಎನ್ನುತ್ತ ಇಂಬಿನಲ್ಲಿ ಇದೇನೆ. ಕೂ.ಸಂ. ದೇವಾ ನಿಮ್ಮ ನಾಮವಿಡಿದ ಅನಾಮಿಕ ನಾನು (ವ. 934) ಈ ವಚನದಲ್ಲಿಯ ಸ್ಥಿತಿಯು ಬಸವಣ್ಣನವರಿಗೆ ಅನ್ವಯವಾಗುವುದಿಲ್ಲ. ದಲಿತರ ನೋವೆ ತಮ್ಮ ನೋವು ಎಂಬ ಅನುಭೂತಿಯಿಂದ ನುಡಿದ ನುಡಿಗಳು. ಜಾತಿಯಲ್ಲಿ ಅವರು ದಲಿತರಿಗಿಂತ ಭಿನ್ನ ಎಂದು ಧ್ವನಿಸುವುದು.

'ಮಾದಾರನ ಮಗ ನಾನಯ್ಯ' (ವ. 348) ಅಪ್ಪನು ಡೋಹರ ಕಕ್ಕಯ್ಯನಾಗಿ ಮುತ್ತಯ್ಯ ಚನ್ನಯ್ಯನಾದರೆ, ಆನು ಬದುಕೆನೆ! (ವ. 343) 'ಅಪ್ಪನು ನಮ್ಮ ಮಾದಾರ ಚನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ, ಚಿಕ್ಕಯ್ಯ ನೆಮ್ಮಯ್ಯ ಕಾಣಯ್ಯ ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ' (ವ. 349) 'ಹಿರಿಯಯ್ಯ ಶ್ವಪಚಯ್ಯ, ಕಿರಿಯಯ್ಯ ಡೋಹರಕಕ್ಕಯ್ಯ, ಅಯ್ಯಗಳ ಅಯ್ಯ ನಮ್ಮ ಮಾದಾರ ಚನ್ನಯ್ಯ'. (ವ. 351) ಮೇಲುನೋಟಕ್ಕೆ ಇವು ಬಸವಣ್ಣನವರು ಶರಣರನ್ನು ಅದರಲ್ಲಿಯೂ ದಲಿತ ಶರಣರನ್ನು 'ಅಪ್ಪ ಮುತ್ತಯ್ಯ ಬೊಪ್ಪಯ್ಯ ಅಯ್ಯ ಅಣ್ಣ ಹಿರಿಯಯ್ಯ ಕಿರಿಯಯ್ಯ ಅಯ್ಯಗಳ ಅಯ್ಯ ಮಾದಾರನ ಮಗ ನಾನಯ್ಯ' ಎಂದು ಕರೆದುದು ವಾಸ್ತವ ಸತ್ಯವಲ್ಲ, ಭಾವ(ನಾತ್ಮಕ) ಸತ್ಯ. ವಾಸ್ತವ ಸತ್ಯ ಚರಿತ್ರೆಗೆ, ಭಾವಸತ್ಯ ಭಾವನೆಗಳಿಗೆ ಸಂಬಂಧಪಟ್ಟವೆ. ಭಾವಸತ್ಯಗಳನ್ನು ವಾಸ್ತವ ಸತ್ಯಗಳೆಂದು ಬಿಂಬಿಸುವ ಪ್ರಯತ್ನವಿಲ್ಲಿದೆ.

ಬಸವಣ್ಣನವರು ಹಾರುವ/ವಿಪ್ರವೆಂಬುದನ್ನು ಗಣನೆಗೆ ತಾರದ, ಅವರು ಮಾದಿಗ ಎಂಬ ಭಾವಸತ್ಯಗಳಿಂದ ಕೂಡಿದ ಡಾ. ಬಂಜಗೆರೆ ಜಯಪ್ರಕಾಶರವರ ನಿರೂಪಣೆಯು ಕುತೂಹಲಕಾರಿಯಾಗಬಲ್ಲದೇ ವಿನಃ ಅಂಗೀಕಾರಗೊಳ್ಳುವಂಥಹದಲ್ಲ. ಇವರು ಹೇಳುವುದು ವಾಸ್ತವವಿರಬಹುದೆಂದು ಆರಂಭದ ಕ್ಷಣಗಳಲ್ಲಿ ಅನಿಸಬಹುದಾದರೂ, ನಿಧಾನವಾಗಿ ಚಿಂತನೆ ಮಾಡುತ್ತ ಹೋದಂತೆ ಇವು ಅಂಗೀಕಾರಗೊಳ್ಳುವಂತಹವಲ್ಲ ಎಂದೆನಿಸುವವು.

-ಶಂಕರ ಪಡಸ, ಗದಗ

ಬಸವಣ್ಣನು ಬ್ರಾಹ್ಮಣನೋ, ಪಂಚಮನೋ ಏನೋ ಇರಲಿ 800 ವರ್ಷಗಳಾದರೂ, ಮಾನವ ಕಲ್ಯಾಣಕ್ಕಾಗಿ ಅವರು ಕೈಗೊಂಡ ಕಾರ್ಯಗಳು ಎಲ್ಲಾ ದೇಶಕ್ಕೂ, ಎಲ್ಲಾ ಕಾಲಕ್ಕೂ ಅನುಕರಣೀಯ. ಅವರ ತತ್ವಗಳಲ್ಲಿನ ಸರಳತೆ, ಸಕಲ ಜೀವಿಗಳಲ್ಲೂ ಅವರಿಗಿದ್ದ ಅನುಕಂಪ, ಇಂತಹ ಸಂದೇಶವಿರುವುದರಿಂದಲೇ ಈ ಧರ್ಮ ಇಂದಿಗೂ ಜೀವಂತವಾಗಿರುವುದು.

ಬಸವಣ್ಣನ ಜೀವನಕ್ಕೆ ಸಂಬಂಧಿಸಿದ ಹಲವಾರು ಅಂಶಗಳಲ್ಲಿ ಕೃತಿಕಾರರಲ್ಲಿ ಒಮ್ಮತವಿಲ್ಲ. ಬಸವಣ್ಣನ ಜನನ, ತಂದೆ ತಾಯಿಗಳು, ಉಪನಯನ, ವಿವಾಹ, ಬಿಜ್ಜಳನಲ್ಲಿ ಕರಣಿಕವೃತ್ತಿ ಮಂತ್ರಿ ಪದವಿ, ಕಪ್ಪಡಿ ಸಂಗಮಕ್ಕೆ ಪ್ರಯಾಣ, ಬಿಜ್ಜಳನ ವಧೆ, ಹೀಗೆ ಪ್ರಮುಖ ಘಟನೆಗಳನ್ನು ಹಲವು ತೆರನಾಗಿ ಚಿತ್ರಿಸಿದ್ದಾರೆ. ಬಸವೇಶ್ವರರು ಜೀವಿಸಿದ್ದು ಕೇವಲ 36 ವರ್ಷ. ಈ ಅಲ್ಪಾವಧಿಯಲ್ಲಿ ಅವರ ಸಾಧನೆ ಅಗಾಧ. ಅನುಪಮ.


12 ನೇ ಶತಮಾನದಲ್ಲಿ ಅಹಿಂಸಾ ಪ್ರಧಾನವಾದ ಜೈನಮತವಾಗಲಿ, ಜ್ಞಾನ ಪ್ರಧಾನವಾದ ಬೌದ್ಧ ಮತವಾಗಲಿ ವೈದಿಕಧರ್ಮದ ಮುಂದೆ ಸೆಟೆದು ನಿಲ್ಲಲಾಗಲಿಲ್ಲ. ಜೈನ, ಬೌದ್ಧ ಮತಗಳ ಪ್ರಭಾವ ಕಡಿಮೆಯಾಗಿ ವೈದಿಕ ಮತವು ಜನತೆಗೆ ಕಗ್ಗಂಟಾದಾಗ ಬಸವಣ್ಣನವರು ವರ್ಣಾಶ್ರಮ ಧರ್ಮಗಳ 'ಆವರಣ'ದಲ್ಲಿ ಸಿಲುಕಿದ್ದ ವೀರಶೈವ ಧರ್ಮವನ್ನು ಪುನರುಜ್ಜೀವನಗೊಳಿಸಿದರು. ಆಗಿನ ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ರಂಗಗಳಲ್ಲಿ ನವೋದಯವನ್ನುಂಟು ಮಾಡಿದರು.

ಕಲ್ಯಾಣದಲ್ಲಿ ಅನುಭವ ಮಂಟಪವೆಂಬ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿ ಜಟಿಲ ವೇದೋಪನಿಷತ್ತುಗಳ 'ರಹಸ್ಯ'ವನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ಅಚ್ಚಗನ್ನಡದಲ್ಲಿ ಹೇಳಿಕೊಟ್ಟರು.

ಆಧ್ಯಾತ್ಮಿಕ ಮಾರ್ಗವನ್ನು ಸರಳೀಕರಿಸಿದ ಮಾರ್ಗದರ್ಶಕ ಬಸವಣ್ಣನವರ ಬಗ್ಗೆ ಕಾಲ ಕಳೆದಂತೆಲ್ಲಾ ಪವಾಡಗಳನ್ನು ಅಂಟಿಸಿ ಮಾನವತ್ವವನ್ನು ಮೀರಿಸಿ ದೈವೀಪಟ್ಟಕ್ಕೆ ಏರಿಸಿಬಿಟ್ಟರು. ಇದೀಗ ಆ ಮಾರ್ಗದರ್ಶಕ ಬಸವಣ್ಣನವರನ್ನೇ ಆರಾಧಿಸುತ್ತಿರುವುದು ಒಂದು ದೊಡ್ಡ ದುರಂತ.

-ರಹಮತ್ ಅಲಿ,
ಮಾಲ್ದಾರೆ

1857ರ ಮಹಾಸಂಗ್ರಾಮ ಮತ್ತು 1947ರ ಮಹಾದ್ರೋಹ!



ಶಿವಸುಂದರ್

ಇದೇ ಮೇ 10ರಂದು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ 150 ವರ್ಷಗಳು ತುಂಬಿತು. ಭಾರತದ ಜನತೆಯ ಸಾಮೂಹಿಕ ಅಭಿಪ್ರಾಯದ ಪ್ರತೀಕವೆಂದು ಹೇಳಲಾಗುವ ಪಾರ್ಲಿಮೆಂಟಿನಲ್ಲಿ ಇದಕ್ಕಾಗಿಯೇ ಒಂದು ಸಭೆಯನ್ನು ಏರ್ಪಡಿಸಲಾಗಿತ್ತು. ಭಾರತವನ್ನು ಬ್ರಿಟಿಷ್ ವಸಾಹತುಶಾಹಿಯಿಂದ ವಿಮೋಚನೆ ಮಾಡಲು ಭಾರತ ಜನತೆ ನಡೆಸಿದ ಮಹಾಸಂಗ್ರಾಮದ ನೆನಪಿನ ಕಾರ್ಯಕ್ರಮಕ್ಕೆ ನಾಯಕತ್ವ ನೀಡಿದ ಜನ ಮಾತ್ರ ಮತ್ತೊಮ್ಮೆ ಈ ದೇಶವನ್ನು ವಸಾಹತುಶಾಹಿಗಳಿಗೆ ಒತ್ತೆ ಇಡುತ್ತಿರುವ ಮನಮೋಹನ ಸಿಂಗ್‌ಗಳು ಮತ್ತು ಅಬ್ದುಲ್ ಕಲಾಂಗಳೇ!!

1799ರಲ್ಲಿ ಟಿಪ್ಪು ಹುತಾತ್ಮನಾದ ನಂತರ ಮತ್ತು 1818ರಲ್ಲಿ ಮರಾಠರ ಸ್ವಯಂಕೃತ ಪತನದೊಂದಿಗೆ ಇಡೀ ಭಾರತ ಬ್ರಿಟಿಷ್ ವಸಾಹತುಶಾಹಿಗಳ ತೆಕ್ಕೆಗೆ ಬಂದಿತು. ಆದರೂ 1799 ಮತ್ತು 1857ರ ನಡುವೆ ಭಾರತದಲ್ಲಿ ನೂರಾರು ಬ್ರಿಟಿಷ್ ವಿರೋಧಿ ಸಶಸ್ತ್ರ ದಂಗೆಗಳು ನಡೆದವು. ಕರ್ನಾಟಕದಲ್ಲೂ ಕಿತ್ತೂರು ಚೆನ್ನಮ್ಮ, ನಗರದ ದಂಗೆ, ಹಲಗಲಿ ಬೇಡರು, ಧೋಂಡಿಯಾ ವಾಘ್, ಸಂಗೊಳ್ಳಿ ರಾಯಣ್ಣನ ಬಂಡಾಯದಂತಹ ಹತ್ತು ಹಲವು ಸಶಸ್ತ್ರ ದಂಗೆಗಳು ಬ್ರಿಟಿಷರ ವಿರುದ್ಧ ನಡೆದವು.

ಆದರೆ ಅವೆಲ್ಲವೂ ಕೇವಲ ಬ್ರಿಟಿಷರು ಕಸಿದುಕೊಂಡ ರಾಜಸತ್ತೆಯನ್ನು ಮರಳಿ ಪಡೆದುಕೊಳ್ಳಲು ರಾಜವಂಶಗಳು ನಡೆಸಿದ ದಂಗೆಯೆಂಬಂತೆ ಸಿನಿಕ ಇತಿಹಾಸಕಾರರು ಚಿತ್ರಿಸುತ್ತಾರೆ. ಹಾಗೆಯೇ ಬ್ರಿಟಿಷ್ ಆಳ್ವಿಕೆಯನ್ನು ಸಹ ಕೇವಲ ರಾಜಕೀಯ ದಬ್ಬಾಳಿಕೆಯೆಂಬಂತೆ ಮಾತ್ರ ಚಿತ್ರಿಸಲು ಪ್ರಯತ್ನಿಸುತ್ತಾರೆ. ಹಾಗೂ ಈಗ ಆ ದಬ್ಬಾಳಿಕೆ ಇಲ್ಲದಿರುವುದರಿಂದ ಈಗಿರುವುದನೇ ಸ್ವಾತಂತ್ರ್ಯವೆಂಬಂತೆ ಚಿತ್ರಿಸುತ್ತಾರೆ. ವಾಸ್ತವವಾಗಿ ಭಾರತ ಜನತೆಗೆ 1947ರಲ್ಲಿ ಮಹಾದ್ರೋಹವಾಗಿದ್ದು ಈ ಕಾರಣದಿಂದಾಗಿಯೇ!

1799ರಲ್ಲಿ ಟಿಪ್ಪು ಹುತಾತ್ಮನಾದ ನಂತರ ಟಿಪ್ಪು ತಂದಿದ್ದ ಎಲ್ಲಾ ರೈತಪರ ನೀತಿಗಳನ್ನು ರದ್ದು ಮಾಡಿ ಮತ್ತೆ ಬ್ರಾಹ್ಮಣೀಯ ಜಮೀನ್ದಾರಿ ಪದ್ಧತಿಯನ್ನು ಬ್ರಿಟಿಷರು ಜಾರಿಗೆ ತಂದರು. ಅದೇರೀತಿ ಸ್ಥಳೀಯ ಆರ್ಥಿಕತೆಯನ್ನು ಆಧರಿಸಿ ಟಿಪ್ಪು ಹುಟ್ಟುಹಾಕಿದ್ದ ವಾಣಿಜ್ಯೋದ್ಯಮವನ್ನು ನಾಶ ಮಾಡಲಾಯಿತು. ಹೀಗಾಗಿ ಟಿಪ್ಪುವಿನ ಕಾಲದಲ್ಲಿ ಸ್ವಲ್ಪ ಮಟ್ಟಿಗೆ ಊಳಿಗಮಾನ್ಯತೆಯಿಂದ ವಿಮೋಚನೆ ಪಡೆದ ರೈತಾಪಿ ಜನತೆ ಬ್ರಿಟಿಷರ ವಿರುದ್ಧ ಸಮರ ಸಾರಿದರು. ಇದರಲ್ಲಿ ಮೈಸೂರು ಅರಸರಂತಹ ಸ್ಥಳೀಯ ರಾಜರು ಬ್ರಿಟಿಷ್ ಆಶ್ರಿತರಾಗಿ ಜನತೆಗೆ ಮೋಸ ಮಾಡಿದರು. ಹೀಗಾಗಿ ಜನತೆಯ ಬಂಡಾಯ ಏಕಕಾಲದಲ್ಲಿ ಬ್ರಿಟಿಷ್ ವಸಾಹತುಶಾಹಿ, ಅವರಿಂದ ಕೃಪಾಪೋಷಿತರಾದ ಹೊಸ ಭೂಮಾಲಿಕ ಶಕ್ತಿಗಳ ವಿರುದ್ಧ ಮತ್ತು ಅವರೊಂದಿಗೆ ಕೈಗೂಡಿಸಿದ ಸ್ಥಳೀಯ ಊಳಿಗಮಾನ್ಯ ಅರಸೊತ್ತಿಗೆಗಳ ವಿರುದ್ಧವೂ ಆಗಿತ್ತು.

ರೈತಾಪಿಯ ದಂಗೆ, ಸಿಪಾಯಿಗಳ ಬಂಡಾಯ

ಅದಕ್ಕೆ ಇದ್ದ ಬಹುದೊಡ್ಡ ಕಾರಣವೆಂದರೆ ಬಂಡಾಯವೆದ್ದ ಸೈನಿಕರೇ ಬಹುಪಾಲು ರೈತಾಪಿಯೇ ಆಗಿದ್ದದ್ದು. ಉದಾಹರಣೆಗೆ ಈ ಸೈನಿಕ ಬಂಡಾಯ ಪ್ರಧಾನವಾಗಿ ಕೇಂದ್ರೀಕೃತಗೊಂಡಿದ್ದ ಮೀರತ್, ಬುಂದೇಲ್‌ಖಂಡ್, ಬಂಗಾಳ, ಔಧ್ ಪ್ರಾಂತ್ಯಗಳ ಸೈನಿಕರು ಅಲ್ಲಿನ ರೈತರೇ ಆಗಿದ್ದರು ಮತ್ತು ಅಲ್ಲಿ ಬ್ರಿಟಿಷರು ರೈತರಿಂದ ತೆರಿಗೆ ಸುಲಿಯುವ ಅತ್ಯಂತ ಕ್ರೂರ ಮಹಲ್‌ವಾರಿ ಪದ್ಧತಿಯನ್ನು ಜಾರಿಗೆ ತಂದಿದ್ದರು. ಇದರಿಂದ ಬ್ರಿಟಿಷರ ತೆರಿಗೆ ಸಂಗ್ರಹ ಕೇವಲ ಹತ್ತು ವರ್ಷಗಳಲ್ಲಿ ದುಪ್ಪಟ್ಟಾಯಿತಂತೆ! ಇದರಿಂದ ರೈತರ ಸಾಲಗಳು ಬೆಳೆದು ತಮ್ಮ ಜಮೀನನ್ನು ಇಡಿಯಾಗಿ ಬಡ್ಡಿ ವ್ಯಾಪಾರಿಗಳಿಗೆ ಒಪ್ಪಿಸಿ ಭಿಕಾರಿಗಳಾಗಿ ಸಾಯುವ ಪರಿಸ್ಥಿತಿ ಬಂದಿತು. ಇದಲ್ಲದೆ ಇಡೀ ಔಧ್ ಪ್ರಾಂತ್ಯದ ರಾಜಸತ್ತೆಗಳನ್ನು ಬ್ರಿಟಿಷ್ ಚಕ್ರಾಧಿಪತ್ಯ ಇಡಿಯಾಗಿ ಕಿತ್ತುಹಾಕಿದ್ದರಿಂದ ಆ ರಾಜಸತ್ತೆಗಳು ಈ ಬಂಡಾಯದಲ್ಲಿ ಸೇರಿಕೊಂಡವು. ಹೀಗೆ ನಂತರದ ದಿನಗಳಲ್ಲಿ ಬ್ರಿಟಿಷರಿಂದ ಅನ್ಯಾಯವಾಗಿ ಪದಚ್ಯುತಗೊಂಡ ಅರಸೊತ್ತಿಗೆಗಳು ಇದರಲ್ಲಿ ಸೇರಿಕೊಂಡಿದ್ದು ನಿಜವಾದರೂ ಆ ಮಹಾ ಸಂಗ್ರಾಮದಲ್ಲಿ ರೈತಾಪಿ ಮತ್ತು ಇತರ ಸಾಮಾನ್ಯ ಜನತೆ ಭಾಗವಹಿಸಿದ್ದಕ್ಕೆ ಕಾರಣ ಅವರ ರಾಜನಿಷ್ಠೆಯೇನಲ್ಲ.

ಇದಲ್ಲದೆ ಭಾರತೀಯ ಸಿಪಾಯಿಗಳನ್ನು ಬ್ರಿಟಿಷ್ ವಸಾಹತುಶಾಹಿ ತನ್ನ ಸಾಮ್ರಾಜ್ಯ ವಿಸ್ತರಣೆಗೆ ಮದ್ದುಗುಂಡುಗಳಂತೆ ಬಳಸಿಕೊಂಡಿತೇ ವಿನಃ ಅವರ ಕ್ಷೇಮ ಲಾಲಭ್ಯಗಳ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳಲಿಲ್ಲ. ಉದಾಹರಣೆಗೆ ಬಂಗಾಳದ ಸೈನ್ಯದಲ್ಲಿ 140000 ಭಾರತ ಸೈನಿಕರಿದ್ದರು ಮತ್ತು ಅವರೆಲ್ಲರೂ 16000 ಬ್ರಿಟಿಷ್ ಅಧಿಕಾರಿಗಳ ಕೆಳಗೆ ಶಾಶ್ವತವಾಗಿ ಕೆಲಸ ಮಾಡಬೇಕಿತ್ತು. 1838-1860ರ ನಡುವೆ ಅವರನ್ನು ಬ್ರಿಟಿಷ್ ಆಫ್ಘನ್ ಯುದ್ಧ, ಪಂಜಾಬ್ ಯುದ್ಧ, ಆಂಗ್ಲೋ-ಬರ್ಮೀಯರ ಯುದ್ಧ, ಚೀನದ ಅಫೀಮು ಯುದ್ಧ, ರಷ್ಯಾದಲ್ಲಿನ ಕ್ರಿಮಿಯನ್ ಯುದ್ಧಗಳಿಗೆ ಕಿಂಚಿತ್ತೂ ವಿರಾಮವಿಲ್ಲದೆ ಬಳಸಿಕೊಂಡಿತ್ತು. ಮತ್ತು ಬದಲಿಗೆ ಯೂರೋಪಿಯನ್ ಅಧಿಕಾರಿಗಳಿಗೆ ಮಾತ್ರ ಬಡ್ತಿ ಅವಕಾಶ ನೀಡಲಾಗಿತ್ತು. ಇವೆಲ್ಲವೂ ಸೈನಿಕರ ಅಸಮಾಧಾನವನ್ನು ಹೆಚ್ಚಿಸುತ್ತಾ ಬಂದಿದ್ದು ಸ್ಫೋಟಕ್ಕೆ ಕಾಯುತ್ತಿತ್ತು.

ಹೀಗಾಗಿ ಸೈನಿಕರ ಅಸಮಾಧಾನಕ್ಕೆ ವಸಾಹತುಶಾಹಿ ವಿರೋಧಿ ಕಾರಣಗಳು ಪ್ರಧಾನವಾಗಿದ್ದವೇ ವಿನಃ ಧಾರ್ಮಿಕ ಕಾರಣಗಳಲ್ಲ ಎನ್ನುವುದು ಸ್ಪಷ್ಟ. ಬಂಡುಕೋರ ರಾಜಕುವರ ಫಿರೋಜ್ ಶಾ ತನ್ನ 1857ರ ಘೋಷಣೆಯಲ್ಲಿ ಸ್ಪಷ್ಟವಾಗಿ ತಿಳಿಸಿದಂತೆ "ಯೂರೋಪಿಯನ್ನರು ತಮ್ಮ ಇಂಗ್ಲಿಷ್ ನೀತಿಯನ್ನು ಇಲ್ಲಿ ಜಾರಿಗೊಳಿಸಿದ್ದರಿಂದ ಇಲ್ಲಿನ ನೇಕಾರರನ್ನು, ಹತ್ತಿ ಬಟ್ಟೆ ಉತ್ಪಾದಕರನ್ನು, ಬಡಗಿಗಳನ್ನು, ಕಮ್ಮಾರರನ್ನು, ಚಮ್ಮಾರರನ್ನು ಮತ್ತಿತರರನ್ನು ಅವರ ಸಾಂಪ್ರದಾಯಿಕ ಉದ್ಯೋಗಗಳಿಂದ ಹೊರಹಾಕಿರುವುದಲ್ಲದೆ ಅವರನ್ನು ಭಿಕ್ಷುಕರನ್ನಾಗಿಸಿದೆ" ಎಂಬ ಕಾರಣವೇ ಸಾಮಾನ್ಯ ಜನರನ್ನು ಬ್ರಿಟಿಷ್ ವಿರೋಧಿ ಸಂಗ್ರಾಮಕ್ಕೆ ಮುನ್ನಡೆಸಿತು.

ವಾಸ್ತವವಾಗಿ ಬ್ರಿಟಿಷ್ ವಸಾಹತುಶಾಹಿಯ ಇಂಥ ಜನವಿರೋಧಿ ನೀತಿಗಳ ವಿರುದ್ಧ ನಡೆಯುತ್ತಿದ್ದ ಇಂಥ ಬಂಡಾಯಗಳು ದೇಶಾದ್ಯಂತ ಸಂಭವಿಸುತ್ತಾ 1857ರಲ್ಲಿ ಭುಗಿಲೆದ್ದ ಮಹಾ ಸಂಗ್ರಾಮಕ್ಕೆ ಮುನ್ನುಡಿಯನ್ನು ಬರೆದವು. ಇದು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ, ದೇಶಾದ್ಯಂತ ರೈತಾಪಿ ಬ್ರಿಟಿಷ್ ವಿರೋಧಿ ಸಂಗ್ರಾಮದಲ್ಲಿ ತೊಡಗಿಕೊಂಡಿದ್ದವು. ಅದರಲ್ಲಿ 1831ರ ಕೋಲ್‌ರ ಬಂಡಾಯ, 1855ರ ಸಂತಾಲರ ಬಂಡಾಯ, 1816ರಿಂದ 1832ರವರೆಗೆ ನಡೆದ ಕಚ್ ಬಂಡಾಯಗಳು ಮಾತ್ರವಲ್ಲದೆ ತಮಿಳುನಾಡಿನ ವೆಲ್ಲೂರಿನಲ್ಲೂ 1806ರಲ್ಲಿ ಸೈನಿಕರು ಬ್ರಿಟಿಷರ ವಿರುದ್ಧ ದಂಗೆಯೆದ್ದಿದ್ದರು. ಅದರಲ್ಲಿ ಅತಿ ಮುಖ್ಯವಾದದ್ದು ಧರ್ಮಾತೀತವಾಗಿ ಈ ಹೋರಾಟದಲ್ಲಿ ಹಿಂದೂ ಮತ್ತು ಮುಸ್ಲಿಂ ರೈತಾಪಿ ಮತ್ತು ನಂತರದ ದಿನಗಳಲ್ಲಿ ಹಿಂದೂ ಮತ್ತು ಮುಸ್ಲಿಂ ಸೈನಿಕರು ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಒಂದಾಗಿದ್ದು, ಇದರ ಅತ್ಯುನ್ನತ ಅಭಿವ್ಯಕ್ತಿಯೇ ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಬಹಾದ್ದೂರ್ ಶಾ ಜಾಫರ್ ಅನ್ನು ಧರ್ಮಾತೀತವಾಗಿ ಎಲ್ಲಾ ರಾಜಸತ್ತೆಗಳು ಮತ್ತು ಜನತೆಯೂ ಭಾರತ ಚಕ್ರವರ್ತಿಯೆಂದು ಒಪ್ಪಿಕೊಂಡಿದ್ದು. ಈ ಕಾರಣಕ್ಕಾಗಿಯೇ ಮನುವಾದಿ ಸಂಘಪರಿವಾರ ಭಾರತದ ಜನತೆಯ ಈ ಮಹಾ ಸಂಗ್ರಾಮವನ್ನು ಪರೋಕ್ಷವಾಗಿ ತಿರಸ್ಕರಿಸುತ್ತಿದೆ.

1947ರ ದ್ರೋಹ-ಮಹಾದ್ರೋಹ

ಆದರೆ 1857ರ ಸಂಗ್ರಾಮದ ಆಶಯಕ್ಕೆ 1947 ಮಹಾದ್ರೋಹವನ್ನೇ ಮಾಡಿತ್ತು, ಏಕೆಂದರೆ 1947 ಭಾರತದ ಆರ್ಥಿಕತೆಯ ಮೇಲೆ ಮತ್ತು ಸಾಂಸ್ಕೃತಿಕ ಮತ್ತು ಸಾಮಾಜಿಕ ಬದುಕಿನ ಮೇಲೆ ಇದ್ದ ವಸಾಹತುಶಾಹಿ ನಿಯಂತ್ರಣ ಮತ್ತು ಶೋಷಣೆಯನ್ನು ಅದು ವಿಮೋಚನೆಗೊಳಿಸಲೇ ಇಲ್ಲ ಮತ್ತು ಅದನ್ನು 1991ರ ನಂತರ ಇನ್ನಷ್ಟು ಹೆಚ್ಚುಗೊಳಿಸಿತು. ಆಗ ಬ್ರಿಟಿಷರ ಕಾರ್ಖಾನೆಗಳಿಗೆ ಕಚ್ಚಾ ವಸ್ತುಗಳನ್ನು ಸರಬರಾಜು ಮಾಡಲು ರೈತರನ್ನು ಒಕ್ಕಲೆಬ್ಬಿಸಿದರೆ ಮತ್ತು ಹೊರಲಾಗದಷ್ಟು ತೆರಿಗೆ ಭಾರ ಹೊರಿಸಿದರೆ ಇವತ್ತು ಮತ್ತೆ ಕಾರ್ಪೊರೇಟ್ ಫಾರ್ಮಿಂಗ್, SEZ, SAZಗಳ ಹೆಸರಲ್ಲಿ ಮತ್ತೆ ವಸಾಹತು ಶೋಷಣೆಯನ್ನು ಮುಂದುವರೆಸಿ ರೈತರ ಬದುಕನ್ನು ಬೀದಿ ಪಾಲು ಮಾಡಲಾಗುತ್ತಿದೆ.

ಆಗ ಬೆಳೆಯುತ್ತಿದ್ದ ಭಾರತದ ಉದ್ಯಮಗಳನ್ನು ಬ್ರಿಟಿಷ್ ಹಿತಾಸಕ್ತಿಗಳಿಗೆ ತಕ್ಕಂತೆ ತೆರಿಗೆ ಹಾಗೂ ತೆರಿಗೆಯೇತರ ಕ್ರೂರ ಪದ್ಧತಿಗಳಿಂದ ವಿನಾಶಕ್ಕೆ ದೂಡಿದಂತೆ ಇವತ್ತು ಜಾಗತೀಕರಣ ಮತ್ತು ಉದಾರೀಕರಣದ ಹೆಸರಿನಲ್ಲಿ ಭಾರತದ ಸಂಘಟಿತ ಮತ್ತು ಅಭಿವೃದ್ಧಿ ಹೊಂದಿದ ಸ್ಥಳೀಯ ಉದ್ಯಮಗಳನ್ನು ಬಡಿಗಾಸಿಗೆ ವಿದೇಶಿ ಕಂಪನಿಗಳಿಗೆ ಮಾರಿಕೊಳ್ಳಲಾಗುತ್ತಿದೆ. ಅಂದು ಭಾರತದ ಸೈನಿಕರನ್ನು ಬ್ರಿಟಿಷ್ ವಿಸ್ತರಣೆಯ ಭಾಗವಾಗಿ ಬಳಸಿಕೊಳ್ಳುತ್ತಿದ್ದಂತೆ ಇವತ್ತಿಗೂ ಭಾರತದ ಸೈನ್ಯ ಅಮೆರಿಕ ಸೈನ್ಯದೊಂದಿಗೆ ಜಂಟಿ ಕವಾಯತು ನಡೆಸುತ್ತಿವೆ ಮತ್ತು ಅಮೆರಿಕ ಸಾಮ್ರಾಜ್ಯಶಾಹಿಯ ಜೂನಿಯರ್ ಪಾರ್ಟನರ್ ಆಗುತ್ತಿವೆ. ಒಟ್ಟಿನಲ್ಲಿ ಭಾರತದ ರೈತಾಪಿ ಹಾಗೂ ಈ ಸಾಮಾನ್ಯ ಜನತೆ ಯಾವ ವಸಾಹತುಶಾಹಿ ಶೋಷಣೆಯ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮ ಹೂಡಿತೋ ಆ ಸಂಗ್ರಾಮಕ್ಕೆ ದ್ರೋಹವಾಗಿದೆ.

ಒಂದು ವೇಳೆ ಮರಾಠ ಮತ್ತು ಸಿಂಧಿಯಾದ ರಾಜ ಸಂಸ್ಥಾನಗಳಂಥ ಕೆಲವು ಸಂಸ್ಥಾನಗಳು ಅಂದು ಬ್ರಿಟಿಷರೊಂದಿಗೆ ಕೈಗೂಡಿಸದಿದ್ದರೆ ಬ್ರಿಟಿಷರು ಅಂದೇ ಭಾರತ ಬಿಟ್ಟು ಓಡಬೇಕಿತ್ತು. ಅಂದಿನ ಗವರ್‌ನರ್ ಜನರಲ್ ಆಗಿದ್ದ ಲಾರ್ಡ್ ಕ್ಯಾನಿಂಗ್ ಹೇಳಿದಂತೆ "ಒಂದು ವೇಳೆ ಸಿಂಧಿಯಾಗಳು ಬಂಡಾಯಗಾರರ ಜೊತೆ ಸೇರಿ ದರೆ ನಾವು ಈಗಲೇ ಈ ದೇಶ ಬಿಟ್ಟು ಹೋಗುತ್ತೇವೆ." "ಈ ರಾಜಸಂಸ್ಥಾನಗಳು ವಾಸ್ತವವಾಗಿ ನಮ್ಮನ್ನು ಈ ಪ್ರವಾಹದಿಂದ ರಕ್ಷಿಸಿದವು. ಇಲ್ಲದಿದ್ದರೆ ನಾವು ಈ ಬಂಡಾಯದಲ್ಲಿ ಕೊಚ್ಚಿಹೋಗುತ್ತಿದ್ದೆವು". ಇವರೇ ಅಂದಿನ ದ್ರೋಹದ ಮುಂಚೂಣಿಯಲ್ಲಿ ಇದ್ದವರು... ಈಗಲೂ ಇರುವವರು! ಇಂದು 1857ರ 150ನೇ ವರ್ಷದ ಆಚರಣೆಯ ಮುಂಚೂಣಿಯಲ್ಲಿ ಇರುವವರು ಮತ್ತು ಭಾರತವನ್ನು ಮತ್ತೆ ನವ ವಸಾಹತುಶಾಹಿಗಳಿಗೆ ಬಲಿ ಮಾಡುತ್ತಿರುವವರು ಇದೇ ಶಕ್ತಿಗಳ ವಾರಸುದಾರರೇ!

1857ರ ಭಾರತೀಯ ಪ್ರಜಾತಂತ್ರ!!

ವಾಸ್ತವವಾಗಿ ಭಾರತದ ಸ್ವಾತಂತ್ರ್ಯ ಸಂಗ್ರಾಮ ನಾವು ಇಂದಿಗೂ ಕಲಿಯಬೇಕಾದ ಬಹಳಷ್ಟು ಪಾಠಗಳನ್ನು ಹೊಂದಿದೆ.

ಈ ಸಂಗ್ರಾಮ ಕೇವಲ ಬ್ರಿಟಿಷ್ ಆಳ್ವಿಕೆಯನ್ನು ನಿರ್ನಾಮ ಮಾಡುವ ಉದ್ದೇಶವನ್ನು ಮಾತ್ರ ಹೊಂದಿರಲಿಲ್ಲ. ಬದಲಿಗೆ ಆ ಶೋಷಕ ಆಳ್ವಿಕೆಯ ಸ್ಥಾನದಲ್ಲಿ ಒಂದು ಭ್ರೂಣರೂಪದ ಪ್ರಜಾಸತ್ತಾತ್ಮಕ ಆಳ್ವಿಕೆಯನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದ್ದವು. ಉದಾಹರಣೆಗೆ ಬಂಡಾಯದ ಆ ದಿನಗಳಲ್ಲಿ ಬ್ರಿಟಿಷ್ ಆಳ್ವಿಕೆಯನ್ನು ಸಂಪೂರ್ಣವಾಗಿ ನಾಶಮಾಡಿ ಆಸ್ಥಾನದಲ್ಲಿ ಹತ್ತು ಜನರಿಂದ ಕೂಡಿದ ಆಡಳಿತ ಮಂಡಳಿಯನ್ನು ಸ್ಥಾಪಿಸಲಾಗುತ್ತಿತ್ತು. ಅದರಲ್ಲಿ ಆರು ಜನ ಸೈನಿಕರಾಗಿದ್ದರೆ ನಾಲ್ವರು ನಾಗರಿಕರಾಗಿರುತ್ತಿದ್ದರು ಮತ್ತು ಅದರಲ್ಲಿ ಹಿಂದೂ ಮತ್ತು ಮುಸ್ಲಿಮರಿಬ್ಬರಿಗೂ ಸಮಾನವಾದ ಪ್ರಾತಿನಿಧ್ಯವಿರುತ್ತಿತ್ತು.

ಈ ಬಂಡಾಯ ಸರ್ಕಾರವು ಸಾಮಾನ್ಯ ಜನರ ಬಳಕೆ ವಸ್ತುಗಳೆಲ್ಲದರ ಮೇಲೆ ತೆರಿಗೆಯನ್ನು ರದ್ದುಪಡಿಸಿದ್ದವು ಮತ್ತು ಕಾಳಸಂತೆಕೋರರಿಗೆ ಶಿಕ್ಷೆಯನ್ನು ಪ್ರಕಟಿಸಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಬ್ರಿಟಿಷರು ಜಾರಿಗೆ ತಂದ ಜಮೀನ್ದಾರಿ ಪದ್ಧತಿಯನ್ನು ರದ್ದು ಪಡಿಸಿ ಉಳುವವನಿಗೇ ಭೂಮಿ ನೀತಿಯನ್ನು ಜಾರಿಗೆ ತಂದಿತ್ತು. ಬಂಡಾಯದಲ್ಲಿ ಭಾಗವಹಿಸಿದ ರಾಜಕುವರರು ಇಷ್ಟು ತೀವ್ರ ಕ್ರಮಗಳಿಗೆ ಮುಂದಾಗದಿದ್ದರೂ ಅವರು ನೀಡಿದ ಕೆಲವು ಘೋಷಣೆಗಳಲ್ಲಿ ಇಡೀ ವ್ಯಾಪಾರವನ್ನು ಭಾರತೀಯರಿಗೆ ಮಾತ್ರ ಮೀಸಲಿಡುವಂತಹ ಹಲವಾರು ಹೇಳಿಕೆಗಳು ಮತ್ತು ಸರ್ಕಾರದ ಎಲ್ಲಾ ವಾಹನಗಳನ್ನು ಜನರು ಬಿಟ್ಟಿಯಾಗಿ ಬಳಸಿಕೊಳ್ಳುವ ಫರ್ಮಾನುಗಳನ್ನು ಹೊಂದಿರುತ್ತಿದ್ದವು. ಮತ್ತೊಂದು ಪ್ರಮುಖ ವಿಷಯವೆಂದರೆ ಈ ಎಲ್ಲಾ ಆದೇಶಗಳು ಹಿಂದಿ ಹಾಗೂ ಉರ್ದು ಎರಡೂ ಭಾಷೆಗಳಲ್ಲಿ ಪ್ರಕಟವಾಗುತ್ತಿದ್ದುದು ಮಾತ್ರವಲ್ಲದೆ ಹಿಂದೂ ಮುಸ್ಲಿಂ ಇಬ್ಬರ ಹೆಸರಿನಲ್ಲೂ ಪ್ರಕಟವಾಗುತ್ತಿತ್ತು.

ಈ ಹೋರಾಟಗಳಿಂದ ಸಾಮಾನ್ಯ ಜನ ಪಾಠ ಕಲಿತರೋ ಇಲ್ಲವೋ. ಅಂದಿನ ವಸಾಹತುಶಾಹಿಗಳು ಮತ್ತು ಇಂದಿನ ಸಾಮ್ರಾಜ್ಯಶಾಹಿಗಳಿಬ್ಬರೂ ಹೆಚ್ಚಿನ ಪಾಠವನ್ನು ಕಲಿತಿದ್ದಾರೆ.

ಹಿಂದೂ ಮುಸ್ಲಿಂ ಐಕ್ಯತೆಯೇಕೆ?

1857ರ ಈ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಸಮಾನ ಶತ್ರುವಾದ ಬ್ರಿಟಿಷ್ ವಸಾಹತುಶಾಹಿ ವಿರೋಧಿ ಹೋರಾಟದಲ್ಲಿ ಸಮಾನ ಬಾಧಿತರಾದ ಹಿಂದೂ ಮುಸ್ಲಿಮರಿಬ್ಬರ ನಡುವೆ ಅಚಲವಾದ ಒಗ್ಗಟ್ಟನ್ನು ಬೆಸೆಯಿತು. ಈ ಒಗ್ಗಟ್ಟು ಹೀಗೇ ಇದ್ದರೆ ತಮ್ಮ ಆಳ್ವಿಕೆ ಮುಂದುವರೆಯಲು ಕಷ್ಟ ಎಂದರಿತಿದ್ದ ಬ್ರಿಟಿಷ್ ವಸಾಹತುಶಾಹಿಗಳು 1857ರಿಂದಾಚೆಗೆ ಹಿಂದೂ ಮುಸ್ಲಿಮರನ್ನು "ಒಡೆದಾಳುವ ನೀತಿ"ಯನ್ನು ಜಾರಿಗೆ ತಂದರು. ಅದರ ಭಾಗವಾಗಿಯೇ 1867ರಲ್ಲಿ ಬಾಬ್ರಿ ಮಸೀದಿಯ ಬಗ್ಗೆ ವಿವಾದಪೂರಿತ ಇತಿಹಾಸವನ್ನು ಹರಿಬಿಟ್ಟರು. ಇಡೀ ಭಾರತದ ಇತಿಹಾಸವನ್ನು ಕೋಮುವಾದಿ ದೃಷ್ಟಿಯಿಂದ ನೋಡುವ ಕ್ರಮವನ್ನು ಪರಿಚಯಿಸಿದರು. ಅದರ ಪರಿಣಾಮವನ್ನು ಈಗಲೂ ಸಾಮಾನ್ಯ ಹಿಂದೂ ಮುಸ್ಲಿಮರಿಬ್ಬರೂ ಅನುಭವಿಸುತ್ತಲೇ ಬರುತ್ತಿದ್ದಾರೆ.

ಜಾಗತೀಕರಣದ ಹೆಸರಿನಲ್ಲಿ ಭಾರತದ ಮೇಲೆ ಅಮೆರಿಕ ನೇತೃತ್ವದ ನವ ವಸಾಹತುಶಾಹಿ ಆಕ್ರಮಣ ಭಾರತದ ಜನತೆಯನ್ನು ಭಿಕಾರಿಗೊಳಿಸುತ್ತಿರುವಾಗಲೇ ಬಡಜನತೆಯನ್ನು ಹಿಂದೂ ಮುಸ್ಲಿಂ ಎಂದು ಒಡೆದಾಳುವ ಮತ್ತು ಒಂದಾಗದಂತೆ ಕೋಮುವಾದಿ ಹಿಂದುತ್ವವಾದಿ ಶಕ್ತಿಗಳೇ ತಡೆಯುತ್ತಿವೆ. ಮತ್ತು ಆ ಮೂಲಕ ನವವಸಾಹತು ಶಕ್ತಿಗಳ ಸಾಮ್ರಾಜ್ಯಶಾಹಿ ಶೋಷಣೆಗೆ ಕುಮ್ಮಕ್ಕಾಗುತ್ತಿವೆ.

ಹೀಗಾಗಿ 1857ರ ಸ್ವಾತಂತ್ರ್ಯ ಸಂಗ್ರಾಮಕ್ಕೇ 1947ರಲ್ಲಿ ಆದ ದ್ರೋಹವನ್ನು ಈಗಲಾದರೂ ಭಾರತದ ಜನತೆ ಮತ್ತೊಂದು ಸ್ವಾತಂತ್ರ್ಯ ಸಂಗ್ರಾಮವನ್ನು ಹೂಡುವ ಮೂಲಕ ಸರಿಪಡಿಸಿಕೊಳ್ಳಬೇಕಿದೆ. ಏಕೆಂದರೆ ಈಗಿರುವ ಸವಾಲು ಸಹಾ 1857ರದ್ದೇ..ಭಾರತದ ಸ್ವಾತಂತ್ರ್ಯ ಸಂಗ್ರಾಮದ್ದು..ಹಿಂದೂ ಮುಸ್ಲಿಂ ಐಕ್ಯತೆಯದ್ದು....ಭಾರತದ ನಿಜವಾದ ಸ್ವಾತಂತ್ರ್ಯದ್ದು. ■

ಚಿತೆಯಲ್ಲಿ ಚಳಿ ಕಾಯಿಸಿಕೊಂಡ ಜಾರಕಿಹೊಳಿ


ಬಲಿಯಾದ ಕಾರ್ಮಿಕ

ಮೊನ್ನೆ ಗೋಕಾಕ್‌ನ ರಿದ್ಧಿ ಸಿದ್ಧಿ ಫ್ಯಾಕ್ಟರಿಯಲ್ಲಿ ಸ್ಫೋಟ ಸಂಭವಿಸಿ ಹದಿಮೂರು ಮಂದಿ ಕಾರ್ಮಿಕರು ಸುಟ್ಟು ಕರಕಲಾದರು. ಸುಮಾರು 20 ಕ್ಕೂ ಹೆಚ್ಚು ಕಾರ್ಮಿಕರು ಶಾಶ್ವತ ಅಂಗವಿಕಲತೆಗೆ ತುತ್ತಾದರು. ಈ ಘಟನೆಯಿಂದ ಯಾರಿಗೆ ಎಷ್ಟು ಲಾಭವಾಯಿತೋ ಗೊತ್ತಿಲ್ಲ. ಆದರೆ ಶಾಸಕ ಜಾರಕಿಹೊಳಿ ಮಾತ್ರ ಸತ್ತ ಕಾರ್ಮಿಕರ ಚಿತೆಯಲ್ಲಿ ಚಳಿಕಾಯಿಸಿಕೊಂಡ ರೀತಿಯನ್ನು ನೋಡಿದರೆ ಎಂಥವರಿಗೂ ಅಸಹ್ಯ ಹುಟ್ಟದೇ ಇರಲಾರದು.

ಮೊನ್ನೆ ಶುಕ್ರವಾರ ಗೋಕಾಕ್‌ನ ರಿದ್ಧಿ ಸಿದ್ಧಿ ಫ್ಯಾಕ್ಟರಿಯ ಬಾಯ್ಲರ್ ಯೂನಿಟ್‌ನಲ್ಲಿ ಸುಮಾರು 45 ಜನ ಕಾರ್ಮಿಕರು ರಾತ್ರಿ ಪಾಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ರಾತ್ರಿ 8.45 ರ ಸುಮಾರಿಗೆ ಬಾಯ್ಲರ್ ಬೆಂಕಿ ಕಾರಿ ಭಾರಿ ಸದ್ದಿನೊಂದಿಗೆ ಸ್ಫೋಟ ಗೊಂಡಿದ್ದೇ ತಡ ಸುತ್ತ ಇದ್ದ ಹತ್ತಾರು ಕಾರ್ಮಿಕರು ಸುಟ್ಟು ಕರಕಲಾಗಿಹೋದರು. ಇತ್ತ ಇಡೀ ಗೋಕಾಕ್ ಪಟ್ಟಣ ಭೂಕಂಪವಾಯಿತೇನೋ ಎನ್ನುವಷ್ಟರ ಮಟ್ಟಿಗೆ ಬೆಚ್ಚಿ ಬಿದ್ದು ಮನೆಯೊಳಗಿದ್ದ ಜನರೆಲ್ಲ ಆತಂಕದಿಂದ ಹೊರಬಂದು ನಿಂತರು. ಅತ್ತ ಸ್ಫೋಟದಲ್ಲಿ ಬದುಕುಳಿದವರನ್ನು ಆಸ್ಪತ್ರೆಗೆ ಸೇರಿಸಿದಾಗ ಅಲ್ಲಿಯೂ ಒಬ್ಬೊಬ್ಬರಾಗಿ ಸತ್ತು ಸಾವಿನ ಸಂಖ್ಯೆ ಹದಿಮೂರಕ್ಕೆ ಏರಿತು. ಅನೇಕ ಜನ ಸುಟ್ಟ ಗಾಯಗಳಿಂದ ಶಾಶ್ವತ ಅಂಗವಿಕಲತೆಗೆ ಒಳಗಾದರು.

ಸ್ಫೋಟಕ್ಕೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಆಗಿದ್ದೇ ಕಾರಣ ಎಂದು ಕಾರ್ಖಾನೆಯ ಇಂಜನಿಯರ್‌ಗಳು ಮಾಮೂಲಿ ಉತ್ತರ ಕೊಟ್ಟು ಕೈ ತೊಳೆದುಕೊಂಡರು. ಈ ಬಗ್ಗೆ ಮುಂಜಾಗ್ರತಾ ಕ್ರಮವಾಗಿ ಏನನ್ನಾದರೂ ಮಾಡಿದ್ದರೆ? ಎಂಬ ಪ್ರಶ್ನೆಯನ್ನು ಯಾರೂ ಕೇಳಲೂ ಇಲ್ಲ, ಅದಕ್ಕೆ ಉತ್ತರವನ್ನು ಯಾರೂ ಹೇಳಲೂ ಇಲ್ಲ, ಯಾಕೆಂದರೆ ಈ ಫ್ಯಾಕ್ಟರಿಗೆ ವಯರಿಂಗ್ ಮಾಡಿದ್ದು 17-18 ವರ್ಷಗಳ ಹಿಂದೆ. ಅಲ್ಲಿಂದ ಹಿಡಿದು ಇಲ್ಲಿಯತನಕ ಒಮ್ಮೆಯೂ ಅದನ್ನು ರಿಪೇರಿ ಮಾಡಿಲ್ಲ, ಕಾರ್ಮಿಕರನ್ನು ಹೇಗೆ ಹಿಂಡಿ ಹಿಪ್ಪೆ ಮಾಡಬೇಕು, ಅದರಿಂದ ಹೇಗೆ ಲಾಭ ಗಳಿಸಬೇಕು ಎಂಬ ಲೆಕ್ಕಾಚಾರದಲ್ಲಿ ನಿಷ್ಣಾತನಾಗಿರುವ ಫ್ಯಾಕ್ಟರಿಯ ಮಾಲೀಕ ಮುಕೇಶ್ ಚೌಧರಿ ಎಂಬ ರಾಜಸ್ಥಾನಿ ಮಾರ್ವಾಡಿಗೆ ಕಾರ್ಮಿಕರ ಸುರಕ್ಷತೆಯ ಬಗ್ಗೆ ಯೋಚಿಸಲು ಪಾಪ ಸಮಯ ಇದ್ದರೆ ತಾನೆ?

ಮೊನ್ನೆ ಈ ದುರ್ಘಟನೆ ನಡೆದಾಗ ಆಡಳಿತ ಮಂಡಳಿ ಮತ್ತು ಪೊಲೀಸರು ನಡೆದುಕೊಂಡ ಅಮಾನವೀಯ ರೀತಿಯನ್ನು ನೋಡಿದರೂ ಇವರ ಲಾಭಬಡುಕತನ ಮತ್ತು ಕಾರ್ಮಿಕರ ಸುರಕ್ಷತೆಯ ಬಗೆಗಿನ ಇವರ ಕಾಳಜಿ ಅರ್ಥವಾಗುತ್ತದೆ. ಸ್ಫೋಟದಲ್ಲಿ ಸುಟ್ಟು ಜೀವನ್ಮರಣದ ಹೋರಾಟದಲ್ಲಿ ನಿರತರಾಗಿ, ನೋವಿನಿಂದ ಬಳಲುತ್ತಿದ್ದ ಕಾರ್ಮಿಕರನ್ನು ಆಸ್ಪತ್ರೆಗೆ ಸಾಗಿಸಲು ಒಂದು ಆಂಬುಲೆನ್ಸ್ ಕೂಡ ಇರಲಿಲ್ಲ, ಅವರನ್ನೆಲ್ಲಾ ಪ್ರಾಣಿಗಳನ್ನು ಸಾಗಿಸಿದಂತೆ ಗೂಡ್ಸ್ ಗಾಡಿಯಲ್ಲಿ ಆಸ್ಪತ್ರೆಗೆ ಸಾಗಿಸಲಾಯಿತು. ಅದೂ ಕೂಡ ಸರಿಯಾದ ಸೌಕರ್ಯಗಳಿಲ್ಲದ ಕಸಾಯಿ ಖಾನೆಯಂತಿರುವ ಆಸ್ಪತ್ರೆಗೆ! ಹೀಗಾಗಿ ನಿಜವಾಗಿ ಸ್ಫೋಟದಲ್ಲಿ ಅರ್ಧ ಜನ ಕಾರ್ಮಿಕರು ಸತ್ತು ಹೋದರೆ, ಉಳಿದರ್ಧ ಕಾರ್ಮಿಕರನ್ನು ಇವರೇ ಆಸ್ಪತ್ರೆಯಲ್ಲಿ ಸಾಯಿಸಿದರು ಎಂದರೆ ತಪ್ಪಾಗಲಾರದು.


ಗೋಕಾಕ್

ಮೃತ್ಯುಕೂಪವಾದ ರಿದ್ದಿ ಸಿದ್ಧಿ ಫ್ಯಾಕ್ಟರಿ

ಸುಮಾರು 17 ವರ್ಷಗಳ ಹಿಂದೆ ಕರ್ನಾಟಕ ಸರ್ಕಾರ ಮತ್ತು ಗ್ಲೂಕೋ ಎಂಬ ಕಂಪೆನಿಯ ಜಂಟಿ ಮಾಲೀಕತ್ವದಲ್ಲಿ ನಡೆಯುತ್ತಿದ್ದ ಈ ಫ್ಯಾಕ್ಟರಿ ಸರ್ಕಾರದ ದಿವ್ಯ ನಿರ್ಲಕ್ಷ್ಯದ ಪರಿಣಾಮವಾಗಿ ರೋಗಗ್ರಸ್ತವಾಗಿ ಹೋಯಿತು. ಅದು ಹೀಗೆ ಅವನತಿಯ ದಾರಿ ಹಿಡಿಯುವುದಕ್ಕೆ ಅವರಲ್ಲಿ ಸೇರಿಕೊಂಡಿದ್ದ ಹೆಗ್ಗಣಗಳೂ ಒಂದಿಷ್ಟು ಕಾರಣ. ನಷ್ಟದಲ್ಲಿದೆ, ರೋಗಗ್ರಸ್ತವಾಗಿದೆ ಎಂಬ ಕಾರಣ ಒಡ್ಡಿ ಸರ್ಕಾರ ಅದನ್ನು ಮಾರಾಟ ಮಾಡಲು ನಿರ್ಧರಿಸಿದಾಗ ರಾಜಸ್ಥಾನದ ಮಾರ್ವಾಡಿ ಮುಕೇಶ್ ಚೌಧರಿ ಎಂಬ ಲಾಭಬಡುಕ ಇದನ್ನು 53 ಕೋಟಿ ರೂಪಾಯಿಗಳಿಗೆ ಖರೀದಿಸಿದ. ತಮಿಳು ನಾಡಿನ ಸೇಲಂ, ಪಾಂಡಿಚೇರಿ, ಗುಜರಾತ್ ಮುಂತಾದ ಕಡೆಗಳಲ್ಲಿ ಕಾರ್ಮಿಕರ ರಕ್ತ-ಬೆವರು ಹೀರಿ ಲಾಭಗಳಿಸಿ ಅನುಭವವಿದ್ದ ಈ ಮಾರ್ವಾಡಿ ಈ ಫ್ಯಾಕ್ಟರಿಯಲ್ಲಿಯೂ ಅದನ್ನು ಶುರುವಿಟ್ಟುಕೊಂಡ.

ಈ ಫ್ಯಾಕ್ಟರಿ ತನ್ನ ಕೈಸೇರಿದ ನಂತರ ಕಳೆದ ಆರು ವರ್ಷಗಳಲ್ಲಿ ಕಾರ್ಮಿಕರನ್ನು ಹೇಗೆಲ್ಲಾ ಶೋಷಿಸಬೇಕೋ, ಏನೆಲ್ಲಾ ಕುತಂತ್ರ ಮಾಡಬೇಕೋ ಅದನ್ನೆಲ್ಲಾ ಮಾಡಿದ. ಕರ್ನಾಟಕದ ಸ್ಥಳೀಯ ಜನರಿಗೆ ಇಲ್ಲಿ ಕೆಲಸ ಕೊಟ್ಟರೆ ಅವರು ತಮ್ಮ ಸ್ಥಳೀಯತೆಯ ಪ್ರಾಬಲ್ಯ ಬಳಸಿಕೊಂಡು ಹೆಚ್ಚಿನ ಸಂಬಳ, ಮೂಲಭೂತ ಸೌಕರ್ಯ ಮುಂತಾದ ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ ಎಂದು ಲೆಕ್ಕ ಹಾಕಿದ ಈತ ಕಾರ್ಖಾನೆಯಲ್ಲಿ ಕೆಲಸ ಮಾಡಲು ರಾಜಸ್ಥಾನ, ಗುಜರಾತ್, ಬಿಹಾರ್‌ಗಳಿಂದ ವಲಸೆ ಬಂದಿದ್ದವರನ್ನೇ ತುಂಬಿಕೊಂಡ. ಹೊರಗಿನಿಂದ ಬಂದ 'ಅತಂತ್ರತೆ'ಯನ್ನೇ ಬಂಡವಾಳ ಮಾಡಿಕೊಂಡು ಅವರನ್ನು ಎಷ್ಟು ಸಾಧ್ಯವೋ ಅಷ್ಟು ಹಿಂಡಿದ. ಕೆಲಸಗಾರರಿಗೆ ಮಾಲೀಕರು ಒದಗಿಸಬೇಕಾದ ಸಮವಸ್ತ್ರ ಕೊಟ್ಟಿಲ್ಲ, ಅಪಾಯದ ಕೆಲಸಗಳಿಗಾಗಿ ಕೊಡಬೇಕಿದ್ದ ಹೆಲ್ಮೆಟ್ ಕೊಟ್ಟಿಲ್ಲ, ಬೂಟುಗಳನ್ನು, ಮಾಸ್ಕ್‌ಗಳನ್ನೂ ಕೊಟ್ಟಿಲ್ಲ. ಅವರಿಗೆ ಇರಲು ಮನೆ ಇಲ್ಲ, ವೈದ್ಯಕೀಯ ಸೌಲಭ್ಯಗಳಿಲ್ಲ. ವಾರದ ರಜೆಯೂ ಇಲ್ಲ, ಅಷ್ಟೇ ಏಕೆ, ಕುಡಿಯಲು ಶುದ್ಧವಾದ ನೀರೂ ಇಲ್ಲ!

ಇಷ್ಟೆಲ್ಲಾ ಒತ್ತಡಗಳ, ಅನಾರೋಗ್ಯಕರ ಪರಿಸರದಲ್ಲಿ ಅವರು ದಿನಕ್ಕೆ 10 ರಿಂದ 12 ಗಂಟೆ ದುಡಿಯಬೇಕು. ಇಷ್ಟಾದರೂ ಅವರಿಗೆ ಸಿಗುವ ಸಂಬಳ ಎಷ್ಟು ಗೊತ್ತೆ? ದಿನಕ್ಕೆ 60 ರೂಪಾಯಿ ಮಾತ್ರ! ಯಾರಾದರೂ ಒಂದು ದಿನ ರಜೆ ಮಾಡಿದರೂ ಆ ದಿನದ 60 ರೂಪಾಯಿ ಕಟ್! ಹೆಚ್ಚುಕಡಿಮೆ ಮಾತನಾಡಿದರೆ ಮತ್ತೆ 10 ರೂಪಾಯಿ ಕಟ್. ಈ ರೀತಿ ಅಮಾನವೀಯವಾಗಿ ಕಾರ್ಮಿಕರನ್ನು ಹಿಂಡಿದ, ಹಿಂಡುತ್ತಿರುವ ಚೌಧರಿ


ಬಾಲಚಂದ್ರ ಜಾರಕಿಹೊಳಿ

ಬೇರೆಬೇರೆ ರಾಜ್ಯಗಳಲ್ಲಿ ಹೊಸಹೊಸ ಫ್ಯಾಕ್ಟರಿಗಳನ್ನು ಖರೀದಿಸದೇ ಇರುತ್ತಾನೆಯೇ? ಈ ಮಾರ್ವಾಡಿ ಸರ್ಕಾರವನ್ನು ವಂಚಿಸುವುದರಲ್ಲಿಯೂ ನಿಷ್ಣಾತ. ರಿದ್ಧಿ ಸಿದ್ಧಿ ಫ್ಯಾಕ್ಟರಿಯಲ್ಲಿ ಸುಮಾರು ಎರಡು ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದರೂ ಈತ ಲೇಬರ್ ಅಕೌಂಟ್‌ನಲ್ಲಿ ತೋರಿಸಿದ್ದು 500 ಕಾರ್ಮಿಕರನ್ನು ಮಾತ್ರ.

ಕಾರ್ಮಿಕರಿಗೆ ಯಾವ ಸೌಕರ್ಯ ಕೊಡದಿರುವುದು, ಕಡಿಮೆ ಕೂಲಿ ಕೊಟ್ಟು ದುಡಿಸಿಕೊಳ್ಳುವುದು ಒಂದೆಡೆಯಾದರೆ, ಇನ್ನೊಂದೆಡೆಗೆ ಈತ ಕಾರ್ಮಿಕರ ಜೀವದ ಸುರಕ್ಷತೆಗೆ ಯಾವ ಕ್ರಮವನ್ನು ಕೈಗೊಂಡಿಲ್ಲ. ಗೋಲ್ಡ್ ಲಿಕ್ವಿಡ್ ತಯಾರಿಕಾ ಘಟಕವಾದ ರಿದ್ಧಿ ಸಿದ್ಧಿ ಫ್ಯಾಕ್ಟರಿಯಲ್ಲಿ ಘಟಕದ ಟೆಕ್ನಾಲಜಿ ಉಸ್ತುವಾರಿ ನೋಡಿಕೊಳ್ಳಲು 25 ಜನ ಇಂಜನಿಯರ್‌ಗಳನ್ನು ನೇಮಿಸಿಕೊಂಡಿದ್ದಾನೆ. ಅವರಿಗೆ ಸಹಾಯಕರಾಗಿ 50 ಜನರಿದ್ದಾರೆ. ಅವರೆಲ್ಲ ಶಿಫ್ಟ್ ಆಧಾರದಲ್ಲಿ ಫ್ಯಾಕ್ಟರಿಯಲ್ಲಿಯೇ ಠಿಕಾಣಿ ಹೂಡಬೇಕು. ಆದರೆ ಅವರು ಫ್ಯಾಕ್ಟರಿಗೆ ಬರುವುದೇ ಅಪರೂಪ. ಮಾಲೀಕನೇ ತಲೆ ಕೆಡಿಸಿಕೊಳ್ಳದ ಮೇಲೆ ಇವರಿಗ್ಯಾಕೆ ಚಿಂತೆ?


ಈ ರಿದ್ಧಿ ಸಿದ್ಧಿ ಫ್ಯಾಕ್ಟರಿಗೆ ಇಂತಹ ದುರ್ಘಟನೆಗಳ ಕೆಟ್ಟ ಇತಿಹಾಸ ಇರುವುದಕ್ಕೂ ಇದೇ ಕಾರಣ. ಒಂದು ವರ್ಷದ ಹಿಂದೆ ಬಾಯ್ಲರ್‌ನಿಂದ ಬರುವ ಸ್ಪಾರ್ಕ್

ಯಾದಗಿರಿಯಲ್ಲಿ ಮುದ್ನಾಳ್‌ರ ಹಾವಳಿ!

ರಾಜಕೀಯವು ಇಂದು ಎಂಥ ಪ್ರಲೋಭನೆಯ ಸಂಗತಿಯಾಗಿದೆಯೆಂದರೆ ಒಂದು ಸಲ ಅದರ ರುಚಿ ಕಂಡ ವ್ಯಕ್ತಿ ತಾನು ಸಾಯುವವರೆಗೆ, ಅದು ತನಗೆ ಕೊಡಮಾಡುವ ಏನಾದರೊಂದು ಹುದ್ದೆಯಲ್ಲಿ ಮುಂದುವರಿಯಬೇಕೆನ್ನುತ್ತಾನೆ. ಒಂದು ವೇಳೆ ಅಕಸ್ಮಾತ್ತಾಗಿ ಅದು ತನ್ನ ಕೈ ತಪ್ಪಿದರೆ ತನ್ನ ಹೆಂಡತಿ, ಮಗ, ಮಗಳು, ಅಳಿಯ ಇದರಲ್ಲಿ ಯಾರಾದರೂ ಆಗಲಿ, ಅವರಿಗೆ ಆ ಯೋಗ್ಯತೆ ಇರಲಿ ಬಿಡಲಿ ಕೊನೆಯ ಪಕ್ಷ ಅವರಾದರೂ ಅದರ ಭೋಗ ಭಾಗ್ಯಗಳನ್ನು ಪಡೆಯುತ್ತಿರಲಿ ಎಂಬ ಹುನ್ನಾರಗಳನ್ನು ಮಾಡಬೇಕೆನ್ನುತ್ತಾನೆ. ಈ ಮಾತಿಗೆ ನಮ್ಮ ಮಾಜಿ ಪ್ರಧಾನಿ ಹರದನಹಳ್ಳಿಯ ದೇವೇಗೌಡರಿಂದಿಡಿದು ಬಿಹಾರದ ಲಾಲೂಪ್ರಸಾದ್ ಯಾದವ್ ವರೆಗೆ ಅನೇಕ ಉದಾಹರಣೆಗಳನ್ನು ಇಲ್ಲಿ ಕೊಡಬಹುದು. ಉಂಡಾಡಿ ಗುಂಡರಂತಿದ್ದ ತನ್ನ ಮಕ್ಕಳಿಬ್ಬರನ್ನು ದೇವೇಗೌಡರು ಮಂತ್ರಿ, ಮುಖ್ಯಮಂತ್ರಿ ಮಾಡಿದರು. ಅಧಿಕಾರ ತನ್ನ ಕೈ ತಪ್ಪಿದ ಮೇಲೆ ಅಡುಗೆ ಮಾಡುವುದಕ್ಕೂ 'ನಾಲಾಯಕ್' ಆದ ತನ್ನ ಹೆಂಡತಿ ರಾಬ್ಡಿದೇವಿಯನ್ನು ರಾಜ್ಯದ ಮುಖ್ಯಮಂತ್ರಿಯನ್ನಾಗಿಸಿ ತಾನೂ ಆಕೆಯ ಹೆಡ್‌ಕುಕ್ಕರ್ ಆಗಿ ಕುಣಿದಾಡುತ್ತಿದ್ದ ಬಿಹಾರದ ಲಾಲೂಪ್ರಸಾದ್ ಯಾದವ್ ಇಂದು ಕೇಂದ್ರ ಸಚಿವ!

ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎನ್ನುವಂತೆ ದೂರದ ದಿಲ್ಲಿ ಬಿಹಾರಗಳಿಂದಿಡಿದು ಹತ್ತಿರದ ಹಳ್ಳಿ ನಗರಗಳಿಗೂ ಈ ಸ್ವಜನಪಕ್ಷಪಾತವೆಂಬ ಪಟ್ಟಿಕಳ್ಳತ್ತ ವ್ಯಾಮೋಹಗಳ ಪಾಪಸ್ಸುಕಳ್ಳಿ ಈಗ ರಾಜ್ಯಾದ್ಯಂತ ಹಬ್ಬಿದ್ದು ನಿಜ. ಇದನ್ನು ನೋಡಬೇಕಾದರೆ ನೀವು ಹೆಚ್ಚು ಪ್ರಯಾಸ ಪಡಬೇಕಾಗಿಲ್ಲ, ನಿಮ್ಮ ಹತ್ತಿರದ ಯಾವುದೇ ರಾಜಕಾರಣಿಯನ್ನು ಪರಾಮರ್ಶಿಸಿ ನೋಡಬಹುದು. ಇದಕ್ಕೆ ಉದಾಹರಣೆ ಎಂಬಂತೆ ಗುಲ್ಬರ್ಗಾ ಜಿಲ್ಲೆಯ ಯಾದಗಿರಿಗೆ ಹೋಗಿ ನೋಡಬಹುದು.

ಅಲ್ಲಿ ವಿಶ್ವನಾಥರೆಡ್ಡಿ ಮುದ್ನಾಳ್ ಎಂಬ ಹಳೆಯ ಕಾಲದ ಲೀಡರ್ ಇದ್ದಾರೆ. ರಾಮಕೃಷ್ಣ ಹೆಗಡೆಯವರ ಬೆಂಬಲಿಗರೆಂದೇ ಗುರುತಿಸಿಕೊಂಡಿದ್ದ ಇವರು ಎಸ್.ಆರ್. ಬೊಮ್ಮಾಯಿಯವರ ಕ್ಯಾಬಿನೆಟ್‌ನಲ್ಲಿ ಪಶು ಸಂಗೋಪನಾ ಸಚಿವರು ಕೂಡಾ ಆಗಿದ್ದರು. ಆದರ್ಶಗಳ ವಿಷಯವಾಗಿ ಅವರು ಬಹಳಷ್ಟು ಮಾತನಾಡುತ್ತಾರೆ. ಸ್ವಜನಪಕ್ಷಪಾತ ಎಂದರೆ ಅವರು ಕನಲಿ ಕೆಂಡಮಂಡಲವಾಗುತ್ತಾರೆ. ಲಂಚಗುಳಿತನ ವಶೀಲಿಬಾಜಿಗಳೆಂದರೆ ಮಾರುದ್ದ ಹಾರಿ ಬೀಳುತ್ತಾರೆ.


ಶಾಸಕ ವೀರಬಸವಂತರೆಡ್ಡಿ

ಆದರೆ....

ಈಗ್ಗೆ ಹತ್ತು ವರ್ಷಗಳ ಹಿಂದೆ ತನ್ನ ಮುದ್ದಿನ ಮಗ ವೆಂಕಟರೆಡ್ಡಿ ಮುದ್ನಾಳ್ ಎಂಬಾತನನ್ನು ಮುನ್ಸಿಪಾಲ್ಟಿಗೆ ಗೆಲ್ಲಿಸಲು ಅಹರ್ನಿಷಿ ಪ್ರಯತ್ನ ಮಾಡಿದರು. ಆಗ ಇವರು ಪ್ರಚಾರಕ್ಕೆ ಇಳಿಬಾರದು ಅಂದುಕೊಂಡಿದ್ದರು. ಒಂದು ವೇಳೆ ಚುನಾವಣೆಯಲ್ಲಿ ನನ್ನ ಮಗ ಗೆದ್ದು, ಪಕ್ಷಕ್ಕೆ ಬಹುಮತ ಬಂದರೆ ವೆಂಕಟರೆಡ್ಡಿಯನ್ನು ನಗರ ಸಭೆಯ ಆಧ್ಯಕ್ಷನನ್ನಾಗಲು ಬಿಡುವುದಿಲ್ಲ ಎಂದು ಹೇಳುತ್ತಿದ್ದರು. ಇವರ ಮಾತನ್ನು ನಂಬಿದ ಮುಸ್ಲಿಂ ಜನಾಂಗ ಸೇರಿದಂತೆ ಬಹುತೇಕ ಎಲ್ಲಾ ಮತದಾರರು ಇವರ ಜನತಾ ದಳ ಪಕ್ಷಕ್ಕೆ ಮತ ಹಾಕಿ ಆಶೀರ್ವದಿಸಿದರು. ಕೊಟ್ಟ ಮಾತು ಉಳಿಸಿಕೊಳ್ಳದ ಮುದ್ನಾಳರು, ಆ ಎಲ್ಲಾ ತತ್ವ, ಸಿದ್ಧಾಂತಗಳನ್ನು ಗಾಳಿಗೆ ತೂರಿ ತನ್ನ ಮಗನನ್ನೇ ಆ ಸೀಟಿಗೆ ಕೂಡಿಸಿದರು.


ಮುದ್ನಾಳರ ಗೋದಾಮು ರಾಜಕಾರಣ

ಇಡೀ ಯಾದಗಿರಿ ತಾಲ್ಲೂಕನ್ನು ಗುತ್ತಿಗೆ ಹಿಡಿದವರಂತೆ ಈಗಲೂ ವರ್ತಿಸುತ್ತಿರುವ ಇವರು ಈ ಹಿಂದೆ ಅಸಿಸ್ಟೆಂಟ್ ಕಮೀಷನರ್ ಆಗಿ ಬಂದಿದ್ದ ದಲಿತ ಅಧಿಕಾರಿ ಕೆ. ಶಿವರಾಮು ಎಂಬುವವರನ್ನು ಗೋದಾಮಿಗೆ ಕರೆಯಿಸಿ ಹೊಡೆದಿದ್ದರು. ತಮ್ಮ 60 ನೇ ಹುಟ್ಟುಹಬ್ಬದ ಅಂಗವಾಗಿ ಹಮ್ಮಿಣಿ ರೂಪದಲ್ಲಿ ಜನರಿಂದ ಬಲವಂತವಾಗಿ ವಂತಿಗೆ ವಸೂಲಿ ಮಾಡಿ ವಾಹನವೊಂದನ್ನು ದೇಣಿಗೆ ರೂಪದಲ್ಲಿ ಖರೀದಿಸಿದ್ದಾರೆ. 'ಮುದ್ನಾಳ್ ಸೀಡ್ಸ್' ಬೀಜದ ಕಂಪನಿಯನ್ನು ಆರಂಭಿಸುವುದಾಗಿ ಹೇಳಿ ಸಾರ್ವಜನಿಕರಿಂದ ಹಣ ವಸೂಲಿ ಮಾಡಿ, ಕಂಪನಿ ಆರಂಭಿಸದೇ ಜನರ ಹಣವನ್ನು ಆಪೋಶನ ಹಾಕಿದ ಪ್ರಚಂಡ ಕೀರ್ತಿ ಇವರಿಗಿದೆ. ವಿಧಾನಸೌಧದ ಹತ್ತಿರ ಪಟಾಕಿ ಸಿಡಿಸಿ ಸುದ್ದಿಯಾಗಿದ್ದ ಗಿರೀಶ್ ಮಟ್ಟಣ್ಣನವರ್ ಎಂಬ ಹುಚ್ಚು ಪ್ಯಾಲಿ ಹುಡುಗನಿಗೆ ಅದ್ಧೂರಿಯಾಗಿ ಸನ್ಮಾನಿಸಿದ ಶ್ರೇಯಸ್ಸು ಕೂಡ ಇವರಿಗಿದೆ.

ಇಂಥ ಗೋಮುಖ ವ್ಯಾಘ್ರನ ಅಣ್ಣ ರಾಚನಗೌಡ ಮುದ್ನಾಳ್‌ರ ಮಗ ಡಾ. ವೀರಬಸವಂತರೆಡ್ಡಿ ಎಂಬುವವರೇ ಈಗಿನ ಯಾದಗಿರಿಯ ಶಾಸಕರು. ವೈದ್ಯಕೀಯ ವೃತ್ತಿಯಲ್ಲಿದ್ದುಕೊಂಡು ಜನಪ್ರಿಯರಾಗಿದ್ದ ವೀರಬಸವಂತರೆಡ್ಡಿ ಈ ಹಿಂದೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಮಾಜಿ ಮಂತ್ರಿ ಡಾ. ಮಲಕರೆಡ್ಡಿಯವರನ್ನು ಸೋಲಿಸುವ ಮೂಲಕ ಬಹಳ ಭರವಸೆ ಮೂಡಿಸಿದ್ದರು. ಆದರೆ ಅವರ ಚಿಕ್ಕಪ್ಪ ವಿಶ್ವನಾಥರೆಡ್ಡಿ ಮುದ್ನಾಳ್ ಹಾಗೂ ಮಗ ವೆಂಕಟರೆಡ್ಡಿ ಮುದ್ನಾಳ್‌ರ ಕಪಿಮುಷ್ಠಿಯಲ್ಲಿ ಸಿಲುಕಿರುವ ಶಾಸಕರು ಇದೀಗ ಯಾದಗಿರಿ ಮತಕ್ಷೇತ್ರಕ್ಕೆ ಭಾರವಾಗಿ ಪರಿಣಮಿಸಿದ್ದಾರೆ.

ವೆಂಕಟರೆಡ್ಡಿಯ ಗೂಂಡಾಗಿರಿ

ಶಾಸಕರ ಅಸಹಾಯಕತೆಯನ್ನು ಸರಿಯಾಗಿಯೇ ಉಪಯೋಗ ಮಾಡಿಕೊಳ್ಳುತ್ತಿರುವ ಮಾಜಿ ಪುರಸಭಾಧ್ಯಕ್ಷ ವೆಂಕಟರೆಡ್ಡಿ ಮುದ್ನಾಳ್ ಇಡೀ ತಾಲ್ಲೂಕನ್ನು ತನ್ನ ಕಂಟ್ರೋಲ್‌ನಲ್ಲಿಟ್ಟುಕೊಂಡು ಶಾಸಕರ ರಿಮೋಟ್ ಕಂಟ್ರೋಲರ್ ಆಗಿದ್ದಾನೆ. ತಾಲ್ಲೂಕಿನ ಯಾವುದೇ ಕೆಲಸ ಕಾರ್ಯಗಳು ಇವನ ಕಣ್ತಪ್ಪಿ ನಡೆಯುವಂತಿಲ್ಲ, ಗ್ರಾಮ ಪಂಚಾಯತಿಯಿಂದಿಡಿದು ತಾಲ್ಲೂಕ್ ಪಂಚಾಯತಿವರೆಗಿನ ಎಲ್ಲಾ ಅಧಿಕಾರಿಗಳು ಇವನ ಅಣತಿಯನ್ನು ಮೀರುವಂತಿಲ್ಲ, ತಾಲ್ಲೂಕಿನ ವಿವಿಧ



ಪೌಡರ್ ಹೊತ್ತಿ ಉರಿದು ಏಳು ಜನರಿಗೆ ಗಂಭೀರವಾದ ಗಾಯಗಳಾಗಿದ್ದವು. ಗಾಯಗಳಾಗಿದ್ದು ಕಾರ್ಮಿಕರಿಗೆ ತಾನೇ, ಮಾಲೀಕ ಮುಖೇಶ್ ಚೌಧರಿಗಲ್ಲವಲ್ಲ ಎಂದು ಯಾರೂ ತಲೆ ಕೆಡಿಸಿಕೊಳ್ಳಲಿಲ್ಲ. ಪೊಲೀಸರು ಚೌಧರಿ ಮೇಲೆ ಕ್ರಿಮಿನಲ್ ಕೇಸು ಜಡಿದ ನಾಟಕವಾಡಿ ಮುಗಿಸಿದರು. ಆ ಘಟನೆಯ ಬಗ್ಗೆ ಜಿಲ್ಲಾಧಿಕಾರಿಯಾಗಿದ್ದ ಶಾಲಿನಿ ರಜನೀಶ್‌ಗೆ ಕೆಲವರು ಮನವಿ ಪತ್ರ ಕೂಡ ಕೊಟ್ಟು ತನಿಖೆ ನಡೆಸಬೇಕೆಂದು ಆಗ್ರಹಿಸಿದ್ದರು. ಶಾಲಿನಿ ರಜನೀಶ್ ಕೂಡ ಉತ್ತರ ಭಾರತದವರು, ಚೌಧರಿ ಮಾರ್ವಾಡಿ ಕೂಡ ಉತ್ತರಭಾರತದವನು. ಮಾರ್ವಾಡಿ ಕೊಟ್ಟ ಪ್ರಸಾದ ತಿಂದು ಜಿಲ್ಲಾಧಿಕಾರಿ ಕೂಡ ಸುಮ್ಮನಾಗಿಬಿಟ್ಟರು. ಇವರೆಲ್ಲ ಸೇರಿ ಇಂದಿನ ದುರ್ಘಟನೆಗೆ ಬುನಾದಿ ತಯಾರು ಮಾಡಿದರು.

ನುಗ್ಗಿ ಬಂದ ಜಾರಕಿಹೊಳಿಗಳು

ಫ್ಯಾಕ್ಟರಿಯ ಸ್ಫೋಟದಲ್ಲಿ ಕಾರ್ಮಿಕರು ಸತ್ತ ಸುದ್ದಿ ಮುಟ್ಟುತ್ತಿದ್ದಂತೆ ಅದನ್ನು ಹೇಗೆ ಬಳಸಿಕೊಳ್ಳಬಹುದೆಂದು ಲೆಕ್ಕಾಚಾರ ಹಾಕುತ್ತಲೇ ನುಗ್ಗಿ ಬಂದವರು ಶಾಸಕ ರಮೇಶ್ ಜಾರಕಿಹೊಳಿ ಮತ್ತು ಸಮಾಜ ಕಲ್ಯಾಣ ಸಚಿವ ಬಾಲಚಂದ್ರ ಜಾರಕಿಹೊಳಿ ಎಂಬ ಸಹೋದರರು. ಚುನಾವಣೆಯ ಸಮಯದಲ್ಲಿ ಖರ್ಚಿಗೆ ಒಂದು ಕಾಸೂ ಕೊಡದಿದ್ದ ಮಾರ್ವಾಡಿಯನ್ನು ಸಿಕ್ಕಿಸಲು, ಆತನಿಂದ ಹಣ ಪೀಕಿಸಲು ಇದೇ ಸಮಯ ಅಂದುಕೊಂಡರಲ್ಲದೇ, ಒಂದಿಷ್ಟು ಪರಿಹಾರ ಕೊಡಿಸಿ ತಾವೂ ಪೋಜು ನೀಡಬಹುದೆಂದು ಲೆಕ್ಕ ಹಾಕಿದರು. ತಕ್ಷಣ ಕಾರ್ಯಪ್ರವೃತ್ತರಾದ ಇವರು ಪೊಲೀಸರನ್ನು ಛೂ ಬಿಟ್ಟು ಮಾಲೀಕ ಮುಖೇಶ್ ಚೌಧರಿ, ಉಪಾಧ್ಯಕ್ಷ ಎಸ್. ಖೋಫ್, ರಾಣಾಸಿಂಹ, ಪ್ರಫುಲ್ಲಕುಮಾರ್ ಮುಂತಾದವರನ್ನು ತಮ್ಮಲ್ಲಿಗೆ ಕರೆಸಿಕೊಂಡು ಡಿಲ್‌ಗೆ ಇಳಿದೇ ಬಿಟ್ಟರು. ದುರ್ಘಟನೆಯಲ್ಲಿ ಸತ್ತವರ ಕುಟುಂಬಕ್ಕೆ ತಲಾ ಎಂಟು ಲಕ್ಷ ಕೊಡಿಸಿ ಪೇಪರುಗಳಿಗೆ, ಟಿವಿಗಳಿಗೆ ಪೋಜು ನೀಡಿದರು. ಒಂದೆಡೆ ಪಬ್ಲಿಸಿಟಿಯೂ ಸಿಕ್ಕಿತು, ಇನ್ನೊಂದೆಡೆ ಮಾರ್ವಾಡಿಯ ಬೆವರೂ ಇಳಿಯಿತು. ಹೇಗಿದೆ ಜಾರಕೀಹೊಳಿಗಳ ತಂತ್ರ?

ಜಾರಕೀಹೊಳಿಗಳ ಈ ಕಾರ್ಯಾಚರಣೆಯ ಹಿಂದೆ ಪಬ್ಲಿಸಿಟಿ ಮತ್ತು ಮಾರ್ವಾಡಿಗೆ ಬೆವರಿಳಿಸುವುದು ಮಾತ್ರವೇ ಕಾರಣವಾಗಿರಲಿಲ್ಲ, ಇನ್ನು ಬೇರೆಬೇರೆ ಲೆಕ್ಕಾಚಾರಗಳಿವೆ. ಮಾರ್ವಾಡಿ ಚೌಧರಿಗೆ ಕಿರಿಕಿರಿ ಮಾಡಿ ಅವನನ್ನು ಇಲ್ಲಿಂದ ಓಡಿಸಿ, ಫ್ಯಾಕ್ಟರಿಯ 100 ಎಕರೆ ಜಮೀನು ಹಾಗೂ 250 ಕೋಟಿ ಬೆಲೆ ಬಾಳುವ ಯೂನಿಟ್ ಎರಡನ್ನೂ ಹೇಗಾದರೂ ಮಾಡಿ ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂಬ ದೂ(ದು)ರಾಲೋಚನೆಯೂ ಜಾರಕಿಹೊಳಿಗಳಿಗಿದೆ.


ಎಂಟು ಲಕ್ಷ ಪರಿಹಾರ ಕೊಡಿಸಿದೆವೆಂದು ಪೋಜು ಕೊಟ್ಟು ಬೀಗುತ್ತಿರುವ ಜಾರಕಿಹೊಳಿಗಳಿಗೆ ಗೋಕಾಕಿನ ಜನ ಒಂದು ಪ್ರಶ್ನೆ ಕೇಳುತ್ತಿದ್ದಾರೆ. ಗೋಕಾಕ್‌ನಲ್ಲಿ ಇವರ ಮಿಲ್ಸ್ ಒಂದಿದೆ. ಆ ಮಿಲ್ಸ್ ತಮ್ಮ ವಶಕ್ಕೆ ತೆಗೆದುಕೊಳ್ಳಲು ಕರಿನಿಂಗ್‌ನೊಂದಿಗೆ ಬಡಿದಾಡಿ ಹತ್ತಾರು ಹೆಣಗಳು ಬಿದ್ದಾಗ ಇವರು ನೀಡಿದ ಪರಿಹಾರ ಎಷ್ಟು? ಕೊಳಕು ಸಾರಾಯಿ ಕುಡಿಸಿ ದಿನನಿತ್ಯ ಜನರನ್ನು ಕೊಲ್ಲುವ ಈ ಜಾರಕಿಹೊಳಿಗಳು ಜನರಿಗೆ ಪರಿಹಾರ ಕೊಡ್ತಾರೆಯೇ? ಅಂತ.

ರಿದ್ಧಿ ಸಿದ್ಧಿ ಸ್ಫೋಟಗೊಂಡ ತಕ್ಷಣ ಮಾರ್ವಾಡಿಯನ್ನೂ, ಆಡಳಿತ ಮಂಡಳಿಯವರನ್ನೂ ಪೊಲೀಸರು ಬಂಧಿಸಬೇಕಿತ್ತು. ಆದರೆ ಹಾಗಾಗಿಲ್ಲ, ಎಲ್ಲರೂ ರಾಜಾರೋಷವಾಗಿ ಓಡಾಡುತ್ತಿದ್ದಾರೆ. ಅಂದರೆ ಮಾರ್ವಾಡಿ ಜಾರಕಿಹೊಳಿಗಳಿಗೆ ಎಷ್ಟು ಮೇಯಿಸಿದ್ದಾನೆ ಹಾಗೂ ಪೊಲೀಸರಿಗೆ ಎಷ್ಟು ಮೇಯಿಸಿದ್ದಾನೆ ಎಂದು ಗೋಕಾಕದ ಜನ ಕೇಳುತ್ತಿದ್ದಾರೆ. ಈ ಪ್ರಕರಣದ ಬಗ್ಗೆ ತಜ್ಞರಿಂದ ಸಮಗ್ರ ವರದಿ ತರಿಸಿಕೊಂಡು ಸರ್ಕಾರಕ್ಕೆ ಸಲ್ಲಿಸಬೇಕಿದ್ದ ಜಿಲ್ಲಾಧಿಕಾರಿ ಶಿವಲಿಂಗಮೂರ್ತಿ ತನಗೇನೂ ಸಂಬಂಧವೇ ಇಲ್ಲವೆಂಬಂತೆ ಛೇಂಬರಿನಲ್ಲಿ ಕದ ಹಾಕಿಕೊಂಡು ಕುಳಿತಿದ್ದಾನೆ. ರಿದ್ಧಿಸಿದ್ಧಿಯ ಬಗ್ಗೆ ಮಾತನಾಡಬೇಕೆಂದರೂ ಜಿಲ್ಲಾಧಿಕಾರಿಗೆ ಶಾಸಕ ರಮೇಶ್ ಜಾರಕಿಹೊಳಿಯ ಪರ್ಮಿಷನ್ನು ಬೇಕು. ಹೇಗಿದೆ ನೋಡಿ ನಮ್ಮ ಗೋಕಾಕ್‌ನ ಡೆಮಾಕ್ರಸಿ!

-ಮೇಘರಾಜ್


ಕಚೇರಿಗಳಿಗೆ ತಮ್ಮ ಪಟಾಲಂನೊಂದಿಗೆ ದೌಡಾಯಿಸುವ ವೆಂಕಟರೆಡ್ಡಿ ಅಧಿಕಾರಿಗಳಿಗೆ ಧಮಕಿ ನೀಡಿ "ಸರ್ಕಾರದ ಎಲ್ಲಾ ಕೆಲಸ-ಕಾರ್ಯಗಳು ನಮಗೆ ಸಿಗಬೇಕು" ಎಂಬ ಫರ್ಮಾನು ಹೊರಡಿಸಿ ಬರುತ್ತಾನೆ.

ಒಂದು ವೇಳೆ ಆ ಕೆಲಸ ಮಾಡದ ಅಧಿಕಾರಿಯನ್ನು ಇಲ್ಲಿಂದ ಎತ್ತಂಗಡಿ ಮಾಡಿಸಿ ತನ್ನ ಕೆಲಸವನ್ನು ಮಾಡಿಕೊಳ್ಳುತ್ತಾನೆ. ಇವನ ಕಾಟಕ್ಕೆ ಅನೇಕ ಅಧಿಕಾರಿಗಳು ತಾವೇ ಟ್ರಾನ್ಸ್‌ಫರ್ ಮಾಡಿಸಿಕೊಂಡು ಹೋಗಿದ್ದಾರೆ. ಸಮಾಜ ಕಲ್ಯಾಣ ಇಲಾಖೆ, ಆಹಾರ ಇಲಾಖೆ, ತಾಲ್ಲೂಕ್ ಪಂಚಾಯಿತಿ ಹೀಗೆ ಅನೇಕ ಲಾಭದಾಯಕ ಕಚೇರಿಗಳಿಂದ ಮಂತ್ಲಿ ಹಫ್ತಾ ವಸೂಲಿ ಮಾಡುವ ಈತ ಇಡೀ ಯಾದಗಿರಿಯನ್ನೇ ಮುಕ್ಕಿ ತಿಂದು ತನ್ನ ತಂದೆಯನ್ನೇ ಮೀರಿಸುತ್ತಿದ್ದಾನೆ. ಅದೇ ರೀತಿ ತಂದೆಗೆ ತಕ್ಕ ಮಗನೂ ಕೂಡ ಆಗಿದ್ದಾನೆ.


ವಿಶ್ವನಾಥರೆಡ್ಡಿಮುದ್ನಾಳ್

ಸರ್ಕಾರದ ಭೂ ಕಬಳಿಕೆ

ನಗರ ಪ್ರಾಧಿಕಾರದ ಅಧ್ಯಕ್ಷ ಮೋಹನಬಾಬು, ತಹಶೀಲ್ದಾರ್ ಬಿ.ಬಿ. ಚವ್ಹಾಣರ ಜತೆ ಇಲ್ಲಿನ ಕೆಲವು ಪುಡಿ ರಾಜಕಾರಣಿಗಳು ಹಾಗೂ ವಕೀಲರುಗಳು ಸೇರಿಕೊಂಡು ಸರ್ಕಾರದ ಆಸ್ತಿಯನ್ನು ಮಾರಾಟಕ್ಕಿಟ್ಟಿದ್ದಾರೆ. ಸರ್ವೆ ನಂ. 382 ರಲ್ಲಿ 300 ಪ್ಲಾಟ್‌ಗಳನ್ನು ಮಾಡಿ ಅವುಗಳನ್ನು ಈಗಾಗಲೇ ಮಾರಾಟ ಮಾಡಿ ತಿಂದು ತೇಗಿರುವ ಅಧಿಕಾರಿಗಳು ಬಹುಶಃ ಸರ್ಕಾರದ ಆಸ್ತಿಯನ್ನು ಸಂಪೂರ್ಣವಾಗಿ ಮಾರಾಟ ಮಾಡುವ ಹುನ್ನಾರದಲ್ಲಿ ತೊಡಗಿದ್ದಾರೆ.


ವೆಂಕಟರೆಡ್ಡಿ ಮುದ್ನಾಳ್

ಯಾದಗಿರಿಯ ನ್ಯಾಯಾಲಯ ಎದುರುಗಡೆಯ ಸರ್ಕಾರದ 8 ಎಕರೆ ಜಾಗವನ್ನು ಕಬಳಿಸಿರುವ ವೆಂಕಟರೆಡ್ಡಿ ಇಲ್ಲೊಂದು ಅಪಾರ್ಟ್‌ಮೆಂಟ್ ಮಾಡಿ ಮಾರ್ವಾಡಿಯೊಬ್ಬನಿಗೆ ಮಾರಾಟ ಮಾಡಿದ್ದಾನೆ. ಹೀಗೆ ಇಡೀ ಯಾದಗಿರಿ ನಗರದ ಎಲ್ಲಾ ಸರ್ಕಾರಿ ಆಸ್ತಿಗಳ ಮಾರಾಟಕ್ಕೆ ಕೈಹಾಕಿರುವ ಮುದ್ನಾಳ್ ಅಂಡ್ ಕಂಪನಿ ಕೋಟ್ಯಂತರ ರೂಪಾಯಿ ಬೆಲೆಬಾಳುವ ಅಕ್ರಮ ಆಸ್ತಿ ಸಂಪಾದಿಸತೊಡಗಿದ್ದಾರೆ.

ಸಂಭಾವಿತರು ಹಾಗೂ ಕೆಲಸ ಮಾಡಬೇಕೆನ್ನುವ ಉಮೇದಿನಲ್ಲಿದ್ದ ಶಾಸಕ ಡಾ. ವೀರಬಸವಂತರೆಡ್ಡಿಯವರ ಎದುರಿಗೆ ಇಂಥ ಅಕ್ರಮ, ಗೂಂಡಾಗಿರಿ ವ್ಯವಹಾರಗಳು ನಡೆಯುತ್ತಿದ್ದರೂ ಸುಮ್ಮನಿದ್ದಾರೆ. ಅಂತೆಯೇ ನಡೆಯಬಾರದ ಎಲ್ಲಾ ಅಕ್ರಮ, ಅವ್ಯವಹಾರಗಳು ಇಲ್ಲಿ ನಡೆಯುತ್ತಿವೆ

ಡಾ. ಮಾಲಕರೆಡ್ಡಿಯವರ ಪಾಪಾಸ್‌ಕಳ್ಳಿ ರಾಜಕಾರಣಕ್ಕೆ ಬೇಸತ್ತು ಡಾ. ವೀರಬಸವಂತರೆಡ್ಡಿಯವರನ್ನು ಗೆಲ್ಲಿಸಿದ್ದ ಇಲ್ಲಿನ ಮತದಾರರು ಶಾಸಕರ ಆಡಳಿತದಿಂದಾಗಿ ಬೇಸತ್ತಿದ್ದಾರೆ. ವೀರಬಸವಂತರೆಡ್ಡಿ ಎಂಬ ಹೆಸರಿನ ಶಾಸಕ ಮುಂಬರುವ ದಿನಗಳಲ್ಲಿ ಈ ಎಲ್ಲಾ ಲೋಪ-ದೋಷಗಳನ್ನು ಸರಿಪಡಿಸಿದರೆ ಒಳಿತು. ಇಲ್ಲದಿದ್ದಲ್ಲಿ ಅವರಿಗೆ ಉಳಿಗಾಲವಿಲ್ಲ.

-ವರದಿಗಾರ

ಥೂತ್ತೇರಿ

ಯಾಹೂ

ನಮ್ಮ ಜನಪ್ರಿಯ ಮುಖ್ಯಮಂತ್ರಿಗಳಾದ ಕುಮಾರ ಸ್ವಾಮಿಗಳು, ಲೋಕಾಯುಕ್ತ ವೆಂಕಟಾಚಲರ ದಾಳಿಯನ್ನು ನೆನಪಿಸುವಂತೆ ಮೈಸೂರಿನ ಮುಕ್ತ ವಿ.ವಿ.ಗೆ. ನುಗ್ಗಿ ಮಹಿಳಾ ಕುಲಪತಿಗೆ ಮುಕ್ತವಾಗಿ ಜೋರು ಮಾಡಿದ ರೋಮಾಂಚಕಾರಿ ಸುದ್ದಿ ಬಂದ ಮೇಲೆ ಅವರನ್ನು ಮಾತನಾಡಿಸಬೇಕೆನ್ನಿಸಿತಲ್ಲಾ, ಕೂಡಲೇ ಫೋನ್ ಮಾಡಿದರೆ ಸಿಕ್ಕೇ ಬಿಟ್ಟರು.

"ಹಲೋ ಸಾರ್, ನಾನು ಯಾಹೂ."

"ಹೇಳಿ ಯಾಹೂ ಅವ್ರೆ, ಬಹಳ ದಿನ ಆಯ್ತು ಭೇಟಿಯಾಗಲಿಲ್ಲ."

"ನೀವು ತುಂಬ ಬಿಜಿಯಾಗಿದ್ರಿ ಅದ್ಕೆ ಭೇಟಿ ಮಾಡಲಿಲ್ಲ ಸಾರ್."

"ಹೌದು ಬಿಜಿ ಕಂಡ್ರಿ, ನಮ್ಮ ಅವಧಿ ಮುಗಿಯೋದ್ರೊಳಗೆ ತುಂಬ ಮನೇಲಿ ಮಲಗಬೇಕಾಗಿದೆ. ಮುಂದಿನವಾರ ಸಾಗರದತ್ರ ಇರೊ ಹಂದಿಗೂಡಲ್ಲಿ ಮಲಗ್ತಾಯಿದ್ದಿನಿ."

"ಆಯ್ತು ಮಲಗಿ ಸಾರ್. ಪಾಪ ನೀವು ಮಲಗೋದ್ರಿಂದ ಒಂದು ಮನೆ ಕಾಯ್ಲಾನಾದ್ರು ಹುಷಾರಾಗ್ಲಿ."

"ಪಾಪ, ಅಲ್ಲಿರೋರೆಲ್ಲ ದೇವೇಗೌಡ್ರ ಅಭಿಮಾನಿಗಳಂತೆ ಸಾರ್."

"ಅದ್ಕೆ ಕಂಡ್ರಿ ನಾನು ಹೋಗಿದ್ದು, ಕಾಯಂ ಮಾಡಿ ಅವ್ರುರ ಅಂದ್ರೆ ಕಾನೂನೇಳ್ತೆ?"

"ಈ ವಿ.ಸಿ.ಗಳೇನೊ ರಾಜ್ಯಪಾಲರೇಳದಂಗೆ ಕೇಳ್ತರೆ. ನೀವೇಳಿದ್ರೆ ಕೇಳಂಗಿಲ್ಲವಂತಲ್ಲಾ."

"ರಿ, ರಾಜ್ಯಪಾಲರೆ ನಾವೇಳಿದಂಗೆ ಕೇಳ್ತರಲ್ರಿ. ಇನ್ನ ಇವುರದೇನು?"

"ರಾಜ್ಯಪಾಲರೆ ಕೇಳ್ತರೆ ಅಂದ್ರೆ ಎಲ್ಲಾ ವಿ.ಸಿ.ಗಳು ನೀವು ಹೇಳಿದಂಗೆ ಕೇಳಬೇಕಾದ್ದೆ ನ್ಯಾಯ ಸಾರ್. ಮುಖ್ಯಮಂತ್ರಿ ಅಂದ್ರೆ ಏನು ತಿಳಕಂಡವ್ರರೆ ಇವುರು. ಅದೂ ನೀವು ಅವುರಿವರ ಮನೆಗೋಗಿ ಮಲಗ್ತಿರಲ್ಲಾ ಸಾರ್, ಅದ್ಕೆ ನಿಮ್ಮನ್ನ ಹಗುರ ಮಾಡಿಕೊಂಡವ್ರೆ. ಅಂತವುರಿಗೆಲ್ಲಾ ಸರಿಯಾಗಿ ಬುದ್ಧಿ ಕಲಸಬೇಕು ಸಾರ್."

"ನೀವ್ಯಾಕ್ ನನ್ನ ಜೊತೆ ಬರಬಾರ್ದು?"

"ನೀವು ಅಧಿಕಾರದಿಂದ ಇಳದ ಮೇಲೆ ಬತ್ತಿನಿ ಸಾರ್."

ವಿ.ಸಿ. ನನಗಿಂಥ ದೊಡ್ಡೋರೇನ್ರಿ?

"ಹುಷಾರಾಗೋದೆಲ್ಲಿಂದ ಸಾಧ್ಯ. ನಾನು ಅವರ ಮನೆಗೋಗಿ ಮಲಗೋದು ನನ್ನ ಕಾರ್ಯಕ್ರಮ. ಅದ್ಕೆ ಮಲಗಿದ್ದು ಬರ್ತಿನಿ. ಅದೇನು ಅಂಟುರೋಗ ಅಲವೇನ್ರಿ."

"ಅಂಟುರೋಗಲ್ಲ ಸಾರ್. ಒಂದು ವೇಳೆ ನಿಮ್ಮ ತಂದೆಗಿದ್ರೆ ನಿಮಗೆ ಬರುತ್ತೆ ಅಷ್ಟೆ. ನೀವಲ್ಲಿಗೆ ಹೋಗಿ ಬಂದಮೇಲೆ ನಿಮ್ಮ ಮಗನಿಗೆ ಬರಬಹುದು."

"ಅದ್ಯಂಗೆ ಸಾಧ್ಯ? ಅವುನಿಗಾಗ್ಲೆ ಹತ್ತೊಂಭತ್ತು ವರ್ಷ."

"ಓಹೊ ಹೌದಲ್ವ? ಸಾರಿ ಸಾರ್, ಹೋಗಿ ಬನ್ನಿ. ಆಮೇಲೆ ಏನ್ನಾರ್ ಅದು ಸುಧಾರಾವ್ ಪ್ರಕರಣ."

"ಅಲ್ರೀ ನೀವೇ ಹೇಳ್ರಿ, ಯೂನಿವರ್ಸಿಟಿ ವೈಸ್‌ಚಾನ್ಸಲರ್ ದೊಡ್ಡೋರೊ, ಚೀಫ್ ಮಿನಿಸ್ಟ್ರು ದೊಡ್ಡೋರೊ?"

"ಚೀಫ್‌ಮಿನಿಸ್ಟ್ರು."

"ಮತ್ತೆ? ಹೇಳ್ತಾಯಿದಿನಿ ಬಾಯಿಗೆ ಬಂದಂಗೆ ಕಾನೂನು ಹೇಳ್ತಳೆ ಆಕೆ."

"ಸರಿಯಾಗಂದ್ರಿ ಬಿಡಿ."

"ಸರಿಯಾಗೇನು? ಮಾಧ್ಯಮದವರು ಇಲ್ದೆಯಿದ್ರೆ ಬೆಂಗಳೂರ ಮೇಯರ್‌ಗೆ ಬೋದ್ನಲ್ಲ ಅಂಗೆ ಬೋತಿದ್ದೆ. ಏನ್ಮಾಡ್ತಿರಿ, ಮಾಧ್ಯಮದೋರು ಇದ್ರು ಬಚಾವಾದ್ಲು."



"ಈಗ್ಲೆ ಬನ್ರಿ."

"ಈಗ್ಲೆ ಬರನ ಅಂದ್ರೆ ನಿಮ್ಮತ್ರ ಲಕ್ಷ್ಮಯ್ಯನ ಮಗ ಬೋಜೇಗೌಡವುನೆ ಸಾರ್. ಅವುನೆ ಸಾಕು."

"ಹಾಗಂತಿರಾ?"

"ಹೌದು ಸಾರ್. ಅವುನು ದೇವದಾಸಿ ಬಳಿ ನಾಜೋಕಯ್ಯ ಅಂತ ಇದ್ನಲ್ಲ ಅಂಗಿರತನೆ ನಿಮ್ಮತ್ರ. ಅವುನಿಗಿಂತ್ಲೂ ಅವುನ ಬ್ರದರ್ ಧರ್ಮೇಗೌಡ ಇನ್ನು ಬೆಟರ್."

"ಹ್ಯಾಗೆ?"

"ನೋಡಿ, ಚಿಕ್ಕಮಗಳೂರು ಡಿಸಿನೆ ಅವುನು ಬಂದ್ರೆ ಹೆದ್ರಿಕೊಂಡು 'ಬನ್ನಿ ಸಾರ್, ಕುತುಗೊಳಿ ಸಾರ್' ಅಂತನೆ."

"ಹೌದೇನ್ರಿ?"

"ಹೌದು ಸಾರ್. ನೀವು ಅಧಿಕಾರಿಗಳನ್ನು ಹೆದರಿಸಬೇಕಾದ್ರೆ, ಜನಾಂಗದವರ ಕೆಲಸಗಳು ಆಗಬೇಕಾದ್ರೆ ಇವುರ ಅತ್ರ ಇಟಗೊಂಡ್ರೆ ಸಾಕು. ಇರೋವಷ್ಟು ದಿನದಲ್ಲಿ ಜಾತಿ ಮಕ್ಕಳಿಗೆ ಹೆಲ್ಪ ಮಾಡಬವುದು."

"ಒಳ್ಳೆ ಸಲಹೆ ಕೊಟ್ರಿ ಯಾಹೂ."


"ಥ್ಯಾಂಕ್ಯೂ ಸಾರ್!"

ಥೂತ್ತೇರಿ!!!

ಸಾವಿನ ಮುಂದೆ ಸೂರಿಯ ರಿವಾಲ್ವರ್ ಯಾವ ಲೆಕ್ಕ?

ಶಿಕಾರಿಗೆ ನಿಂತನೆಂದರೆ ಪೆದ್ದಗುಂಡ ಅಕ್ಷರಶಃ ಛೂಬಿಟ್ಟ ಚೀಟನಾಯಿಯೆ!


ಮೊದಲು ಕಡಬಗೆರೆ ಪಾಯ್ಸನ್ ರಾಮ, ಆತ ಬಚಾವಾದರೆ ಗೋಪಾಲಯ್ಯ; ಅದು ಮಿಸ್ಸಾದರೆ ಮುಲಾಮು, ಕೊನೆಗೆ ಏನೂ ಆಗದೇಹೋದರೆ ತಿಮ್ಮೇನಹಳ್ಳಿ ಗೋವಿಂದ, ಕಾಮಾಕ್ಷಿಪಾಳ್ಯದ ಬಸವ, ಆತನ ಭಾಮೈದ ಧರಣಿ ಅಥವಾ ತಿಮ್ಮೇನಹಳ್ಳಿ ಸೂರಿ ಯಾರೇ ಸಿಕ್ಕರೂ ನುಗ್ಗುವುದಕ್ಕೆ ರೆಡಿಯಾಗೇ ಪೆದ್ದಗುಂಡ ಪಡೆ ರಸ್ತೆಗಿಳಿದಿತ್ತು.



ತಿಮ್ಮೇನಹಳ್ಳಿ ಸೂರಿ

ಸತತ ಮೂರು ದಿನಗಳ ಕಾಲ ಕಡಬಗೆರೆ ರಾಮನಿಗಾಗಿ ಹೊಂಚು ಹಾಕಿ, ಆನಂತರ ಕಾಮಾಕ್ಷಿ ಪಾಳ್ಯದಲ್ಲಿ ಗೋಪಾಲಯ್ಯ ಮನೆ ಮುಂದೆ ಕಾದೂ ಏನೂ ಪ್ರಯೋಜನವಾಗದೇ ಹೋದಾಗಲೇ ಪೆದ್ದಗುಂಡನ ಗ್ಯಾಂಗ್ ಇನ್ನಷ್ಟು ಹತಾಶೆಗೆ ಬಿದ್ದಿದೆ.

ಅದು 2006 ರ ಸೆಪ್ಟೆಂಬರ್ ಒಂಭತ್ತು, ಒಂದು ಕ್ವಾಲೀಸ್‌ನಲ್ಲಿ ಪೆದ್ದಗುಂಡ, ಕತ್ತಿಗುಪ್ಪೆ ಸೀನ, ತುಮಕೂರಿನ ಸುಜಿತ್ ಮತ್ತು ಬಸವೇಶ್ವನಗರದ ರೇವಾ ಉರ್ಫ್ ರೇವಣ್ಣ ಕೂತಿದ್ದರು. ಜೊತೆಗೆರಡು ಟಾಟಾ ಸುಮೋಗಳ ತುಂಬ ಹುಡುಗರಿದ್ದರು. ಆ ಪೈಕಿ ಕಾಮಾಕ್ಷಿಪಾಳ್ಯದ ಪ್ರವೀಣ ಉರ್ಫ್ ಚೆಲ್ಲ, ಅನಿಲ, ಬೆಂಕಿ ಮೋಹನ, ತುಮಕೂರಿನ ಅಂಜಿಯ ಶಿಷ್ಯ ಪಿಂಟೋ, ಬಿಮೆಲ್ ಲೇಔಟಿನ ಲಕ್ಷ್ಮೀಶ ಅಲಿಯಾಸ್ ಜೂಲಿ, ನಟರಾಜ್ ಮುಂತಾದವರಿದ್ದರು. ಮತ್ತೊಂದರಲ್ಲಿ ಜಗ್ಗನ ಶಿಷ್ಯ ಕೋಳಿ ಹರೀಶ, ಬಸವೇಶ್ವರನಗರದ ಮೊಟ್ಟೆ ವಿಜಿ, ಅದೇ ಬಸವೇಶ್ವರನಗರದ ಮಾರೇಗೌಡನ ಮಗ ಕುಮಾರ, ಮುನ್ನಾಬಾಬು ಅಲಿಯಾಸ್ ಕಾಟು, ತಾಂಡವ, ಬ್ಯಾಡರಹಳ್ಳಿಯ ವೆಂಕಟಾಚಲ ಅಲಿಯಾಸ್ ಚಲ ಮುಂತಾದವರಿದ್ದರು. ಇವರೆಲ್ಲರ ವಯಸ್ಸು ಹೆಚ್ಚೆಂದರೆ ಹದಿನೆಂಟರಿಂದ ಇಪ್ಪತ್ತೈದು.



ಟೋಣಿ

ಅವತ್ತು ರಾತ್ರಿ ಎಲ್ಲ ಹುಡುಗರಿಗೂ ಊಟ ಕೊಡಿಸಿ ಯಾವುದೋ ಡಾಬಾ ಒಂದರಲ್ಲಿ ಮಲಗಿಸಿದ್ದಾನೆ ಪೆದ್ದಗುಂಡ. ಬೆಳ್ಳಂಬೆಳಿಗ್ಗೆಯೇ ಮುಖ ಕೂಡ ತೊಳೆಯದೇ ಇಡೀ ಪಡೆ ಬೇಟೆಗಾಗಿ ರೆಡಿಯಾಗಿತ್ತು, ಕಾಮಾಕ್ಷಿಪಾಳ್ಯದ ಗೋಪಾಲಯ್ಯನ ಚಲನವಲನಗಳ ಬಗ್ಗೆ ಮಾಹಿತಿಗೆಂದೇ ನೇಮಿಸಲ್ಪಟ್ಟಿದ್ದ ರಾಜು ಎಂಬ ಹುಡುಗನಿಂದ ಮಾಹಿತಿ ಬಂದೇಬರುತ್ತದೆ ಎಂಬ ನಂಬಿಕೆಯಲ್ಲೇ ಪ್ರತಿಯೊಬ್ಬರೂ ಹವಣಿಸುತ್ತಿದ್ದರು. ಅದು 2006 ರ ಸೆಪ್ಟೆಂಬರ್ 10 ರ ಬೆಳಗಿನ ಜಾವ ಹತ್ತೂಕಾಲರ ಸಮಯ. ಕೊನೆಗೂ ಫೋನ್ ಮಾಡಿದ ರಾಜ ಗೋಪಾಲಯ್ಯ ಹತ್ತಿದ್ದ ಜೀಪು ಚಂದ್ರ ಲೇಔಟ್‌ನತ್ತ ಬರ್‍ತಿದೆ ಎಂದಿದ್ದಾನೆ. ಆದರೆ ಅದನ್ನು ಫಾಲೋ ಮಾಡಿಕೊಂಡು ಬರುತ್ತಿದ್ದ ರಾಜ ಅವಸರದಲ್ಲಿ ಯಾರದೋ ಗಾಡಿಗೆ ಗುದ್ದಿಬಿಟ್ಟ, ರಸ್ತೆಯಲ್ಲೇ ಜಗಳವಾಗಿ ಆನಂತರ ಆತನಿಂದ ಫೋನ್ ಬರಲೇ ಇಲ್ಲ.

ಆದರೆ ಕಾಮಾಕ್ಷಿಪಾಳ್ಯದ ರಿಲಯನ್ಸ್ ಪೆಟ್ರೋಲ್ ಬಂಕಿನ ಬಳಿ ಎಲ್ಲಾ ಟೂಲ್ಸ್ ಇಟ್ಟುಕೊಂಡು ಮೂರು ಗಾಡಿಗಳಲ್ಲಿ ಪೆದ್ದಗುಂಡನ ಗ್ಯಾಂಗ್ ಹೊಂಚು ಹಾಕಿತ್ತಲ್ಲ; ಅತ್ತಲಿಂದ ಫೋನ್ ಮಾಡಿದರೆ ರಾಜ ಫೋನನ್ನೇ ತೆಗೆಯುತ್ತಿರಲಿಲ್ಲ, ಯಾವುದೋ ಅಂದಾಜಿನ ಮೇಲೆ ಚಂದ್ರಲೇಔಟಿನತ್ತ ಧಾವಿಸಿದ ಪೆದ್ದಗುಂಡನ ಪಡೆಗೆ ಗೋಪಾಲಯ್ಯ ಇದ್ದ ಜೀಪು ಮಿಸ್ಸಾಗಿ ಹೋಯ್ತು, ಅದೇ ಹತಾಶೆಯಲ್ಲಿ ನಾಗರಬಾವಿ ರಿಂಗ್‌ರಸ್ತೆಗೆ ಬಂದ ಪೆದ್ದಗುಂಡನ ಪಡೆ ಅದೇ ಮೂರು ಗಾಡಿಗಳಲ್ಲಿ ಕೆಂಗೇರಿ ಉಪನಗರದತ್ತ ಸಾಗುತ್ತಿದ್ದರೆ ವಡ್ಡರಪಾಳ್ಯದ ಬಳಿ ಬರುತ್ತಿದ್ದಂತೆ ಅತ್ತ ಕಡೆಯಿಂದ ರಾಂಗ್‌ಸೈಡಿನಿಂದ ಎರಡು ಗಾಡಿಗಳು ಬರುತ್ತಿದ್ದದ್ದು ಕಾಣಿಸಿದೆ.

ಮುಂದೆ ಸ್ಯಾಂಟ್ರೋ ಕಾರು ಅದರ ಹಿಂದೊಂದು ಸ್ಕಾರ್ಪಿಯೋ. ಸ್ಯಾಂಟ್ರೋ ಸೂರಿಯದ್ದೇ ಅಂತ ಪೆದ್ದಗುಂಡನಿಗೆ ಚೆನ್ನಾಗಿ ಗೊತ್ತಿತ್ತು, ಆದರೆ ಒಳಗೆ ಸೂರಿ ಕೂತಿದ್ದಾನಾ ಇಲ್ಲವಾ? ಎಂಬುದೇ ಗೊತ್ತಿಲ್ಲ, ಏಕೆಂದರೆ ಕಾರಿನ ಗಾಜಿಗೆ ಸೂರಿ ವಿಪರೀತ ಕಪ್ಪನೆಯ ಪೇಪರ್ಸ್ ಹಾಕಿಸಿದ್ದ. ಸೂರಿಯ ಕಾರಿನ ಹಿಂದೆಯೇ ಬಂದ ಸ್ಕಾರ್ಪಿಯೋದಲ್ಲಿ ಸೈಕಲ್ ರವಿ ಕೂತಿದ್ದ!

ಓಡುತ್ತಿದ್ದ ಸ್ಕಾರ್ಪಿಯೋದಲ್ಲಿ ಸೈಕಲ್ ರವಿಯ ತಲೆ ಕಂಡಿದ್ದೇ ಕೊಲ್ಲುವ ಕಾತುರ ಮತ್ತು ಬೇಟೆ ಮಿಸ್ಸಾದ ಹತಾಶೆಯಲ್ಲಿದ್ದ ಪೆದ್ದಗುಂಡನಿಗೆ ಕರೆಂಟ್ ಹೊಡೆದಂತಾಯಿತು. ತಕ್ಷಣವೇ ಚಿತ್ರದುರ್ಗದ ಜೈಲಲ್ಲಿದ್ದ ಜಾನಿಯ ಮೊಬೈಲಿಗೆ ಡಯಲ್ ಮಾಡಿದ್ದೇ "ಗುರೂ' ಸೈಕಲ್ ರವಿ ಸೂರಿ ಹಿಂದೆ ಸುತ್ತುತ್ತಾ ಅವ್ನೆ. ಇಲ್ಲೇ ಹೋಗ್ತಿದಾನೆ. ಏನ್ ಮಾಡ್ಲೀ ಹೇಳು" ಎಂದಿದ್ದಾನೆ.

"ಏನು; ಸೈಕಲ್ ರವಿ ಸೂರಿ ಜೊತೆ ಸೇರ್‍ಕೊಂಡ್ನಾ? ಮಗಾ, ಇದೇ ಚಾನ್ಸು; ಬಿಡಬೇಡಾ. ಕೈಕಾಲು ಲ್ಯಾಪ್ಸ್ ಮಾಡು" ಎಂದುಬಿಟ್ಟ ಜಾನಿ!

ಅಷ್ಟೇ, ಕೆಂಗೇರಿಯತ್ತ ಓಡುತ್ತಿದ್ದ ಮೂರೂ ಗಾಡಿಗಳು ರಿಂಗ್‌ರಸ್ತೆಯಲ್ಲಿ 'ಯೂ' ಟರ್ನ್ ಮಾಡಿದ್ದೇ ವಾಪಸ್ಸು ವಡ್ಡರಪಾಳ್ಯದತ್ತ ಬಂದು, ಸೂರಿಯ ಸ್ಯಾಂಟ್ರೋ ಕಾರನ್ನು ಹಿಂಬಾಲಿಸಿವೆ. ಅದು ತನ್ನ ಬದುಕಿನ ಕೊನೆಯ ಕ್ಷಣ ಮತ್ತು ದಿನ ಎಂಬುದು ಸೂರಿಗೆಲ್ಲಿ ಗೊತ್ತಿತ್ತು?

ಅವತ್ತು ಸೂರಿಯ ಜೊತೆಗಿದ್ದವನು ಆತನ ಚಡ್ಡಿದೋಸ್ತ್ ಟೋಣಿ. ಸಾಲದ್ದಕ್ಕೆ ಇನ್ನೂ ಇಬ್ಬರು ಹುಡುಗರಿದ್ದರು. ಮಚ್ಚನ ಕೊಲೆ ನಡೆದ ತಿಂಗಳಿಗೇ ತಮ್ಮಯ್ಯನ ಕೊಲೆ ಕೇಸು ಖುಲಾಸೆಯಾಗಿ ಸೂರಿ ಬಿಡುಗಡೆಗೊಂಡಿದ್ದ. ಆ ಹೊತ್ತಿಗಾಗಲೇ ಬೆಂಗಳೂರು ಅಂಡರ್‌ವರ್ಲ್ಡ್‌ನ ಖತರ್‌ನಾಕ್‌ಗಳೆಲ್ಲ ಒಂದಲ್ಲ ಒಂದು ಕೊಲೆ ಕೇಸು ಹೊತ್ತು ಜೈಲುಪಾಲಾಗಿದ್ದರು. ಜೇಕೆ ಪಾಳೆಯದಲ್ಲಿ ತನ್ನ ಗುರು ಗೋವಿಂದನಿಗಿಂತಲೂ ಸೂರಿಯೇ ದೊಡ್ಡ ಹೆಸರು ಮಾಡಿಬಿಟ್ಟಿದ್ದ. ಜೈಲಿಂದ ಹೊರಬಿದ್ದವನೇ ತಿಮ್ಮೇನಹಳ್ಳಿಗೊಂದು ಕಾಟಾಚಾರದ ವಿಸಿಟ್ ಕೊಟ್ಟವನು ಮತ್ತೆಂದೂ ಅತ್ತ ತಲೆ ಹಾಕಲಿಲ್ಲ, ಯಾರಿಗೂ ಗೊತ್ತಾಗದ ಹಾಗೆ ಕೆಂಗೇರಿ ಉಪನಗರದ ಸಮೀಪದ ಹೊನ್ನಿಗನಹಟ್ಟಿಯಲ್ಲೊಂದು ಮನೆ ಮಾಡಿದ್ದ. ಕೇಬಲ್ ಶ್ರೀಧರನನ್ನು ಜೊತೆ ಹಾಕಿಕೊಂಡಿದ್ದೇ ಕೆಂಗೇರಿ ಸುತ್ತಮುತ್ತ ಕೇಬಲ್ ದಂಧೆಗೆ ಕೈಯಿಟ್ಟ. ಕೆಂಗೇರಿ ಉಪನಗರದ ಖತರ್‌ನಾಕ್ ಲ್ಯಾಂಡ್ ಗ್ರ್ಯಾಬರ್ ಕೇಕೆ ಅಲಿಯಾಸ್ ಕಾಡುಕುದ್ರೆ ಕೃಷ್ಣಪ್ಪನ ಭೂಕಬಳಿಕೆಗೆ ಸೂರಿಯೂ ಪಾಲುದಾರನಾದ. ಈ ಕೇಕೆ ರಿಂಗ್‌ರಸ್ತೆಯ ಎಂಪಿಎಂ ಲೇಔಟ್ ಪಕ್ಕದಲ್ಲಿ ಕೇಕೆ ಲೇಔಟ್ ಅಂತ ಶುರು ಹಚ್ಚಿಕೊಂಡಿದ್ದ. ಅನೇಕರಿಂದ ಸೈಟಿಗೆಂದು ದುಡ್ಡು ಕಿತ್ತು, ಸೈಟು ಕೊಡದೇ, ಹಾಗೊಮ್ಮೆ ಕೊಟ್ಟಿದ್ದರೂ ಕ್ಯಾತೆ ತೆಗೆದು ಖಾಲಿ ಮಾಡಿಸುತ್ತಿದ್ದ. ಅದಕ್ಕೆಂದೇ ಸೂರಿಗೆ ಕೇಕೆ ಹದಿನಂಟು ಸೈಟು ಕೊಟ್ಟಿದ್ದ, ಜೊತೆಗೆ ಕಾಮಾಕ್ಷಿಪಾಳ್ಯದ ಮತ್ತೊಬ್ಬ ಭೂಕಂಟಕ ಜವರೇಗೌಡನೂ ಸೂರಿಯನ್ನು ಪೋಷಿಸುತ್ತಿದ್ದ. ತನ್ನ ವಿರೋಧಿಗಳಾದ ಜಗ್ಗ ಜಾನಿ, ಕೋತಿರಾಮ, ಕೊರಂಗು ಇತ್ಯಾದಿಗಳೆಲ್ಲ ಜೈಲಿಂದ ಹೊರಬಿದ್ದ ಮೇಲೆ ತಾನೇ ತಾನು ಹುಷಾರಾಗಿರಬೇಕು? ಇದು ಸೂರಿಯ ಲೆಕ್ಕ. ಹಾಗೊಮ್ಮೆ ದುಷ್ಮನ್‌ಗಳು ಕೈ ಹಾಕಿದ್ದೇ ಆದರೆ ಮೊದಲು ಗುರು ಗೋವಿಂದನ ಮೇಲೆ ತಾನೇ ಕೈ ಹಾಕೋದು? ಆನಂತರವಷ್ಟೇ ತಾನು ಟಾರ್ಗೆಟ್ ಆಗೋದು?



ಸೂರಿಯ ಅಂತ್ಯ

ಸಾವು ಸದ್ದಿಲ್ಲದೇ ತನ್ನನ್ನು ಸುತ್ತುವರಿದಿದೆಯೆಂಬುದು ಸೂರಿಗೆ ಗೊತ್ತಾಗುವ ಹೊತ್ತಿಗೆ ಕಾಲ ಮಿಂಚಿತ್ತು. ಆದರೆ ತನ್ನ .38 ರಿವಾಲ್ವರ್ ಇತ್ತಲ್ಲ; ಅದು ಖಂಡಿತ ತನ್ನ ನೆರವಿಗೆ ಬರುತ್ತದೆಯೆಂದೇ ಲೆಕ್ಕ ಹಾಕಿ ಸೊಂಟದಿಂದ ರಿವಾಲ್ವರ್ ತೆಗೆದವನು ತನ್ನತ್ತ ಲಾಂಗ್ ಹಿಡಿದು ಬರುತ್ತಿದ್ದ ಪೆದ್ದಗುಂಡನತ್ತ ಒಂದೊಂದಾಗಿ ಫೈರ್ ಮಾಡತೊಡಗಿದ. ಟಫ್, ಟಫ್ ಅಂತ ಗುಂಡು ಸಿಡಿಯುತ್ತಲೇ ಇತ್ತು. ಆದರೆ ಗುರಿ ಸಿಗಲಿಲ್ಲ. ಇತ್ತ ಸೂರಿ ತನ್ನತ್ತ ಫೈರ್ ಮಾಡುತ್ತಿದ್ದರೆ ಪೆದ್ದಗುಂಡ ಅದು ತನಗ್ಯಾವ ಲೆಕ್ಕ ಎಂಬಂತೆ ಕೊಂಚವೂ ಅಳುಕದೆ ಸೂರಿಯನ್ನು ಸಮೀಪಿಸಿಬಿಟ್ಟಿದ್ದ.....

ಇಂಥಾದ್ದೇ ಉಡಾಫೆಗೆ ಬಿದ್ದವನು ಸೆಪ್ಟೆಂಬರ್ ಹತ್ತರ ಬೆಳಿಗ್ಗೆ ಮನೆ ಬಿಟ್ಟವನು ನೇರವಾಗಿ ವಡ್ಡರಪಾಳ್ಯದ ನಾಯಕ ಮುನಿರಾಜು ಮನೆಗೆ ಬಂದಿದ್ದಾನೆ. ಮುನಿರಾಜು ಕೆಂಗೇರಿ ಪುರಸಭೆಯ ಉಪಾಧ್ಯಕ್ಷ. ಅಲ್ಲಿಗೆ ಕೆಂಗೇರಿ ಪುರಸಭೆಯ ಮಾಜಿ ಅಧ್ಯಕ್ಷರ ಅಂಜನಪ್ಪನೂ ಬಂದಿದ್ದ. ಕೊಮ್ಮಘಟ್ಟ ರಸ್ತೆಯಲ್ಲಿ ಹೊಸದಾಗಿ ತಲೆ ಎತ್ತಿದ ಅಪಾರ್ಟ್‌ಮೆಂಟ್ ಒಂದರ ಕೇಬಲ್ ಉಸಾಬರಿಯನ್ನು ಗಂಡಾಗುಂಡಿ ಮಾಡಿಯೇ ವಹಿಸಿಕೊಂಡಿದ್ದ ಸೂರಿ ಅದಕ್ಕೆಂದು ಎರಡು ಲಕ್ಷದಷ್ಟು ಅಡ್ವಾನ್ಸ್ ಕೊಟ್ಟಿದ್ದ. ಸೋಮವಾರ ಅದರ ಪೂಜೆ ಇಟ್ಟುಕೊಂಡಿದ್ದ. ಅದರ ಆಹ್ವಾನ ಪತ್ರಿಕೆ ಕೊಡಲೆಂದೇ ಆತ ಕೆಂಗೇರಿ ಪುರಸಭೆ ಉಪಾಧ್ಯಕ್ಷ ಮುನಿರಾಜು ಮನೆಗೆ ಬಂದಿದ್ದ.



ಪೆದ್ದಗುಂಡ

ಸ್ಯಾಂಟ್ರೋ ನಿಲ್ಲಿಸಿದ್ದೇ ಸೀದಾ ಮುನಿರಾಜು ಮನೆಯೊಳಕ್ಕೆ ಹೋದ ಸೂರಿ ಹಿಂದೆಯೇ ಟೋಣಿ ಕೂಡ ಹೋಗಿದ್ದ. ಆದರೆ ಸೈಕಲ್ ರವಿ ಮಾತ್ರ ತನ್ನ ಸ್ಕಾರ್ಪಿಯೋದಲ್ಲೇ ಕೂತಿದ್ದ. ಮುನಿರಾಜು ಮತ್ತು ಅಂಜನಪ್ಪರಿಗೆ ತನ್ನ ಕೇಬಲ್ ಪೂಜೆಯ ಆಹ್ವಾನ ಪತ್ರಿಕೆ ಕೊಟ್ಟಿದ್ದೇ ಕ್ಷಣ ಕೂಡ ನಿಲ್ಲದೇ ಸೂರಿ ಹೊರಬರುವುದಕ್ಕೂ ಇತ್ತ ಆತನನ್ನು ಹಿಂಬಾಲಿಸಿ ಬಂದ ಪೆದ್ದಗುಂಡನ ಪಡೆ ಮುತ್ತಿಕೊಳ್ಳುವುದಕ್ಕೂ ಒಂದೇ ಆಗಿತ್ತು. 'ಸೂರಿ ಓಡು, ಸೂರೀ....' ಅಂತ ಕೂಗಿದ್ದೇ ಸೈಕಲ್ ರವಿ ಓಡಿಬಿಟ್ಟ. ಸಾವು ಸದ್ದಿಲ್ಲದೇ ತನ್ನನ್ನು ಸುತ್ತುವರಿದಿದೆಯೆಂಬುದು ಸೂರಿಗೆ ಗೊತ್ತಾಗುವ ಹೊತ್ತಿಗೆ ಕಾಲ ಮಿಂಚಿತ್ತು, ಆದರೆ ತನ್ನ .38 ರಿವಾಲ್ವರ್ ಇತ್ತಲ್ಲ; ಅದು ಖಂಡಿತ ತನ್ನ ನೆರವಿಗೆ ಬರುತ್ತದೆಯೆಂದೇ ಲೆಕ್ಕ ಹಾಕಿ ಸೊಂಟದಿಂದ ರಿವಾಲ್ವರ್ ತೆಗೆದವನು ತನ್ನತ್ತ ಲಾಂಗ್ ಹಿಡಿದು ಬರುತ್ತಿದ್ದ ಪೆದ್ದಗುಂಡನತ್ತ ಒಂದೊಂದಾಗಿ ಫೈರ್ ಮಾಡತೊಡಗಿದ. ಟಫ್, ಟಫ್ ಅಂತ ಗುಂಡು ಸಿಡಿಯುತ್ತಲೇ ಇತ್ತು, ಆದರೆ ಗುರಿ ಸಿಗಲಿಲ್ಲ, ಇತ್ತ ಸೂರಿ ತನ್ನತ್ತ ಫೈರ್ ಮಾಡುತ್ತಿದ್ದರೆ ಪೆದ್ದಗುಂಡ ಅದು ತನಗ್ಯಾವ ಲೆಕ್ಕ ಎಂಬಂತೆ ಕೊಂಚವೂ ಅಳುಕದೆ ಸೂರಿಯನ್ನು ಸಮೀಪಿಸಿಬಿಟ್ಟಿದ್ದ. ಜೊತೆಗಿದ್ದ ಟೋಣಿ ರಿಂಗ್‌ರಸ್ತೆಯತ್ತ ಓಡಲಾರಂಭಿಸಿದ. ಥೇಟು ಸೂರಿಯ ಹಾಗೇ ಇದ್ದ ಟೋಣಿ ಕೂಡ ಸೂರಿ ಎಂದೇ ಭಾವಿಸಿದ ಪೆದ್ದಗುಂಡನ ಹುಡುಗರು ಆತನನ್ನು ಅಟ್ಟಿಸಿಕೊಂಡು ಹೋಗಿ ಕತ್ತರಿಸಿ ಎಸೆದರು.

ಇನ್ನೂ ಮೀಸೆ ಬಲಿಯದ ಹುಡುಗರ ಗ್ಯಾಂಗು ಎರಡೂ ಸುಮೋಗಳಿಂದ ದಬದಬನೇ ಇಳಿದು ಸೂರಿಯತ್ತ ಧಾವಿಸಿ ಬಂತು. ಅದನ್ನು ಕಂಡಿದ್ದೇ ಸೂರಿ ಮುನಿರಾಜು ಮನೆಯಿಂದ ಪೂರ್ವಕ್ಕೆ ಜ್ಞಾನಜ್ಯೋತಿ ಲೇಔಟಿನತ್ತ ಓಡತೊಡಗಿದ. ಮುಂದೆಯೇ ಪೆದ್ದಗುಂಡ, ಆತನ ಹಿಂದೆ ಹದಿನೈದು ಮಂದಿ ಸೂರಿಯನ್ನು ಅಟ್ಟಿಸಿಕೊಂಡು ಹೋದರು. ಪ್ರತಿಯೊಬ್ಬರ ಕೈಯಲ್ಲೂ ಲಾಂಗ್ ಇತ್ತು. ಯಾರೂ ಮುಖ ತೊಳೆದಂತಿರಲಿಲ್ಲ. ರಾತ್ರಿ ಮಲಗಿದ್ದ ವೇಷದಲ್ಲೇ ಇದ್ದರು. ಐನೂರು ಅಡಿ ಓಡುತ್ತಿದ್ದಂತೆ ಸುಸ್ತಾದ ಸೂರಿಯನ್ನು ಜನ ನೋಡುನೋಡುತ್ತಿದ್ದಂತೆಯೇ ಪೆದ್ದಗುಂಡನ ಪಡೆ ಕತ್ತರಿಸಿ ಹಾಕಿತ್ತು. ಸೂರಿಯ ಎಡಗೈಯೇ ತುಂಡಾಗಿ ಹೋಗಿತ್ತು. ಮೈತುಂಬಾ ಮಚ್ಚೇಟುಗಳು. ಆತನ ಚೀತ್ಕಾರಕ್ಕಿಂತಲೂ ಕೊಚ್ಚುತ್ತಿದ್ದ ಹುಡುಗರ ಬಾಯಿಂದ ಬರುತ್ತಿದ್ದ 'ಹೊಡಿಯೋ, ಅವನಮ್ಮನ್ ಚುಚ್ಚೋ....' ಎಂಬ ಸದ್ದೇ ಕಿವಿಗಪ್ಪಳಿಸುತ್ತಿತ್ತು, ಕ್ಷಣಾರ್ಧದಲ್ಲೇ ಸೂರಿಯ ಪ್ರಾಣ ಹಾರಿಹೋಗಿತ್ತು, ಕೆಂಗೇರಿ ಮುನ್ಸಿಪಾಲ್ಟಿ ಉಪಾಧ್ಯಕ್ಷ ಮುನಿರಾಜು ಮನೆಯ ಒಂದೊಂದು ದಿಕ್ಕಿಗೂ ಸೂರಿ ಮತ್ತು ಟೋಣಿಯರ ಹೆಣ ಬಿದ್ದಿತ್ತು.

ಅಲ್ಲಿಗೆ ಸುರೇಶ್ ಅಲಿಯಾಸ್ ತಿಮ್ಮೇನಹಳ್ಳಿ ಸೂರಿ ಎಂಬ ಅಧ್ಯಾಯವೊಂದು ಮುಗಿದಂತಾಯ್ತು. ಬದುಕಿದ್ದರೆ ಇವತ್ತಲ್ಲ ನಾಳೆ ಜೇಡರಹಳ್ಳಿ ಕೃಷ್ಣಪ್ಪನ ಮಟ್ಟಕ್ಕೆ ಬೆಳೆಯಬಲ್ಲ ತಾಕತ್ತು ಮತ್ತು ಜಾಣ್ಮೆ ಸೂರಿಗಿತ್ತು, ಗ್ಯಾಂಗ್‌ವಾರ್ ಹೊರತುಪಡಿಸಿ ಹೇಳುವುದಾದರೆ ಮೂಲತಃ ಸೂರಿ ಕೆಟ್ಟವನಾಗಿರಲಿಲ್ಲ. ಅನಗತ್ಯವಾಗಿ ಯಾರನ್ನೂ ಅಗೌರವದಿಂದ ಮಾತಾಡಿಸುತ್ತಿರಲಿಲ್ಲ, ನಂಬಿದ ಯಾರನ್ನೂ ವಂಚಿಸಲಿಲ್ಲ, ಆ ಕಾರಣಕ್ಕೇ ಗೋವಿಂದನ ವಿಶ್ವಾಸಕ್ಕೆ ಕಟ್ಟುಬಿದ್ದವನು ಅಂಡರ್‌ವರ್ಲ್ಡ್‌ನ ಆಳಕ್ಕೆ ಇಳಿದುಬಿಟ್ಟಿದ್ದ. ಹೊರಬರಲಾಗದಷ್ಟು ದೂರ ಸಾಗಿದ್ದ. ಅದೇನು ದುಡಿದನೋ; ಆತ ಸತ್ತ ನಂತರವೂ ಆತನ ತಾಯಿಗೆ ಬೀದಿಬದಿ ಕೂತು ಹೂ ಮಾರುವುದು ತಪ್ಪಲೇ ಇಲ್ಲ, ಇದ್ದ ಒಬ್ಬನೇ ಮಗನನ್ನು ಗ್ಯಾಂಗ್ ವೈಷಮ್ಯ ಬಲಿತೆಗೆದುಕೊಂಡಿತ್ತು. ಬೆಂಗಳೂರು ಅಂಡರ್‌ವರ್ಲ್ಡ್‌ನ ಜಾಯಮಾನಕ್ಕೆ ತೀರ ವಿಭಿನ್ನ ಸ್ವಭಾವದ ಸೂರಿ ತನ್ನ ದುಷ್ಮನ್‌ಗಳ ಹೊರತಾಗಿ ಮಿಕ್ಕ ಯಾರಿಗೂ ಕೆಟ್ಟವನಾಗಿರಲಿಲ್ಲ!

ಮತ್ತು ಒಳ್ಳೆಯವನಾಗಲು ಹೋಗಿಯೇ ಆತ ಬದುಕುಳಿಯಲಿಲ್ಲ!

ಎಂಥಾ ವಿಚಿತ್ರವಲ್ಲವೆ?

(ಮುಂದಿನ ವಾರಕ್ಕೆ)

ರಿವೇಂಜ್ ಕಿಲ್ಲಿಂಗ್ಸ್ 29

ರಾ. ಸೋಮನಾಥ್

ನಮಿತಾಳನ್ನು ಕೊಂದದ್ದು ಯಾರು?


ನಮಿತಾ


ಯಾರನ್ನೂ ನಂಬಬಾರದು! ಎಲ್ಲರಿಂದಲೂ ಮೋಸ ಹೋದೆ! ಆ ದೇವರೂ ಮೋಸಗಾರ!

ತಾನು ನೇಣು ಬಿಗಿದುಕೊಳ್ಳುವುದಕ್ಕೂ ಮುನ್ನ ನಟಿ ನಮಿತಾ ಬರೆದಿಟ್ಟಿದ್ದ ಈ ಸಾಲುಗಳೇ ಆಕೆಯ ಬದುಕಿನ ಇಡೀ ದುರಂತವನ್ನು ಸಾರಿ ಹೇಳುತ್ತಿದ್ದವು. ಹೀಗೆ ವಿಷ ಕುಡಿದೋ, ನೇಣು ಹಾಕಿಕೊಂಡೋ ಸಾವಿಗೆ ಶರಣಾದ ಅದೆಷ್ಟೋ ನಟಿಯರ ಸಾಲಿಗೆ ಲೇಟೆಸ್ಟಾಗಿ ಸೇರ್ಪಡೆಯಾಗಿದ್ದಾಳೆ ನಮಿತಾ ಅಲಿಯಾಸ್ ಶಬಾನಾ!

ಹೊಳಪು ಕಂಗಳ ಹಾಲುಗೆನ್ನೆಯ ಹುಡುಗಿ. ಬೆಳ್ಳಿತೆರೆಯ ವ್ಯಾಮೋಹದ ಹಿಂದಿರುವ ಕ್ರೌರ್ಯ, ಹೆಜ್ಜೆಹೆಜ್ಜೆಗೂ ಎದುರಾಗುವ ಕೀಚಕ ವೃಂದ ಮತ್ತು ಆಕೆಗಾದ ವಂಚನೆ ಹತಾಶೆ ಎಲ್ಲವನ್ನೂ ಆಕೆಯ ಡೆತ್‌ನೋಟೇ ವಿವರಿಸುತ್ತಿತ್ತು. Of course ತನ್ನ ಸಾವಿಗೆ ಇಂಥವರೇ ಕಾರಣ ಎಂದು ಆಕೆ ಹೆಸರಿಸಿಲ್ಲ. ಆದರೆ ಆಕೆ ತನ್ನನ್ನು ತಾನೇ ಕೊಂದುಕೊಳ್ಳುವ ಸ್ಥಿತಿಗೆ ದೂಡಿದ್ದು ಯಾರು? ಪೊಲೀಸರಾಗಲಿ, ಮಹಿಳಾ ಆಯೋಗವಾಗಲಿ ಈ ಒಂದೇ ಕಾರಣಕ್ಕೆ ಆಕೆಯನ್ನು ಈ ಸ್ಥಿತಿಗೆ ತಳ್ಳಿದವರನ್ನು ಸುಮ್ಮನೇ ಬಿಡಬೇಕಾ?

ಕನ್ನಡದ ಮಟ್ಟಿಗೆ ನಮಿತಾ ದೊಡ್ಡ ನಟಿಯಲ್ಲ ನಿಜ. ಚಿಂತಾಮಣಿಯ ಬಂಬೂಬಜಾರ್‌ನ ಫಕ್ರುದ್ದೀನ್ ಎಂಬ ಬಸ್‌ಕಂಡಕ್ಟರ್‌ನ ಮಗಳು ಶಬಾನಾ ದೊಡ್ಡ ಕನಸು ಹೊತ್ತೇ ಬೆಂಗಳೂರಿಗೆ ಬಂದವಳು. ಆಕೆಯ ತಾಯಿ ಜುಬೇರಾ ಬೇಗಮ್ ಹೃದ್ರೋಗಿ. ಒಬ್ಬ ಅಣ್ಣ ಮತ್ತೊಬ್ಬ ಅಕ್ಕನನ್ನು ಬಿಟ್ಟರೆ ಶಬಾನಾ ಕೊನೆಯವಳು. ಚಿಂತಾಮಣಿಯಲ್ಲಿ ಎಸ್ಸೆಲ್ಸಿ ಮುಗಿಸಿ, ಶಿವಾಜಿನಗರದ ಅಸ್ಮತ್ ಕಾಲೇಜಿನಲ್ಲಿ ಪಿಯೂಸಿ ಓದುವ ಹೊತ್ತಿಗೇ ಮಾಡೆಲಿಂಗ್‌ಗೆ ಕಾಲಿಟ್ಟಳು. ತನ್ನ ಸೌಂದರ್ಯದ ಬಗ್ಗೆ ವಿಪರೀತ ಹೆಮ್ಮೆ ಪಡುತ್ತಿದ್ದ ಶಬಾನಾಳನ್ನು ಡೈರೆಕ್ಟರ್ ಓಂಪ್ರಕಾಶ್‌ರಾವ್‌ಗೆ ಪರಿಚಯಿಸಿ 'ಹುಚ್ಚ' ಚಿತ್ರದಲ್ಲೊಂದು ಪಾತ್ರ ಕೊಡಿಸಿದ್ದು ನಿರ್ಮಾಪಕ ರೆಹಮಾನ್. 'ಹುಚ್ಚ'ದಲ್ಲಿ ಆಕೆಯದು ಹೀರೋಯಿನ್ ರೇಖಾಳ ಗೆಳತಿಯ ಪಾತ್ರ. ಶೂಟಿಂಗ್ ವೇಳೆ ವಿಪರೀತ ಮೂಡಿಯಾಗಿರುತ್ತಿದ್ದಳು. ಹೀರೋಯಿನ್ ರೇಖಾಗಿಂತಲೂ ತಾನೇ ಸುಂದರಿ ಎಂದು ವಾದಿಸುತ್ತಿದ್ದಳು. ಮುಂದಿನ ಚಿತ್ರದಲ್ಲಿ ತನ್ನನ್ನೇ ಹೀರೋಯಿನ್ ಮಾಡುವಂತೆ ಓಂಪ್ರಕಾಶ್ ಜೊತೆ ಜಗಳಕ್ಕಿಳಿದಿದ್ದಳು.

ಆಕೆಗೆ ದೊಡ್ಡ ಗಾಡ್‌ಫಾದರ್‌ಗಳಿರಲಿಲ್ಲ. ಹುಟ್ಟಾ ಶ್ರೀಮಂತೆಯಲ್ಲ. ಸಿನಿಮಾರಂಗದಲ್ಲಿ ಛಾನ್ಸ್ ಗಿಟ್ಟಿಸಿಕೊಳ್ಳುವ ಅಡ್ಡದಾರಿಗಳೂ ಗೊತ್ತಿಲ್ಲ ಎಂದ ಮೇಲೆ ಚಿಕ್ಕಪುಟ್ಟ ಪಾತ್ರಗಳ ಹೊರತಾಗಿ ಹೀರೋಯಿನ್ ಆಗಲು ಎಲ್ಲಿಂದ ಸಾಧ್ಯ? 'ಹುಚ್ಚ' ನಂತರ ದೇವಿಡ್‌ನ 'ಸುಪಾರಿ'ಯಲ್ಲೊಂದು ಪಾತ್ರ ಸಿಕ್ಕಿತು. ಆನಂತರ ಗಾಜಿನ ಮನೆ, ಕೃಷ್ಣ ಲೀಲೆ, ಆತ್ಮಾ, ದಾಳಿ ಮುಂತಾದ ಸಿನಿಮಾಗಳಲ್ಲಿ ನಟಿಸಿದಳಾದರೂ ಅದೂ ಯಃಕಶ್ಚಿತ್ ಪಾತ್ರಗಳೆ.



ಓದಿ ಯಾವುದಾದರೂ ಉದ್ಯೋಗಕ್ಕೆ ಸೇರಬಹುದಿತ್ತು. ಸಿನಿಮಾ ಹುಚ್ಚು ಆಕೆಯನ್ನು ಅಧಃಪತನಕ್ಕೆಳೆಯತೊಡಗಿತ್ತು. ವಿಜಯನಗರದ ಎಂ.ಸಿ. ಲೇಔಟಿನಲ್ಲೊಂದು ರೂಮ್ ಬಾಡಿಗೆ ಹಿಡಿದು ಅಲ್ಲಿದ್ದುಕೊಂಡೇ ಶೂಟಿಂಗ್‌ಗೆ ಬರುತ್ತಿದ್ದಳು. ಇಂಥಾ ಸ್ಥಿತಿಯಲ್ಲೇ ಆಕೆಯ ಬೆನ್ನಿಗೆ ಬಿದ್ದವನು ನಟಿ ಶೃತಿಯ ತಮ್ಮ ಶರಣ್. ಒಂದಷ್ಟು ದಿನಗಳ ಕಾಲ ಆಕೆ ಮತ್ತು ಶರಣ್ ಒಂದೇ ಮನೆಯಲ್ಲಿ ಒಟ್ಟೊಟ್ಟಿಗೇ ಇದ್ದರು. ಸಾಗರಿ, ಕವಲುದಾರಿ, ಅಮ್ಮ ನಾಗಮ್ಮ, ತೆಲುಗಿನ ಗುಲಾಬಿ, ಲಕ್ಷ್ಮಿ ನಿವಾಸಂ, ಕರ್ತವ್ಯಂ ಮತ್ತು ತಮಿಳಿನ ಕಲ್ಯಾಣಂ ಮುಂತಾದ ಟೀವಿ ಸೀರಿಯಲ್ಲುಗಳಲ್ಲಿ ಆಕೆ ನಟಿಸುವ ಹೊತ್ತಿಗೆ ಆಕೆಯ ಬದುಕೇ ಮೂರಾಬಟ್ಟೆಯಾಗಿ ಹೋಗಿತ್ತು.

ಮದುವೆಯಾಗುತ್ತೇನೆಂದು ನಂಬಿಸಿದ್ದ ಶರಣ್ ಆಕೆಯನ್ನು ಇನ್ನಿಲ್ಲದಂತೆ ವಂಚಿಸಿದ್ದ. ನೊಂದ ನಮಿತಾ ಕಂಡಕಂಡ ವರದಿಗಾರರಿಗೆ ಫೋನ್ ಮಾಡಿ ಕಣ್ಣೀರಿಡುತ್ತಿದ್ದಳು. ಕೊನೆಗೂ ಶರಣ್ ಸಕಲೇಶಪುರದ ಪಲ್ಲವಿ ಎಂಬಾಕೆಯನ್ನು ಮದುವೆಯಾದ. ಅಕ್ಕ ಶೃತಿಯೇ ನಿಂತು ನಮಿತಾಳ ಬಾಯಿ ಮುಚ್ಚಿಸಿದ್ದರು. ಒಂದೆಡೆ ಹೀರೋಯಿನ್ ಕನಸು ಮಣ್ಣುಗೂಡಿದರೆ, ಮತ್ತೊಂದೆಡೆ ಮದುವೆಯ ಕನಸಿಗೆ ಶರಣ್ ಕೊಳ್ಳಿಯಿಟ್ಟಿದ್ದ. ಈ ಸ್ಥಿತಿಯಲ್ಲೇ ಆಕೆಗೆ ಜೊತೆಯಾದವನು ವಿಜಯನಗರದ ಗೋಪಿನಾಥ್. ಹಿಂದೆ ಮಾಡೆಲಿಂಗ್‌ನಲ್ಲಿದ್ದಾಗಲೇ ಈತ ನಮಿತಾಗೆ ಪರಿಚಯವಾಗಿದ್ದ. ಒಂದಷ್ಟು ದಿನಗಳ ಕಾಲ ಮುಂಬಯಿಯ ಯಾವುದೋ ಕಂಪೆನಿಗೆ ಇಂಜಿನಿಯರ್ ಆಗಿದ್ದ ಗೋಪಿನಾಥ್‌ನ ತಂದೆ ಕೋದಂಡಪ್ಪನದು ಚೀಟಿ ದಂಧೆ.

ಶರಣ್ ಕೈಕೊಟ್ಟಾಗಲೇ ಜರ್ಝರಿತಳಾಗಿದ್ದ ನಮಿತಾಳನ್ನು ಎರಡನೇ ಬಾರಿ ಕೊನೆಯ ಸಾರಿ ವಂಚಿಸಿದವನೇ ಈ ಗೋಪಿನಾಥ್. ತಾನೇ ಮದುವೆಯಾಗುತ್ತೇನೆಂದು ಈತ ನಮಿತಾಳನ್ನು ಮುಕ್ಕಿದ್ದು, ಸೈಟು ಕೊಡಿಸುತ್ತೇನೆಂದು ಆಕೆಯಿಂದ ಎರಡೂವರೆ ಲಕ್ಷ ಕಿತ್ತಿದ್ದು ಮತ್ತು ತನ್ನ ತಂದೆ ನಡೆಸುವ ಚೀಟಿಗೆ ನಮಿತಾಳಿಂದ ದುಡ್ಡು ಹಾಕಿಸಿದ್ದು; ಕೊನೆಗೆ ಬೇರೊಬ್ಬಳನ್ನು ಮದುವೆಯಾಗಿ ಆಕೆಯೂ ಗರ್ಭಿಣಿ ಎಂಬ ವಿಷಯ ಗೊತ್ತಾಗಿದ್ದೇ ನಮಿತಾ ಕುಸಿದು ಹೋಗಿದ್ದಾಳೆ.

ಅದೇ ಹೊತ್ತಿಗೆ ಆಕೆಯ ತಂದೆತಾಯಿ ಇನ್ನಾರೋ ಮುಸ್ಲಿಂ ಹುಡುಗನೊಂದಿಗೆ ಆಕೆಯ ಮದುವೆ ಗೊತ್ತು ಮಾಡಿದಾಗ ಸೈಟಿಗೆಂದು ಕೊಟ್ಟ ದುಡ್ಡನ್ನು ನಮಿತಾ ಕೇಳಿದ್ದಾಳೆ. ಅತ್ತ ಚೀಟಿಯ ದುಡ್ಡೂ ಇಲ್ಲ, ಸೈಟಿನ ದುಡ್ಡೂ ಇಲ್ಲ. ಎಂದಾದಾಗ ಮತ್ತಷ್ಟು ತಲ್ಲಣಿಸಿದ್ದಾಳೆ. ನಂಬಿದವರೆಲ್ಲರೂ ವಂಚಿಸಿಬಿಟ್ಟರು. ಕಂಡ ಕನಸುಗಳ್ಯಾವುದೂ ಕೈಗೂಡಲಿಲ್ಲ. ಒಂಟಿ ಬದುಕು, ಹತಾಶ ಸ್ಥಿತಿ ಆಕೆಯನ್ನು ಸಹಜವಾಗೇ ಆತ್ಮಹತ್ಯೆಗೆ ತಳ್ಳಿವೆ. ಅಂತಿಮವಾಗಿ ಮೇ 8 ರಂದು ರಾತ್ರಿ ನಮಿತಾ ನೇಣು ಹಾಕಿಕೊಂಡು ಸತ್ತಿದ್ದಾಳೆ.

ಪ್ರಶ್ನೆಯೆಂದರೆ ನಮಿತಾಳ ಅಣ್ಣ ಮತ್ತು ತಂದೆಯೇ ವಿಜಯನಗರ ಪೊಲೀಸ್ ಠಾಣೆಗೆ ಬಂದು ಗೋಪಿನಾಥನ ವಿರುದ್ಧ ದೂರು ಕೊಟ್ಟಾಗಲೂ ಪೊಲೀಸರೇಕೆ ಗೋಪಿನಾಥನ ಮೇಲೆ ಕೇಸು ಹಾಕುತ್ತಿಲ್ಲ?

ನಮಿತಾಳ ಡೆತ್‌ನೋಟೇ ಹೇಳುವಂತೆ ನಂಬಿದವರೆಲ್ಲ ಮೋಸ ಮಾಡಿದ್ದರಿಂದ ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಬಣ್ಣದ ಲೋಕದ ಕನಸು ಕಂಡಿದ್ದ ಈ ಹುಡುಗಿಯು ತನ್ನ ಜೀವನದಲ್ಲಿ ಕಂಡಿದ್ದು ಬರೀ ಕಪ್ಪು ಬಣ್ಣ. ನಂಬಿದವರಿಂದ ಸಿಕ್ಕಿದ್ದು ಬರೀ ವಂಚನೆ. ಇಷ್ಟು ಚಿಕ್ಕ ಜೀವನದಲ್ಲೇ ಅಷ್ಟೊಂದು ನೋವನ್ನುಂಡಿದ್ದ ನಮಿತಾ ಇದೆಲ್ಲದಕ್ಕೆ ವಿದಾಯ ಹೇಳಿದ್ದಾಳೆ.

ಜೀವನದಲ್ಲಿ ಬರೀ ನಿರಾಶೆ, ನೋವುಗಳೇ ಸಿಕ್ಕರೆ ಪುಟ್ಟ ಜೀವನವೂ ಸಾಕೆನಿಸುತ್ತದೆ.

ನಮಿತಾ ಎಂಬ ಪುಟ್ಟ ಹುಡುಗಿಗೆ ಆಗಿದ್ದೂ ಅದೇನೆ... ಛೇ......

-ರಾ. ಸೋ

ಹಾಸನದಲ್ಲಿ ಎಸ್ಸೈ ಯೋಗೀಶ್ ದರ್ಬಾರ್

ಹಾಸನದಲ್ಲಿ ಒಬ್ಬ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಇದ್ದಾನೆ. ಅವನ ಹೆಸರು ಡಿ. ಯೋಗೀಶ್. ಇತ್ತೀಚೆಗೆ ಯಾಕೋ ಈತ ಕುಂಡೆಯ ಮೇಲೆ ಕುರ ಎದ್ದವನಂತೆ ಆಡುತ್ತಿದ್ದಾನೆ. ಕಂಡಕಂಡವರನ್ನು ಕಂಡಕಂಡಲ್ಲಿ ಥಳಿಸುವುದು, ತನ್ನ ಪೊಲೀಸ್ ಪೌರುಷವನ್ನು ಹಾದಿ ಬೀದಿಯಲ್ಲಿ ತೋರಿಸುವುದು ಶುರು ಮಾಡಿಕೊಂಡಿದ್ದಾನೆ. ಒಮ್ಮೊಮ್ಮೆ ಇಂಗು ತಿಂದ ಮಂಗನ ಮುಖ ಮಾಡಿಕೊಂಡೂ ಕುಳಿತಿರುತ್ತಾನೆ. ಇವನೇನು ಪೊಲೀಸನೋ, ಅರೆಹುಚ್ಚನೋ ಅಥವಾ ರೌಡಿಯೋ-ಹಾಸನದ ಜನಕ್ಕಂತೂ ಅರ್ಥವಾಗುತ್ತಿಲ್ಲ.

ಮೊನ್ನೆ ಮೇ ಎರಡರಂದು ನಡೆದ ಘಟನೆಯನ್ನೇ ನೋಡಿ. ಕಾನೂನು, ಐಟಿಐ, ಡಿಪ್ಲೊಮಾ, ಸ್ನಾತಕೋತ್ತರ, ಟಿಸಿಎಚ್, ಬಿಎಡ್- ಹೀಗೆ ಮುಂತಾದ ಕೋರ್ಸುಗಳ ಸಾವಿರಾರು ವಿದ್ಯಾರ್ಥಿಗಳು ಹಾಸನದ ಕೆಎಸ್‌ಆರ್‌ಟಿಸಿ ಬಸ್‌ಸ್ಟ್ಯಾಂಡಿನಲ್ಲಿ ಪಾಸ್‌ಗಳನ್ನು ಪಡೆಯಲು ಸಾಲುಗಟ್ಟಿ ನಿಂತಿದ್ದರು. ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಸ್ ಪಡೆಯುವುದಕ್ಕೆ ಬರುತ್ತಾರೆಂದು ಗೊತ್ತಿದ್ದರೂ ಹೆಚ್ಚು ಕೌಂಟರ್‌ಗಳನ್ನು ತೆರೆಯದೇ ಕೇವಲ ಒಂದೇ ಒಂದು ಕೌಂಟರ್‌ನಲ್ಲಿ ಪಾಸ್ ವಿತರಿಸುತ್ತಿದ್ದರು ಕೆಎಸ್‌ಆರ್‌ಟಿಸಿಯ ಮಹಾಶಯರು. ಅಲ್ಲದೇ ನಿಗದಿತ ದರಕ್ಕಿಂತ 8 ರೂ.ಗಳನ್ನು ಹೆಚ್ಚುವರಿಯಾಗಿ ವಿದ್ಯಾರ್ಥಿಗಳಿಂದ ವಸೂಲಿ ಮಾಡುತ್ತಿದ್ದರು. ಯಾಕೆ ಎಂದು ಯಾರಾದರೂ ಪ್ರಶ್ನಿಸಿದರೆ ಲ್ಯಾಮಿನೇಷನ್ ಚಾರ್ಜ್ ಅಂತ ಉತ್ತರ. ವಾಸ್ತವದಲ್ಲಿ ಪಾಸ್‌ನ ಹಿಂಬದಿಯಲ್ಲಿ ಜಾಹೀರಾತು ಪ್ರಕಟಿಸ ಬಯಸುವ ಕಂಪೆನಿಗಳೇ ಉಚಿತವಾಗಿ ಲ್ಯಾಮಿನೇಷನ್ ಮೆಷಿನ್ ಮತ್ತು ಪ್ಲಾಸ್ಟಿಕ್ ಶೀಟ್‌ಗಳನ್ನು ಒದಗಿಸಿವೆ. ಹಾಗಾಗಿ ಲ್ಯಾಮಿನೇಷನ್ ಚಾರ್ಜ್ ಅಂತ ಹೆಚ್ಚುವರಿ ಹಣವನ್ನು ವಸೂಲಿ ಮಾಡುವ ಅಗತ್ಯವಿಲ್ಲ. ಹೋಗಲಿ, ಹಣ ವಸೂಲಿ ಮಾಡಿದ್ದಾರೆಂದರೆ ಲ್ಯಾಮಿನೇಷನ್ ಮಾಡಿ ಕೊಡಬೇಕಲ್ಲವೆ? ಅದನ್ನೂ ಮಾಡಿಲ್ಲ. ಇದನ್ನೆಲ್ಲಾ ನೋಡಿದ ವಿದ್ಯಾರ್ಥಿಗಳ ತಾಳ್ಮೆ ಕಟ್ಟೆಯೊಡೆಯಲಾರಂಭಿಸಿತ್ತು. ಅಷ್ಟರಲ್ಲಿ ಕೆಲವರಿಂದ 100 ರೂಪಾಯಿ ಹೆಚ್ಚುವರಿ ಲಂಚ ಪಡೆದು ಅವರಿಗೆ ಮೊದಲು ಪಾಸ್ ನೀಡಿ ಕಳಿಸಲು ಪ್ರಾರಂಭಿಸಿದರು. ಒಂದೇ ಕೌಂಟರ್ ಇದ್ದುದರಿಂದ ಬೆಳಗ್ಗೆಯಿಂದ ಊಟ-ನೀರು ಬಿಟ್ಟು ಕ್ಯೂನಲ್ಲಿ ನಿಂತಿದ್ದವರ ಕೋಪ ನೆತ್ತಿಗೇರಿತು. ಕೆಲವರಿಗಂತೂ ಸಂಜೆಯಾದರೂ ಪಾಸ್ ಸಿಕ್ಕಿರಲಿಲ್ಲ. ಈ ರೀತಿ ಹೆಜ್ಜೆ ಹೆಜ್ಜೆಗೂ ಅನ್ಯಾಯ ನಡೆಯುತ್ತಿರುವುದನ್ನು ಪ್ರತಿಭಟಿಸಿದರು. 50-60 ಮಂದಿ ವಿದ್ಯಾರ್ಥಿಗಳು ಕೆಎಸ್‌ಆರ್‌ಟಿಸಿಯ ಡಿಸಿಯನ್ನು ಭೇಟಿ ಮಾಡಿ ವಿಚಾರ ತಿಳಿಸಿದರು. ಆತನಿಂದಲೂ ಯಾವುದೇ ರೀತಿಯ ಸಮರ್ಪಕ ಉತ್ತರ ಸಿಗಲಿಲ್ಲ. ಅಲ್ಲಿಯೇ ವಿದ್ಯಾರ್ಥಿಗಳು ಶಾಂತಿಯುತವಾಗಿ ಪ್ರತಿಭಟನಾ ಧರಣಿ ನಡೆಸಲಾರಂಭಿಸಿದರು.

ಕೆಎಸ್‌ಆರ್‌ಟಿಸಿಯ ಡಿಸಿ ಗಂಗನಗೌಡ ಸ್ಥಳಕ್ಕಾಗಮಿಸಿದ. ಬಂದವನು ವಿದ್ಯಾರ್ಥಿಗಳ ಅಹವಾಲುಗಳನ್ನು ಕೇಳುವುದನ್ನು ಬಿಟ್ಟು ನೇರವಾಗಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಡಿ. ಯೋಗೀಶ್‌ಗೆ ಫೋನಾಯಿಸಿದರು. ಭಾರಿ ದೊಡ್ಡ ಭಯೋತ್ಪಾದಕರ ಗ್ಯಾಂಗನ್ನು ಹಿಡಿಯಲೇನೋ ಎಂಬಂತೆ ಎಸ್ಸೈ ಯೋಗೀಶ್ ಕ್ಷಿಪ್ರ ಕಾರ್ಯಾಚರಣೆ ಪಡೆ (RAF)ಯನ್ನು ತೆಗೆದುಕೊಂಡು ಸ್ಥಳಕ್ಕೆ ಬಂದ. ವಿಷಯ ಏನು ಎಂದು ವಿಚಾರಿಸುವ ಕನಿಷ್ಠ ಜ್ಞಾನ-ತಾಳ್ಮೆ ಇಲ್ಲದ ಈ ಅರೆಹುಚ್ಚ ಯೋಗೀಶ್ ವಿನಾಕಾರಣ ಶಾಂತಿಯುತವಾಗಿ ಕುಳಿತಿದ್ದ ವಿದ್ಯಾರ್ಥಿಗಳ ಮೇಲೆ ಎರಗಿ ಲಾಠಿ ಚಾರ್ಜ್ ನಡೆಸಿದ. ಇವನ ರಕ್ಕಸ ಆರ್ಭಟಕ್ಕೆ ವಿದ್ಯಾರ್ಥಿಗಳೆಲ್ಲಾ ದಿಕ್ಕಾಪಾಲಾಗಿ ಹೋದರು. ಇಡೀ ಬಸ್‌ಸ್ಟ್ಯಾಂಡ್ ತುಂಬೆಲ್ಲಾ ಅಟ್ಟಾಡಿಸಿಕೊಂಡು ವಿದ್ಯಾರ್ಥಿಗಳನ್ನು ಥಳಿಸಿತು ಈ ಡಿ. ಯೋಗೀಶ ಮತ್ತವನ ರಕ್ಕಸ ಗ್ಯಾಂಗ್. ರಕ್ಷಣೆಗಾಗಿ ವಿದ್ಯಾರ್ಥಿನಿಯರು ಬಸ್ ಏರಿದರೂ ಬಿಡದೆ ಒಳನುಗ್ಗಿ ಥಳಿಸಿದರು. ಹುಡುಗಿಯರ ಮುಂದೆ ಇಂತಹ ಪರಾಕ್ರಮ ತೋರಿಸಿದ ಇವನಿಗೆ 'ಪರಮವೀರಚಕ್ರ' ಪ್ರಶಸ್ತಿ ಕೊಡಬಹುದೇನೋ.

ಈ ಘಟನೆಯ ವಿಚಾರ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಎಸ್‌ಎಫ್‌ಐ ವಿದ್ಯಾರ್ಥಿ ಸಂಘಟನೆಯ ಮುಖಂಡರು ಘಟನೆಯ ಬಗ್ಗೆ ಮಾಹಿತಿ ಪಡೆಯುತ್ತಿದ್ದಾಗಲೇ ಹಿಂದಿನಿಂದ ಬಂದ ಯೋಗೇಶ್ ಅವರ ಮೇಲೆಯೂ ಹಲ್ಲೆ ಮಾಡಿದ. ಇಡೀ ಬಸ್‌ಸ್ಟ್ಯಾಂಡಿನಾದ್ಯಂತ ಅವರನ್ನು ಎಳೆದಾಡಿ, ಅವಾಚ್ಯ ಶಬ್ದಗಳಿಂದ ಬೈಯ್ದು "ಇಷ್ಟು ದಿನ ನಿಮಗಾಗಿ ಕಾಯುತ್ತಿದ್ದೆ. ಈಗ ಒಳ್ಳೆ ಅವಕಾಶ ಸಿಕ್ಕಿದೆ. ನಾನು ಏನು ಅಂತ ತೋರಿಸುತ್ತೇನೆ. ನಾನು ಹೊಳೆನರಸೀಪುರದ ಕಡೆಯವನು. ಖಾಕಿ ಶಕ್ತಿ ಏನು ಅಂತ ತೋರಿಸುತ್ತೇನೆ" ಎಂದು ಆರ್ಭಟಿಸುತ್ತಾ ಅವರನ್ನು ಆಟೋದಲ್ಲಿ ಕೂರಿಸಿಕೊಂಡು ಆಟೋದೊಳಗಡೆಯೇ ಹೊಡೆಯುತ್ತಾ ಪೊಲೀಸ್ ಠಾಣೆಗೆ ಕರೆತಂದಿದ್ದಾನೆ. ಠಾಣೆಯಲ್ಲೂ ಇವನದು ಇದೇ ಹರಿಕಥೆ, ಇದೇ ರಾಕ್ಷಸೀ ದರ್ಬಾರ್.

SFI ನ ಮುಖಂಡರೊಬ್ಬರು ಎಸ್ಪಿಗೆ ಫೋನ್ ಮಾಡಿದಾಗ, ತಿರುಗಿ ಎಸ್ಪಿ ಠಾಣೆಗೆ ಫೋನ್ ಮಾಡಿ ಅವರನ್ನು ಬಿಡುಗಡೆ ಮಾಡಿ ಅಂತ ಆದೇಶ ನೀಡಿದ ಮೇಲೆ ಯೋಗೀಶನ ತಿಕ್ಕಲುತನ ನಿಂತಿದೆ. ಗಾಯಗೊಂಡ ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಯೋಗೀಶನ ಅನಾಗರಿಕ ವರ್ತನೆಯನ್ನು ಖಂಡಿಸಿ, ಅವನನ್ನು ಸಸ್ಪೆಂಡ್ ಮಾಡಬೇಕೆಂದು ಆಗ್ರಹಿಸಿ ಮರುದಿನ ವಿದ್ಯಾರ್ಥಿಗಳು ದೊಡ್ಡ ಪ್ರತಿಭಟನೆ ನಡೆಸಿದರು. ಎಸ್ಪಿ ಠಾಣೆಯವರು ಡಿವೈಎಸ್ಪಿಯ ಮೂಲಕ ಇಲಾಖೆ ತನಿಖೆ ನಡೆಸುವುದಾಗಿಯೂ ಹೇಳಿದರು. ಈ ಯೋಗೀಶನ ತಿಕ್ಕಲುತನ ಎಷ್ಟಿದೆ ಎಂದರೆ, ಅವನು ಅದೇ ದಿನ ನಗರದ ಪುಡಿ ರೌಡಿಗಳನ್ನು, ಮಟ್ಕಾ ಬರೆಯುವವರನ್ನು, ಬಡ್ಡಿ ವ್ಯಾಪಾರಸ್ಥರನ್ನು, ಹಿಂದೂ ಯುವ ಸೇನೆಯ ಪುಢಾರಿಗಳನ್ನು ಕಲೆ ಹಾಕಿ ತನ್ನ ಪರವಾಗಿ ಹಾಗೂ ಆ ವಿದ್ಯಾರ್ಥಿಗಳ ವಿರುದ್ಧವಾಗಿ ತಾನೂ ಒಂದೂ ಪ್ರತಿಭಟನೆ ನಡೆಸಿದ! ತಾನೇ ಖುದ್ದು ಪೇಪರಿನವರಿಗೆ ಫೋನ್ ಮಾಡಿ "ನನ್ನ ಪರವಾಗಿ ಪ್ರತಿಭಟನೆ ನಡೆಯುತ್ತಿದೆ, ಅಲ್ಲಿಗೆ ಹೋಗಿ ವರದಿ ಬರೆಯಿರಿ" ಅಂತ ಹೇಳಿದ!

ಆತನ ವಿರುದ್ಧ ತನಿಖೆಗೆ ಆದೇಶಿಸಿ ವಾರ ಮುಗಿದಿದೆ. ಇನ್ನೂ ಏನೂ ಬೆಳವಣಿಗೆ ಇಲ್ಲ. ಎಸ್ಪಿ ರಾಣೆ ಮತ್ತು ಡಿವೈಎಸ್ಪಿ ರುದ್ರಪ್ಪನವರು ತಿಪ್ಪೆ ಸಾರಿಸುವ ಉತ್ತರ ನೀಡುತ್ತಾರೆ. ಇದನ್ನೆಲ್ಲಾ ವಿರೋಧಿಸಿ ವಿದ್ಯಾರ್ಥಿಗಳು ಮತ್ತೆ ಬೀದಿಗಿಳಿಯುವ ನಿರ್ಧಾರ ಮಾಡಿದ್ದಾರೆ.

ಇಲ್ಲಿ ಒಂದು ವಿಶೇಷವಿದೆ. ಇಂತಹ ತಿಕ್ಕಲುತನದ, ಅರೆಹುಚ್ಚ ರೌಡಿ ಎಸ್ಸೈ ಯೋಗೀಶನಿಗೆ ಅದ್ಯಾವ ಪುರುಷಾರ್ಥಕ್ಕೋ ಗೊತ್ತಿಲ್ಲ ಮೊನ್ನೆ ಮುಖ್ಯಮಂತ್ರಿಗಳ ಬಂಗಾರದ ಪದಕ ಕೊಟ್ಟಿದ್ದಾರೆ! ಇವನ ತಿಕ್ಕಲುತನ ಹಾಗೇ ಮುಂದುವರೆದರೆ ಹಾಸನದ ವಿದ್ಯಾರ್ಥಿ-ವಿದ್ಯಾರ್ಥಿನಿಯರೇ ಇವನನ್ನು ರಸ್ತೆಯಲ್ಲಿ ಬೆತ್ತಲೆಗೊಳಿಸಿ, ಅಟ್ಟಾಡಿಸಿಕೊಂಡು ಹೊಡೆಯುವ ದಿನ ದೂರ ಇಲ್ಲ.

-ವರದಿಗಾರ

ಕಾಂಗ್ರೆಸ್ ನಾಯಕರ 'ಸಿದ್ದು ದಮನ'ಕ್ಕೆ ತಿರುಗೇಟು!


ಸಿದ್ದು ಚಿತ್ತ ಬಿಎಸ್‌ಪಿಯತ್ತ?

ಸಿದ್ದರಾಮಯ್ಯ ಜಾಲಿಗೀಗ ಕಾಂಗ್ರೆಸ್ ಹುಳಿ ಹಾತ್ತಿಯೇ? ಇಷ್ಟರಲ್ಲೇ ಸಿ.ಎಂ. ಇಬ್ರಾಹಿಂ, ಮಹಾದೇವಪ್ಪ, ಜಾರಕಿಹೊಳಿ, ಎ.ಕೆ. ಸುಬ್ಬಯ್ಯ, ಕೋದಂಡರಾಮಯ್ಯ ಇತ್ಯಾದಿ ತಮ್ಮ ಸಮಸ್ತ ಪರಿವಾರದೊಂದಿಗೆ ಸಿದ್ದು 'ಅಂಬಾರಿ' ಗುಳೆ ಹೊರಡುತ್ತಾ?

ಅಂದಹಾಗೆ 'ಅಂಬಾರಿ' ಅಂದರೆ ಆನೆ ಮೇಲೆ ಅಂಬಾರಿ!

ಅರ್ಥಾತ್ ಕಾಂಗ್ರೆಸ್ ತೊರೆದು ಸಿದ್ದು ಸವಾರಿ ಬಿಎಸ್‌ಪಿಯತ್ತ ಸಾಗಲಿದೆ?

ತಪ್ಪೋ ನೆಪ್ಪೋ; ಹಾಗುಂತ ಸಿದ್ದು ಪಾಳಯದಲ್ಲೊಂದು ಗುಲ್ಲೆದ್ದಿರುವುದಂತೂ ಸತ್ಯ! ಕುರುಬರ ನಾಯಕ ಸಿದ್ದರಾಮಯ್ಯ ಕಾಂಗ್ರೆಸ್ಸಿಗೆ ಬಂದಿದ್ದೇ ದೊಡ್ಡ ತಪ್ಪು. ಜೀವನ ಪರ್ಯಂತ ಕಾಂಗ್ರೆಸ್ಸನ್ನು ವಿರೋಧಿಸಿಕೊಂಡೇ ಬಂದವರು ಸಿದ್ದು. ರಾತ್ರಿ ಕಂಡ ಬಾವಿಯಲ್ಲಿ ಹಗಲು ಬಿದ್ದಂತೆ ಗೊತ್ತಿದ್ದೂ ಅವರು ಕಾಂಗ್ರೆಸ್ಸಿಗೆ ಬರಲೇಬಾರದಿತ್ತು. ಈಗ ನೋಡಿ ಖರ್ಗೆ ಮತ್ತು ಧರ್ಮಸಿಂಗ್ ಸಿದ್ರಾಮಣ್ಣಂಗೇ ಟಾಂಗ್ ಕೊಟ್ಟು ದೇವೇಗೌಡರ ಜೊತೆ ಚಕ್ಕಂದಕ್ಕಿಳಿದಿದ್ದಾರೆ. ಕಾಂಗ್ರೆಸ್ಸಿನೊಳಗೇ ಅವರನ್ನು ಮೂಲೆಗುಂಪು ಮಾಡುವ ಮಾಸ್ಟರ್ ಪ್ಲಾನ್ ರೆಡಿಯಾಗಿದೆ. ಸಿದ್ದು ಜಾಯಮಾನಕ್ಕೆ ಕಾಂಗ್ರೆಸ್ ಒಗ್ಗುವುದುಂಟಾ?




ಇದು ಸಿದ್ದು ಬೆಂಬಲಿಗರ ಬೇಗುದಿ. ಸಿದ್ದು ಬಲಗೈ ಬಂಟನಂತಿರುವ ಮುಕುಡಪ್ಪ, ಪಕ್ಕಾ ಬೆಂಬಲಿಗ ಕೋದಂಡರಾಮಯ್ಯ, ಆಳಂದದ ಶಾಸಕ ಬಿ.ಆರ್. ಪಾಟೀಲ್ ಥರದವರೇ ಬಹಿರಂಗವಾಗಿ ಸಿದ್ದು ಮೇಲಿನ ಕಾಂಗ್ರೆಸ್ ದುರ್ವರ್ತನೆಯ ವಿರುದ್ಧ ಕಿಡಿಕಾರುತ್ತಿದ್ದಾರೆಂದರೆ ಏನರ್ಥ?

ಸಿದ್ದು ಚಿತ್ತ ಬಿಎಸ್‌ಪಿಯತ್ತ ಎಂಬುದಕ್ಕೆ ಇದಕ್ಕಿಂತ ಬೇಕೆ?

ಇಲ್ಲಿಗೆ ವಾರದ ಹಿಂದೆಯೇ ಸಿದ್ದು ಇಷ್ಟರಲ್ಲೇ ಕಾಂಗ್ರೆಸ್ ತೊರೆಯುತ್ತಾರೆಂದು ಹೊಗೆಯಾಡಿದ್ದು, ಬೆನ್ನಲ್ಲೇ ಸಮಾಜವಾದಿ ಪಕ್ಷ ಸೇರುತ್ತಾರೆಂದು ಗುಲ್ಲೆದ್ದಿದ್ದು ಇಂಥದೊಂದು ಬೆಳವಣಿಗೆಯ ಲಕ್ಷಣವಲ್ಲದೇ ಮತ್ತೇನು? ಈಗದು ಬಹುಜನ ಸಮಾಜ ಪಕ್ಷದತ್ತ ವಾಲಿದೆ. ಹಾಗೆ ನೋಡಿದರೆ ಸಮಾಜವಾದಿ ಪಕ್ಷಕ್ಕಿಂತಲೂ ಬಿಎಸ್‌ಪಿಯೇ ಸಿದ್ದು ಪಾಲಿಗೆ ಅನಿವಾರ್ಯವೇ? ಸಿ.ಎಂ. ಇಬ್ರಾಹಿಂ ಮತ್ತು ಕೋದಂಡರಾಮಯ್ಯ ಇತ್ಯಾದಿಗಳು ಅವರನ್ನು ಬಿಎಸ್‌ಪಿಗೆ ಎಳೆಯುತ್ತಿರಬಹುದೆ? ಅಥವಾ ಕಾಂಗ್ರೆಸ್ ನಾಯಕರ ಸಿದ್ದು ದಮನದ ವಿರುದ್ಧ ಸಿದ್ದು ಬೆಂಬಲಿಗರೇ ಈ ರೀತಿ ಗುಲ್ಲೆಬ್ಬಿಸುತ್ತಿರಬಹುದೆ?

ಆದರೆ ಕಾಂಗ್ರೆಸ್ ಸೇರಿದ ತಪ್ಪಿಗೆ ಸಿದ್ದರಾಮಯ್ಯ ಅನುಭವಿಸುತ್ತಿರುವ ಅನ್ಯಾಯ ಮತ್ತು ಅವಮಾನಗಳನ್ನು ಕಂಡ ಯಾರಿಗಾದರೂ ಈ ಥರದ ಅನುಮಾನಗಳಲ್ಲಿ ಹುರುಳಿಲ್ಲ ಎನ್ನಿಸುತ್ತಿಲ್ಲ.

ಸಿದ್ದರಾಮಯ್ಯ ಯಾರೋ ಪುಡಿ ರಾಜಕಾರಣಿಯಲ್ಲ, ಮಾಜಿ ಉಪಮುಖ್ಯಮಂತ್ರಿ. ರಾಜ್ಯದ ಲಿಂಗಾಯತರು, ಒಕ್ಕಲಿಗರು, ದಲಿತರನ್ನು ಹೊರತುಪಡಿಸಿದರೆ ನಾಲ್ಕನೇ ಅತೀ ದೊಡ್ಡ ಜನಾಂಗವಾದ ಕುರುಬರ ಪ್ರಶ್ನಾತೀತ ನಾಯಕ. ಅರಸು ನಂತರ ಹಿಂದುಳಿದ ವರ್ಗಗಳ ಪಾಲಿಗೆ ಅನಿವಾರ್ಯವೆನಿಸಿದ ನೇತಾರ. ಇಂಥವರನ್ನು ಮುಂದಿಟ್ಟುಕೊಂಡು ರಾಜ್ಯದ ಸಮಸ್ತ ಕುರುಬರನ್ನು ಕಾಂಗ್ರೆಸ್ಸಿನತ್ತ ಸೆಳೆದುಕೊಂಡು, ಅವರ ಜೊತೆಗೇ ಇಬ್ರಾಹಿಂ ಮತ್ತು ಶ್ರೀನಿವಾಸ್‌ಪ್ರಸಾದ್‌ರ ಮೂಲಕ ಒಂದಷ್ಟು ಮುಸ್ಲಿಂ ಮತ್ತು ದಲಿತರನ್ನೂ ಆಕರ್ಷಿಸುವ ತಂತ್ರವನ್ನು ಕಾಂಗ್ರೆಸ್ ರೂಪಿಸಬೇಕಿತ್ತು. ಅಂಥಾದ್ದೊಂದು ವಿವೇಕ ಮತ್ತು ದೊಡ್ಡ ಮನಸ್ಸು ಕೂಡಾ ಕಾಂಗ್ರೆಸ್ ನಾಯಕರಿಗಿರಬೇಕಿತ್ತು.



ಆದರೆ ಕಾಂಗ್ರೆಸ್ ಅದೆಷ್ಟು ಕುಲಗೆಟ್ಟದೆಯೆಂದರೆ ಖರ್ಗೆಗೆ ಎಲ್ಲಿ ಸಿದ್ರಾಮಯ್ಯ ತನ್ನ ಮುಖ್ಯಮಂತ್ರಿ ಕನಸಿಗೆ ಕೊಳ್ಳಿಯಿಟ್ಟಾರೋ ಎಂಬ ಅಳುಕು. ಧರ್ಮಸಿಂಗ್‌ಗೆ ಹೊಟ್ಟೆಕಿಚ್ಚು. ಭೂಕಂಟಕ ಆರ್.ವಿ. ದೇಶಪಾಂಡೆ, ವಯೋವೃದ್ಧ ಆರ್.ಎಲ್. ಜಾಲಪ್ಪ, ಮಳ್ಳಿ ಆಸ್ಕರ್, ವಾಚಾಳಿ ಪೂಜಾರಿ, ಬಳಿಕಾಲರ್ ಮೊಯ್ಲಿ, ದುಶ್ಯಾಸನ ದೀಕೆ ಎಲ್ಲರೂ ಮುಖ್ಯಮಂತ್ರಿಗಿರಿಯ ಮೇಲೆ ಕಣ್ಣಿಟ್ಟ ತಿಮಿಂಗಿಲಗಳೆ. ಇವರ್‍ಯಾರಿಗೂ ಸಿದ್ದು ವರ್ಚಸ್ಸಿಲ್ಲದೇ ಹೋದರೂ ಸಂಪತ್ತಿದೆ. ಇಂಥವರ ಜೊತೆ ವೇದಿಕೆಯಲ್ಲಿ ಕುರ್ಚಿಗಾಗಿ ಸಿದ್ದು ಪರದಾಡಬೇಕು.



ಭಾರೀ ಭರಾಟೆಯಿಂದಲೇ ಸಿದ್ದರಾಮಯ್ಯನವರನ್ನು ಕಾಂಗ್ರೆಸ್ ಬರಮಾಡಿಕೊಂಡಿತು ನಿಜ. ಆದರೆ ಬರುಬರುತ್ತ ಸಿದ್ದು ತಲೆ ಕಂಡರೇನೇ ಖರ್ಗೆ ಸಿಡಿಮಿಡಿಗೊಳ್ಳುತ್ತಿದ್ದರು. ಕಾಂಗ್ರೆಸ್‌ನ ಮಾಮೂಲಿ ಸಭೆ ನಡೆದರೂ ಸಿದ್ದು ಬಂದರೆಂದು ಯಾರಾದರೂ ವೇದಿಕೆಯಲ್ಲಿ ಕುರ್ಚಿ ಬಿಟ್ಟುಕೊಡಲು ಹೋದರೆ 'ಬರ್‍ತಾರ್ ಬಿಡ್ರೀ....... ನೀವ್ಯಾಕ್ ಗಾಬರಿ ಮಾಡ್ಕೋತೀರಿ?' ಎಂದು ಖರ್ಗೆ ಕೊಂಕತೊಡಗಿದರು. ಪಕ್ಕದಲ್ಲೇ ಕೂತಿರುತ್ತಿದ್ದ ಧರ್ಮಸಿಂಗ್

ರಾ. ಸೋಮನಾಥ್

ಕಾಟಾಚಾರಕ್ಕೂ 'ಬನ್ನಿ ಕೂತ್ಕೊಳ್ಳೀ....!' ಎಂದು ಸಿದ್ದರಾಮಯ್ಯನವರನ್ನು ಕರೆಯುತ್ತಿರಲಿಲ್ಲ.

ಮೊದಮೊದಲು ಇದೆಲ್ಲ ಇದ್ದಿದ್ದೇ ಎಂದು ಸಿದ್ದು ಅನುಸರಿಸಿಕೊಂಡರು. ಆದರೆ ಬರುಬರುತ್ತ ಸಣ್ಣಪುಟ್ಟ ಕಾಂಗ್ರೆಸ್ ಸಭೆಗಳಿಗೂ ಸಿದ್ದರಾಮಯ್ಯನವರನ್ನು ಕಡೆಗಣಿಸತೊಡಗಿದರು. ಸ್ವತಃ ಖರ್ಗೆಯೇ ನಿಂತು ಇದೆಲ್ಲವನ್ನು ಮಾಡಿಸುತ್ತಿದ್ದಾರೆಂಬುದು ಸಿದ್ದುಗಾಗಲೇ ಅರ್ಥವಾಗಿತ್ತು. ಎಲ್ಲಕ್ಕೂ ಮಿಗಿಲಾಗಿ ನೆಲಗಳ್ಳರ ನಾಯಕ ಆರ್.ವಿ. ದೇಶಪಾಂಡೆಗೆ ಸಿದ್ದು ತುಳಿಯಬೇಕಿತ್ತು. ಇಲ್ಲಿಗೆ ಹದಿನೈದು ದಿನಗಳ ಹಿಂದೆ ಹುಬ್ಬಳ್ಳಿಯಲ್ಲಿ ನಡೆದ ಬೃಹತ್ ಕಾಂಗ್ರೆಸ್ ಸಮಾವೇಶಕ್ಕೆ ಸೌಜನ್ಯಕ್ಕೂ ಸಿದ್ದರಾಮಯ್ಯನವರನ್ನು ಆಹ್ವಾನಿಸದ ಹಾಗೆ ದೇಶಪಾಂಡೆ ಷಡ್ಯಂತ್ರ ರೂಪಿಸಿದ. ಅತ್ತ ಹುಬ್ಬಳ್ಳಿ ಸಮಾವೇಶದಲ್ಲಿ ನಾಯಕರೆಲ್ಲರೂ ವೇದಿಕೆಯಲ್ಲಿ ಮಿಂಚುತ್ತಿದ್ದರೆ ಸಿದ್ದು ಅವಮಾನ ತಾಳಲಾರದೇ ಮೈಸೂರಿನಲ್ಲಿ ಓಡಾಡಿಕೊಂಡಿದ್ದರು!

ಹಾಗಂತ ಸಿದ್ದು ಸುಮ್ಮನೇ ಕೂರಲಿಲ್ಲ. ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಹೋದಲ್ಲೆಲ್ಲ ಗೌಡರ ವಿರುದ್ಧ ಹರಿಹಾಯತೊಡಗಿದ್ದರು. ಜೊತೆಗೆ ಕಾಂಗ್ರೆಸ್ ಕಾರ್ಯಕರ್ತರನೇಕರು ಎಲ್ಲೆಂದರಲ್ಲಿ ಸಿದ್ದು ಸನ್ಮಾನ ಸಮಾರಂಭ ಹಮ್ಮಿಕೊಂಡರೆ ಖರ್ಗೆ-ದೇಶಪಾಂಡೆ ಅದನ್ನೂ ಸಹಿಸಲಿಲ್ಲ. ಯಾರೂ ಕಾಂಗ್ರೆಸ್ ಬ್ಯಾನರಿನಲ್ಲಿ ಸಿದ್ದರಾಮಯ್ಯನವರನ್ನು ಸನ್ಮಾನಿಸಕೂಡದೆಂದು ಅಧಿಕೃತವಾಗೇ ಕೆಪಿಸಿಸಿಯಿಂದ ಸುತ್ತೋಲೆ ಹೊರಡಿಸಿದ್ದರು.

ರಾಜ್ಯದ ಎಲ್ಲಾ ಡಿಸಿಸಿ ಮತ್ತು ಬ್ಲಾಕ್ ಕಾಂಗ್ರೆಸ್ ಕಮಿಟಿಗಳಿಗೆ ಈ ಥರದ ವಿಲಕ್ಷಣ ಸುತ್ತೋಲೆಯೊಂದನ್ನು ಹೊರಡಿಸಿದವನು ಕೆಪಿಸಿಸಿ ಕಾರ್ಯದರ್ಶಿ ಮಂಜುನಾಥ್ ಭಂಡಾರಿ! ಆ ರೀತಿಯ ಆದೇಶವನ್ನು ಆತ ಖರ್ಗೆಯ ಆದೇಶದ ಮೇರೆಗೇ ಹೊರಡಿಸಿದ್ದ! ಹಾಗೊಮ್ಮೆ ಆಯಾ ಜಿಲ್ಲಾ ಕಾಂಗ್ರೆಸ್ ಅಥವಾ ಬ್ಲಾಕ್ ಕಾಂಗ್ರೆಸ್ ಕಮಿಟಿಗಳಿಂದಲೇ ಸಿದ್ದು ಸನ್ಮಾನ ಹಮ್ಮಿಕೊಂಡಿದ್ದರೆ ಅದರಲ್ಲಿ ತಪ್ಪೇನಿತ್ತು? ಕಾಂಗ್ರೆಸ್ಸಿನತ್ತ ಕುರುಬರನ್ನು-ಹಿಂದುಳಿದವರನ್ನು ಸೆಳೆಯಲು ಅದಕ್ಕಿಂತ ಬೇಕಿತ್ತೆ?

ಆದರೆ ಖರ್ಗೆ ಸಣ್ಣಬುದ್ಧಿಗೆ ಯಾವ ಹಂಗು? ಇದು ಗೊತ್ತಾಗಿದ್ದೇ ಸಿದ್ದು ಅರ್ಧ ಕುಸಿದುಹೋದರು. ಇನ್ನೂ ಅಧಿಕಾರ ಸಿಕ್ಕಿಲ್ಲ, ಈಗಲೇ ಈ ಗತಿ. ಇನ್ನು ಅಧಿಕಾರ ಸಿಕ್ಕಿಬಿಟ್ಟರೆ ಖಂಡಿತಾ ನಾಯಿಪಾಡು. ಹಾಗೆಂದೇ ತಮ್ಮ ಆಪ್ತ ವಲಯದಲ್ಲಿ ಸಿದ್ದು ಹಣೆ ಚಚ್ಚಿಕೊಂಡಿದ್ದಾರೆ. ಬರುಬರುತ್ತ ಕಾಂಗ್ರೆಸ್ ಜಾಹೀರಾತುಗಳಲ್ಲಿ ಖರ್ಗೆ, ಧರ್ಮಸಿಂಗ್ ನಂತರ ಕಂಡುಬರುತ್ತಿದ್ದ ಸಿದ್ದು ಚಿತ್ರವೇ ಮಾಯವಾಯಿತು. ಸಿದ್ದು ಚಿತ್ರದ ಬದಲಾಗಿ ಅಲ್ಲಿ ದೀಕೇಶಿ, ದೇಶಪಾಂಡೆಯಂಥವರ ಫೋಟೋಗಳೇ ಕಂಗೊಳಿಸಿದವು.

ಇದು ಕಾಂಗ್ರೆಸ್ ನಾಯಕರ ಸಿದ್ದು ದಮನದ ವೈಖರಿಯಾದರೆ, ಇದೇ ಮೇ ತಿಂಗಳ ಏಳರಂದು ತುಮಕೂರಿನಲ್ಲಿ ನಡೆದ ಯುವ ಕಾಂಗ್ರೆಸ್ ಸಮಾವೇಶದಲ್ಲಿ ಸಿದ್ದುಗಾದ ಅವಮಾನ ಈ ಎಲ್ಲದರ ಪರಮಾವಧಿಯಂತಿತ್ತು. ತುಮಕೂರಿನ ಉದ್ದಕ್ಕೂ ಹಾಕಿದ ಬ್ಯಾನರ್ ಮತ್ತು ಫ್ಲೆಕ್ಸ್‌ಗಳಲ್ಲಿ ಮೊದಮೊದಲು ಸಿದ್ದು ಚಿತ್ರವೇ ಇರಲಿಲ್ಲ. ಇದನ್ನು ಕಂಡಿದ್ದೇ ಸಿದ್ದು ಬೆಂಬಲಿಗರು ಕುದ್ದು ಹೋಗಿ ಕೊನೆಗೆ ಸಿದ್ದರಾಮಯ್ಯನವರ ಕಟ್ಟಾ ಬೆಂಬಲಿಗ ವರ್ತೂರು ಪ್ರಕಾಶನೇ ನಿಂತು ಒಂದಷ್ಟು ಸಿದ್ದು ಚಿತ್ರಗಳಿರುವ ಬ್ಯಾನರ್ ಮತ್ತು ಫ್ಲೆಕ್ಸ್ ಮಾಡಿಸಿ ಹಾಕಿಸಿದ!


ಎಷ್ಟು ದಿನ ಅಂತ ಇದನ್ನೆಲ್ಲ ಸಿದ್ದು ಸಹಿಸಿಕೊಂಡಿರುತ್ತಾರೆ? ರಾಜ್ಯದ ನಾಲ್ಕನೇ ಅತಿದೊಡ್ಡ ಜನಾಂಗವೊಂದರ ಪ್ರತಿನಿಧಿಯನ್ನು ನಡೆಸಿಕೊಳ್ಳುವ ರೀತಿಯಾ ಇದು?

ಸಿದ್ದು ಹೇಳಿಕೇಳಿ ಸ್ವಾಭಿಮಾನಿ. ಬಹುಶಃ ಚುನಾವಣೆಗೆ ಮೊದಲೇ ಕಾಂಗ್ರೆಸ್ ದುರುಳರಿಗೆ ಶಾಸ್ತಿ ಮಾಡಲು ಹೊರಟಿರಬಹುದೆ? ಸಿದ್ದು ಚಿತ್ತ ಬಿಎಸ್‌ಪಿ ಯತ್ತ ವಾಲಲು ಅವರಿಗಾದ ಅಪನಿಂದೆಗಿಂತ ಬೇಕೆ?

'ಗೌಡ್ರನ್ಯಾಕ್ರೀ ಬಯ್ತೀರಿ?' ಎಂದವನು ದೇಶಪಾಂಡೆ!

ನೋಡ್ರೀ ಸಿದ್ರಾಮಯ್ಯ. ನೀವು ಎಲ್ಲೆಂದರಲ್ಲಿ ಈ ರೀತಿ ದೇವೇಗೌಡರನ್ನು ಬಯ್ಕೊಂಡು ಕೂತ್ರೆ ಅದರ ಲಾಭ ಪಡೆಯೋದು ಬಿಜೆಪಿ! ಇದು ಕಾಂಗ್ರೆಸ್ಸು. ನಿಮ್ಮಿಷ್ಟ ಬಂದಂತೆ ಆಡೋಕ್ಕಾಗಲ್ಲ, ಸ್ವಲ್ಪ ಕಂಟ್ರೋಲ್ ಮಾಡ್ಕೊಳ್ಳಿ. ದೇವೇಗೌಡರನ್ನು ಬಾಯಿಗೆ ಬಂದಂತೆ ಬಯ್ಯಬೇಡಿ....!

ಇದು ಖರ್ಗೆ, ಧರ್ಮಸಿಂಗ್ ಮತ್ತು ಕಾಗೋಡು ಎದುರಿಗೇ ಸಿದ್ದರಾಮಯ್ಯನವರನ್ನು ದೇಶಪಾಂಡೆ ಕಟುಕಿದ ರೀತಿ. ದುರುಳ ದೇಶಪಾಂಡೆ ಈ ರೀತಿ ಸಿದ್ಧರಾಮಯ್ಯನವರನ್ನು ಹಣಿಯುತ್ತಿದ್ದರೆ ಅದಕ್ಕೆ ಸ್ವತಃ ಖರ್ಗೆಯಂಥವರೇ ಏಕೆ ತಲೆದೂಗುತ್ತಾರೆ? ಧರ್ಮಸಿಂಗ್ ಏಕೆ ಹೊತ್ತು ಗೊತ್ತಿಲ್ಲದೇ ಗೌಡರ ಬಗ್ಗೆ ಮೆದುವಾಗುತ್ತಾರೆ?



ಕಹಿ ಸತ್ಯವೆಂದರೆ ಕಾಂಗ್ರೆಸ್ಸಿನೊಳಗೇ ಸಿದ್ದು ಮುಗಿಸಲು ದೇವೇಗೌಡರೇ ಷಡ್ಯಂತ್ರ ರೂಪಿಸಿಬಿಟ್ಟಿದ್ದಾರೆ. ಇದಕ್ಕೆ ಗೌಡರು ಬಳಸುತ್ತಿರುವುದು ದೇಶಪಾಂಡೆ ಥರದವರನ್ನು. ದೇಶಪಾಂಡೆಗೂ ಗೌಡರ ಮಾತಿಗೆ ತಲೆಯಾಡಿಸಲೇಬೇಕಾದ ಹರಕತ್ತಿದೆ. ಯಾವತ್ತು ದೇವೇಗೌಡರು ಭೂಕಬಳಿಕೆಯ ವಿರುದ್ಧ ಗುಡುಗತೊಡಗಿದರೋ ಅದಕ್ಕೆ ಬೇರೆಲ್ಲ ಕಾಂಗ್ರೆಸ್ ನಾಯಕರಿಗಿಂತಲೂ ಹೆಚ್ಚು ಥರಗುಟ್ಟಿದ್ದು ದೇಶಪಾಂಡೆ. ಸತತ ಹನ್ನೆರಡು ವರ್ಷಗಳ ಕಾಲ ಭಾರೀ ಕೈಗಾರಿಕಾ ಮಂತ್ರಿಯಾಗಿದ್ದು, ಕೆಐಎಡಿಬಿಯ ಮೂಲಕ ಬೆಂಗಳೂರು ಸುತ್ತಮುತ್ತಲ ಬಡರೈತರ ಭೂಮಿ ಕಿತ್ತವನು ದೇಶಪಾಂಡೆ. ಕೈಗಾರಿಕೆಯ ನೆಪದಲ್ಲಿ ರೈತರ ಭೂಮಿ ಕಿತ್ತ ದೇಶಪಾಂಡೆ ಅದನ್ನೆಲ್ಲ ಗುಟ್ಕಾ ಖಾದೀಮರು, ಮಂತ್ರಿ-ಪೂರ್ವಂಕರದಂಥ ಡೆವಲಪರ್‌ಗಳು ಮತ್ತು ಆಂಧ್ರದ ಪಿಚ್ಚಿರೆಡ್ಡಿ, ಕುಮಾರಸ್ವಾಮಿ ರೆಡ್ಡಿಯಂಥ ಭೂಕಂಟಕರಿಗೆ ಮಾರಿಕೊಂಡಿದ್ದಾನೆ.

ಎಟಿ. ರಾಮಸ್ವಾಮಿಯವರೇನಾದರೂ ಮನಸ್ಸು ಮಾಡಿಬಿಟ್ಟರೆ ದೇಶಪಾಂಡೆಯೇ ಮೊದಲು ಜೈಲುಪಾಲಾಗುತ್ತಾನೆ. ಆ ಕಾರಣಕ್ಕೇ ದೇಶಪಾಂಡೆಗೆ ಗೌಡರನ್ನೂ ಓಲೈಸಬೇಕಿದೆ. ತನ್ಮೂಲಕ ತನ್ನ ಭೂಕಬಳಿಕೆಯನ್ನು ಮುಚ್ಚಿ ಹಾಕಬೇಕಿದೆ. ಹಾಗಂತ ಗೌಡರ ಋಣ ತೀರಿಸಬೇಕಲ್ಲ; 'ಅಲ್ರೀ ಆ ಸಿದ್ರಾಮು ನನ್ನನ್ನ ಅಷ್ಟೊಂದು ಕೆಟ್ಟದಾಗಿ ಬಯ್ಯುತ್ತಿದ್ರೆ, ನೋಡ್ತಾ ನಿಂತಿದ್ದೀರಲ್ರೀ?' ಎಂದು ಗೌಡರು ದಬಾಯಿಸಿದ್ದಾರೆ. ಇನ್ನು ದೇಶಪಾಂಡೆ ಕೇಳಬೇಕೆ?

ಬಿಎಸ್‌ಪಿ ನಾಯಕರ ವಿಭಿನ್ನ ಧಾಟಿ

ಹಾಗೆಂದು ಬಿಎಸ್‌ಪಿಯಲ್ಲಿ ಸಿದ್ದುಗೆ ರೆಡ್ ಕಾರ್ಪೆಟ್ ಸ್ವಾಗತವಿದೆಯೆ? ಸಿದ್ದು ಬರುವಿಕೆಗಾಗಿ ಬಹುಜನ ಸಮಾಜ ಪಕ್ಷದ ನಾಯಕರು ಹಾತೊರೆಯುತ್ತಿದ್ದಾರಾ?

ಈ ಪ್ರಶ್ನೆಗೆ ಖಾರವಾಗಿಯೇ ಪ್ರತಿಕ್ರಿಯಿಸಿದ್ದು ರಾಜ್ಯ ಬಿಎಸ್‌ಪಿ ಅಧ್ಯಕ್ಷ ಬಿ. ಗೋಪಾಲ್.

ಆ ಮನುಷ್ಯನ್ನ ಅರ್ಥ ಮಾಡ್ಕೊಳ್ಳೋದೇ ಕಷ್ಟ ಕಣ್ರೀ! 20 ವರ್ಷಗಳ ಕಾಲ ಕಾಂಗ್ರೆಸ್ಸನ್ನು ಶನಿ ಅಂತ ಟೀಕಿಸಿದವರು ಈಗ ಅವರೇ ಕಾಂಗ್ರೆಸ್ಸಿನ ಪರ ವಹಿಸುತ್ತಾರೆಂದರೆ ಏನರ್ಥ? ಕಾನ್ಶೀರಾಮ್ ದುಡ್ಡು ಕಾಸಿಲ್ಲದೇ ರಾಜಕೀಯ ಮಾಡೋದನ್ನ ಹೇಳಿಕೊಟ್ಟಿಲ್ವಾ? ಇವತ್ತು ಉತ್ತರ ಪ್ರದೇಶದಲ್ಲಿ ಮಾಯಾವತಿ ಅಧಿಕಾರಕ್ಕೆ ಬಂದಿದ್ದಾರೆ ಅಂದ್ರೆ ಹಣ-ಹೆಂಡ ಹಂಚಿಯೇ ಗೆದ್ದರಾ? ಮೊದಲು ಛಲ ಇರಬೇಕು. ಅದಕ್ಕೆ ತ್ಯಾಗ ಮಾಡಬೇಕು.

ದುಡ್ಡು ಕಾಸಿಲ್ಲದೇ ಪಾರ್ಟಿ ಕಟ್ಕೋಕೆ ಸಾಧ್ಯವಿಲ್ಲ ಅಂತಲೇ ಸಿದ್ದರಾಮಯ್ಯ ಕಾಂಗ್ರೆಸ್ ಸೇರೋದಾದ್ರೆ, ದೇಶದಲ್ಲಿ ಕಮ್ಯುನಿಸ್ಟ್ ಮತ್ತು ಬಿಎಸ್‌ಪಿಯಂಥ ಪಕ್ಷಗಳೇಕೆ ಅಧಿಕಾರಕ್ಕೆ ಬರುತ್ತಿದ್ದವು? ಸಿದ್ದರಾಮಯ್ಯನವರಿಗೆ ದೇವೇಗೌಡರನ್ನು ಅರ್ಥ ಮಾಡಿಕೊಳ್ಳೋಕೆ ಇಪ್ಪತ್ತು ವರ್ಷ ಬೇಕಾಯ್ತಾ?



ಮುನಿಯಪ್ಪ

ನಿಜ ಹೇಳ್ಬೇಕು ಅಂದ್ರೆ, ಸಿದ್ದರಾಮಯ್ಯನವರನ್ನು ಜೆಡಿಎಸ್‌ನಿಂದ ಉಚ್ಚಾಟಿಸಿದಾಗಲೇ ಬಿಎಸ್‌ಪಿಯ ನಿಯೋಗವೊಂದು ಅವರನ್ನು ಭೇಟಿ ಮಾಡಿತ್ತು. ಕೊಳ್ಳೇಗಾಲದ ಎನ್. ಮಹೇಶ್, ಗೋಪಿನಾಥ್, ಕಮಲನಾಥನ್ ಮುಂತಾದವರೆಲ್ಲ ಆವತ್ತೇ ಅವರನ್ನು ಬಿಎಸ್‌ಪಿಗೆ ಆಹ್ವಾನಿಸಿದ್ರು. ಅಕ್ಕ ಮಾಯಾವತಿಯವರ ಜೊತೆ ಮಾತಾಡ್ತೀನಿ ಅಂತಲೂ ಸಿದ್ದು ಹೇಳಿದ್ರು. ಆದರೆ ಯಾರು ತಲೆ ಕೆಡಿಸಿದರೋ; ಕಾಂಗ್ರೆಸ್ಸಿಗೆ ಹೋದರು. ಇನ್ನು ಈ ಗಳಿಗೆಯಲ್ಲಿ ಸಿದ್ದು ಬಿಎಸ್‌ಪಿಗೆಲ್ಲಿ ಬರುತ್ತಾರೆ?



ಗೋಪಾಲ್

ಕುರುಬರನ್ನು ಬಿಎಸ್‌ಪಿ ಯಾವತ್ತಿಗೂ ಬಿಡೋಲ್ಲ, ಈಗಾಗಲೇ ಬಿಜಾಪುರ, ರಾಯಚೂರುಗಳಲ್ಲಿ ಕುರುಬರು ಬಿಎಸ್‌ಪಿಗೆ ಬರುತ್ತಿದ್ದಾರೆ. ಹಾಗೊಮ್ಮೆ ಸಿದ್ದು ಬರೋದೇ ಆಗಿದ್ರೆ ನೋಡೋಣ. ಇದಕ್ಕೇಕೆ ಅವಸರ?

ಇದು ರಾಜ್ಯ ಬಿಎಸ್‌ಪಿ ಅಧ್ಯಕ್ಷ ಬಿ. ಗೋಪಾಲ್ ವರಸೆಯಾದರೆ ಬಿಎಸ್‌ಪಿಯ ಮತ್ತೊಬ್ಬ ನಾಯಕ ಮಾರಸಂದ್ರ ಮುನಿಯಪ್ಪ ಇದಕ್ಕೆ ತೀರ ವ್ಯತಿರಿಕ್ತ.

ನೋಡಿ ಆವತ್ತಿನ ಸಂದರ್ಭವೇ ಬೇರೇ ಈಗಿನ ಪರಿಸ್ಥಿತಿಯೇ ಬೇರೆ. ಈಗ ಉತ್ತರ ಪ್ರದೇಶದ ಉದಾಹರಣೆ ನಮ್ಮ ಕಣ್ಣ ಮುಂದಿದೆ. ಬಲಾಢ್ಯ ಜಾತಿಗಳ ವಿರುದ್ಧ ದಲಿತರು, ಹಿಂದುಳಿದವರು ಮತ್ತು ಮುಸ್ಲಿಮರು ಒಗ್ಗೂಡಲೇಬೇಕಿದೆ. ಸಿದ್ದರಾಮಯ್ಯ ಕಾಂಗ್ರೆಸ್ ಸೇರುವ ಮೊದಲೇ ತಮ್ಮ ಇಬ್ಬರು ಶಿಷ್ಯರನ್ನು ಬಿಎಸ್‌ಪಿ ಜೊತೆ ಮಾತುಕತೆಗೆ ಕಳಿಸಿದ್ದರು. ಆದರೆ ಕುರುಬ ಅಧಿಕಾರಿಗಳ ಒತ್ತಡದಿಂದಾಗಿ ಕಾಂಗ್ರೆಸ್ಸಿಗೆ ಹೋದರು. ಕಾಂಗ್ರೆಸ್ ಕಳ್ಳರ ಸಂತೆಯಿದ್ದಂತೆ. ಅಲ್ಲಿ ಸಿದ್ದು ಏಗುವುದೇ ಕಷ್ಟ.

ಈಗಲೂ ಕಾಲ ಮಿಂಚಿಲ್ಲ, ಖರ್ಗೆ, ದೇಶಪಾಂಡೆ, ದೀಕೆಯಂಥವರ ಮುಂದೆ ಸಿದ್ದು ತಲೆ ಎತ್ತುವುದು ಸಾಧ್ಯವಿಲ್ಲ, ನಿಜಕ್ಕೂ ಅಹಿಂದ ಸಿದ್ಧಾಂತದ ಬಗ್ಗೆ ಸಿದ್ದುಗೆ ಪ್ರಾಮಾಣಿಕ ಕಾಳಜಿಯಿದ್ದಲ್ಲಿ ಅವರಿಗೆ ಬಿಎಸ್‌ಪಿಗಿಂತ ಬೇಕೆ?

ಇದು ಬಿಎಸ್‌ಪಿ ರಾಜ್ಯ ಉಪಾಧ್ಯಕ್ಷ ಮಾರಸಂದ್ರ ಮುನಿಯಪ್ಪನವರ ಪ್ರಶ್ನೆ. ಇದು ಇಬ್ಬರು ನಾಯಕರ ವಿಭಿನ್ನ ಮಾತುಗಳ ಹಿಂದಿನ ತಂತ್ರಗಾರಿಕೆಯೇ?



ಆನೆ ಬಂತೊಂದಾನೆ

ಸಿದ್ದು ಚಿತ್ತ BSPಯತ್ತ ◆ ಕಾಂಗ್ರೆಸ್-ಬಿಜೆಪಿಗೆ ನಡುಕ ◆ ಗೌಡರ ಹೊಸ ಲೆಕ್ಕಾಚಾರ

ಕರ್ನಾಟಕದಲ್ಲಿ ಬಿಎಸ್‌ಪಿಗೂ ಸ್ವಲ್ಪ ಅವಕಾಶವಿದೆ. ಹಾಗಾಗಿಯೇ ಇವತ್ತು ಒಬ್ಬ ಶಾಸಕರಿಲ್ಲದಿದ್ದರೂ, ಒಂದು ಬಲಿಷ್ಠ ಪಾರ್ಟಿಯಾಗಿ ತನ್ನ ಅಸ್ತಿತ್ವ ಸಾಬೀತು ಮಾಡಿಲ್ಲದಿದ್ದಾಗಲೂ ಈ ನೀಲಿ ಆನೆ (ಮರಿ) ಬಗ್ಗೆ ಎಲ್ಲರ ಗಮನ ಹರಿಯುತ್ತಿದೆ.

"ಇದೊಂದು ವರವೂ ಹೌದು!
ಅದೇ ರೀತಿ ಶಾಪವೂ ಹೌದು!!

ಉತ್ತರ ಪ್ರದೇಶದ ವಿಧಾನಸಭಾ ಎಲೆಕ್ಷನ್‌ನಲ್ಲಿ ಬಹುಜನ ಸಮಾಜ ಪಕ್ಷದ ಮಾಯಾವತಿ ಗೆದ್ದು ಮತ್ತೆ ಮುಖ್ಯಮಂತ್ರಿಯಾಗಿದ್ದಾರೆ. ದಲಿತ-ಬ್ರಾಹ್ಮಣ ರೆಂಬ ಹೊಸ ಜಾತಿ combination ಮೂಲಕ ಸಿಂಪಲ್ ಮೆಜಾರಿಟಿ ಪಡೆದಿರುವ ಬಿಎಸ್‌ಪಿಯನ್ನು ನೋಡಿ ನ್ಯಾಷನಲ್ ಪಾರ್ಟಿಗಳಾದ ಕಾಂಗ್ರೆಸ್ ಮತ್ತು ಬಿಜೆಪಿಗಳೆರಡೂ ಹೈವೋಲ್ಟೇಜ್ ಕರೆಂಟ್ ತಾಕು ಹೊಡಿಸಿಕೊಂಡಂತೆ ಮಂಕಾಗಿಬಿಟ್ಟವೆ.

ಬಿಎಸ್‌ಪಿ ಹುಟ್ಟಿದಾಗಿನಿಂದಲೂ ಕಾಂಗ್ರೆಸ್ ಏಟು ತಿನ್ನುತ್ತಲೇ ಬಂದಿತ್ತಾದ್ದರಿಂದ ಈ ಬಾರಿಯ ಎಲೆಕ್ಷನ್‌ನಿಂದ ಕಾಂಗ್ರೆಸ್‌ಗೆ ವಾಸ್ತವವಾಗಿ ಲಾಭವೂ ಇಲ್ಲ, ನಷ್ಟವೂ ಇಲ್ಲ ಎಂಬಂತಾಗಿದೆ. ಆದರೆ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಕೈಯನ್ನು ನೀಲಿ ಆನೆ ಸದ್ಯಕ್ಕೆ ತಲೆ ಎತ್ತದಂತೆ ತುಳಿದು ಹಾಕಿರುವು ದಂತೂ ನಿಜ. ಅಷ್ಟೇ ಅಲ್ಲ, ದೇಶಾದ್ಯಂತ ದಲಿತರ ಬೆಂಬಲವನ್ನು ನಿರ್ಲಕ್ಷ್ಯದಿಂದ ಅನುಭವಿಸಿಕೊಂಡು ಬರುತ್ತಿದ್ದ ಕಾಂಗ್ರೆಸ್‌ಗೆ ಇನ್ನು ಮೇಲೆ ಅದೇ ಅನುಕೂಲಕರ ಪರಿಸ್ಥಿತಿ ಇರುವುದಿಲ್ಲ ಎಂಬುದು ಚೆನ್ನಾಗಿ ಮನವರಿಕೆಯಾಗಿಬಿಟ್ಟಿದೆ.

ಕಾಂಗ್ರೆಸ್ ಎಂಬ ಶತಸೋಂಭೇರಿ ಭ್ರಷ್ಟ, ಜನ ವಿರೋಧಿ ಬಿಳಿಯಾನೆಗೆ ಇಂಥದ್ದೊಂದು ಏಟು ಬಿದ್ದಿದೆ ಎಂದೋ ಬೀಳಬೇಕಿತ್ತು. ಅದನ್ನೀಗ ಬಿಎಸ್‌ಪಿಯ ನೀಲಿ ಸಲಗ ಸರಿಯಾಗೇ ಕೊಟ್ಟಿದೆ. ಕಾಂಗ್ರೆಸ್‌ಗಿಂತಾ ಹೀನಾಯ ಪರಿಸ್ಥಿತಿ ಬಿಜೆಪಿ ಯದ್ದು. ರಾಮಮಂದಿರ, ಅಫಜಲ್ ಗುರು ನೇಣು, ಮುಸ್ಲಿಂ ದ್ವೇಷದ ಸಿಡಿಗಳ ಗದ್ದಲ ಮಾಡಿಕೊಂಡು ಭ್ರಮಾಲೋಕದೊಳಗೆ ಮುಳುಗಿದ್ದ ಬಿಜೆಪಿಯನ್ನು ಅಲ್ಲಿನ ಮತದಾರ ತಿರಸ್ಕರಿಸಿದ್ದಾನೆ. ಬಿಜೆಪಿಯ ಹಿಂದುತ್ವ ಹಾಗೂ ಕೋಮುವಾದಿ ಅಜೆಂಡಾ ಗಳಿಗೆ ಅಲ್ಲಿ ಕವಡೆ ಕಾಸಿನ ಕಿಮ್ಮತ್ತೂ ಸಿಕ್ಕಿಲ್ಲ.

ಇವೆರಡೂ ಬಿಎಸ್‌ಪಿಯ ಗೆಲುವಿನ ರೂಪದಲ್ಲಿ ಭಾರತೀಯ ಚುನಾವಣಾ ರಾಜಕೀಯಕ್ಕೆ ದೊರೆತ ವರಗ ಳಾಗಿವೆ. ಆದರೆ ಆಶ್ಚರ್ಯವೇನೆಂದರೆ ಬಿಎಸ್‌ಪಿಯೂ ಭ್ರಷ್ಟಾಚಾರ ಹಾಗೂ ಕೋಮುವಾದವನ್ನು ವಿರೋಧಿಸಿದ ಅಜೆಂಡಾ ಇಟ್ಟುಕೊಂಡು ಎಲೆಕ್ಷನ್‌ಗೆ ಹೋಗಿರಲಿಲ್ಲ. ಈ ವಿಚಾರಗಳಲ್ಲಿ ಬಿಎಸ್‌ಪಿಗೆ ಕ್ರೆಡಿಬಲಿಟಿಯೂ ಇಲ್ಲ. ಜೊತೆಗೆ ಇದುವರೆಗೂ ಚುನಾವಣೆಗೆ ಹೋಗುವಾಗ ಬೇರೆಲ್ಲಾ ಪಕ್ಷಗಳು ಜಾತಿ ಜಾತಿಗಳನ್ನು ಒಡೆದು ಓಟು ಹಂಚಿಕೊಳ್ಳುವ ತಂತ್ರ ಮಾಡುತ್ತಾ ಬಂದಿದ್ದವು. ಆದರೀಗ ಮಾಯಾವತಿ ಜಾತಿಗಳು ಹರಿದು ಹಂಚಿ ಹೋಗದಂತೆ ಒಟ್ಟಾಗಿ ಓಟು ಬ್ಯಾಂಕ್ ಮಾಡಿಕೊಂಡು ಎಲೆಕ್ಷನ್‌ನಲ್ಲಿ ಜಯ ಸಾಧಿಸಿದ್ದಾರೆ.

ಇದನ್ನೆ ಅದ್ಭುತವಾದ Social Engineering ಎಂದು ಹೊಗಳಲಾಗುತ್ತಿದೆ.

ಮುಂದಿನ ದಿನಗಳಲ್ಲಿ ರಾಜಕಾರಣಿಗಳೆಂಬ ಭ್ರಷ್ಟ ಇಂಜಿನಿಯರ್‌ಗಳು, ಖದೀಮ ಗುತ್ತೇದಾರರು, ಮೇಸ್ತ್ರಿಗಳೆಲ್ಲಾ ಇದೇ ಇಂಜಿನಿಯರಿಂಗ್ ನಡೆಸಿ 'ನಾವೊಂದು ಹೊಸ ಬಿಲ್ಡಿಂಗ್ (ವ್ಯವಸ್ಥೆ) ಕಟ್ಟಲು ಹೊರಟದ್ದೇವೆಂದು' ನಂಬಿಸುವುದು ಖಚಿತ.

ಕರ್ನಾಟಕವೂ ಇದಕ್ಕೆ ಹೊರತಲ್ಲ.

ಎಲ್ಲರಿಗೂ ತಲೆಬಿಸಿ

ಉತ್ತರ ಪ್ರದೇಶದ ಚುನಾವಣಾ ಫಲಿತಾಂಶವನ್ನು ದೇಶದೆಲ್ಲೆಡೆ ಹೇಗೆ ಕಾತರದಿಂದ ಕಾಯಲಾಗುತ್ತಿತ್ತೋ ಅದೇ ರೀತಿ ಕರ್ನಾಟಕದ ರಾಜಕಾರಣಿಗಳೂ ಕಾಯುತ್ತಿದ್ದರು. ಈಗ ಕಾಂಗ್ರೆಸ್, ಬಿಜೆಪಿಗೆ ನಿರಾಶೆಯಷ್ಟೇ ಅಲ್ಲ, ಬಿಎಸ್‌ಪಿ ಬಗ್ಗೆ ಆತಂಕವೂ ಆಗಿದೆ. ಕಳೆದ 10 ವರ್ಷಗಳಿಂದಲೂ ಬಿಎಸ್‌ಪಿ ಕರ್ನಾಟಕದಲ್ಲಿ ಚುನಾವಣೆಗೆ ಸ್ಪರ್ಧಿಸುತ್ತಿತ್ತು; ಒಂದು ಬಾರಿ ಬೀದರ್‌ನಿಂದ ಜುಲ್ಫೀಕರ್ ಹಾಶ್ಮಿ ಗೆದ್ದು ಶಾಸಕರಾಗಿದ್ದರು. ಆದರೆ ಆಗ ಅದಕ್ಕೆ ಅಷ್ಟು ಮಹತ್ವ ಇರಲಿಲ್ಲ. ಸೋಷಿಯಲ್ ಇಂಜಿನಿಯರಿಂಗ್, ಜಾತಿ ಲೆಕ್ಕಾಚಾರಗಳೂ ಇರಲಿಲ್ಲ. ಮುಸ್ಲಿಂರ ಬಹುಸಂಖ್ಯಾತ ಓಟರ್‌ಗಳಿದ್ದ ಬೀದರ್‌ನಲ್ಲಿ ಹಾಶ್ಮಿ ಯಾವ ಪಾರ್ಟಿಯಿಂದ ಸ್ಪರ್ಧಿಸಿದ್ದರೂ ಗೆಲ್ಲುವಂತಿದ್ದರು. ಅವತ್ತು ಬಿಎಸ್‌ಪಿ ವತಿಯಿಂದ ಗೆದ್ದಿದ್ದರಷ್ಟೆ. ಆದರೆ 2004ರ ಚುನಾವಣೆ ವೇಳೆಗೆ ಪರಿಸ್ಥಿತಿ ಬದಲಾಗಿತ್ತು. 102 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಬಿಎಸ್‌ಪಿ ಒಂದೂ ಕ್ಷೇತ್ರ ಗೆಲ್ಲದಿದ್ದರೂ ಕನಿಷ್ಠ 25 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸೋಲಿಗೆ ಕಾರಣವಾಗಿತ್ತು. ಅದರ ಲಾಭವನ್ನು ದಕ್ಷಿಣ ಕರ್ನಾಟಕದಲ್ಲಿ ಜೆಡಿಎಸ್ ಪಡೆದುಕೊಂಡರೆ ಉತ್ತರ ಕರ್ನಾಟಕದಲ್ಲಿ ಬಿಜೆಪಿಗೆ ಅನುಕೂಲವಾಗಿತ್ತು.

ಇದೆಲ್ಲಾ ಕರ್ನಾಟಕದಲ್ಲಿ ಬಿಎಸ್‌ಪಿ ಇನ್ನೂ ಅಂಬೆಗಾಲಿಡುವ ಮಗುವಾಗಿದ್ದಾಗಿನ ಪರಿಸ್ಥಿತಿ. ಆದರೀಗ ಉತ್ತರ ಪ್ರದೇಶದ ಗೆಲುವು ಕರ್ನಾಟಕದ ದಲಿತ ಮತದಾರರ ಮೇಲೂ ತನ್ನದೇ ಆದ ಪರಿಣಾಮ ಬೀರುವುದು ಖಚಿತ. ಕರ್ನಾಟಕದ ಬಹುಪಾಲು ವಿಧಾನಸಭಾ ಕ್ಷೇತ್ರಗಳಲ್ಲಿ ಶೇ. 15 ರಿಂದ 20ರತನಕ ದಲಿತ ಮತದಾರರಿದ್ದು ಅವರೆಲ್ಲಾ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ತಿರಸ್ಕರಿಸಿ ಬಿಎಸ್‌ಪಿ ಹಿಂದೆ ನಡೆದುಬಿಟ್ಟರೆ ಚುನಾವಣಾ ಚಿತ್ರಗಳೇ ಏರುಪೇರಾಗಿ ಬಿಡುತ್ತವೆ. ಇದನ್ನು ಈಗಲೇ ಅಂದಾಜಿಸುತ್ತಿರುವ ಇನ್ನಿತರ ಪಕ್ಷಗಳು ಈಗಾಗಲೇ ಅನಧಿಕೃತ ಸಮಾಲೋಚನಾ ಸಭೆಗಳನ್ನು ನಡೆಸಲು ಶುರು ಮಾಡಿಬಿಟ್ಟವೆ.

ಉತ್ತರ ಪ್ರದೇಶದ ಫಲಿತಾಂಶದಿಂದ ಹೆಚ್ಚು ಥ್ರಿಲ್ ಆಗಿರುವುದು ದೇವೇಗೌಡರಿಗೆ. ಇದುವರೆಗೂ ಕುಮಾರ ಸ್ವಾಮಿ, ಯಡಿಯೂರಪ್ಪ, ಸದಾನಂದಗೌಡರಿಗೆ ಲೋಕಲ್ ಲೆಟರ್ ಬರೆದುಕೊಂಡು ಕಾಲಾಯಾಪನೆ ಮಾಡಿಕೊಂಡಿದ್ದ ಗೌಡರು ಏಕಾಏಕಿ ಮಾಯಾವತಿಗೆ ಪತ್ರ ಬರೆದು ಅಭಿನಂದಿಸಿದ್ದೂ ಅಲ್ಲದೆ ಗೋವಾದಿಂದ ಸೀದಾ ದೆಹಲಿಗೂ ಹೋಗಿ ಪತ್ರಿಕಾ ಹೇಳಿಕೆ ನೀಡಿ ಬಂದಿದ್ದಾರೆ. ಕಾಂಗ್ರೆಸ್, ಬಿಜೆಪಿಗಳೊಂದಿಗೆ ಸಮಾನ ಅಂತರ ಕಾಪಾಡಿಕೊಳ್ಳುತ್ತಾ ತನ್ನದೇ ಓಟ್‌ಬ್ಯಾಂಕ್ ಸೃಷ್ಟಿಸಿ ಕೊಳ್ಳುವ ತಾಕತ್ತಿರುವ ಬಿಎಸ್‌ಪಿ ಜೊತೆ ಮೈತ್ರಿ ಮಾಡಿಕೊಂಡರೆ ಹೇಗೆಂಬ ಲೆಕ್ಕಾಚಾರ ಗೌಡರ ತಲೆಯೊಳಗೆ ಈಗಾಗಲೇ ಹೊಕ್ಕಿಬಿಟ್ಟಿದೆ. ಆದರೆ ಬಿಎಸ್‌ಪಿ ಇದರ ಬಗ್ಗೆ ಅಷ್ಟು ಕಾತರದಿಂದಿಲ್ಲ. ಕರ್ನಾಟಕದಲ್ಲಿ ಬಿಎಸ್‌ಪಿ ಈಗ ದುರ್ಬಲವಾಗಿದ್ದರೂ ಅದೊಂದು ರಾಷ್ಟ್ರೀಯ ಪಕ್ಷ. ಅವರ ದೃಷ್ಟಿಯಲ್ಲಿ ದೇವೇಗೌಡ ಕರ್ನಾಟಕದಲ್ಲಿ ಅದರಲ್ಲೂ ದಕ್ಷಿಣ ಕರ್ನಾಟಕದಲ್ಲಿ ಪ್ರಾಬಲ್ಯ ಹೊಂದಿರುವ ಒಂದು ಪ್ರಾದೇಶಿಕ ಪಕ್ಷದ ನಾಯಕ ಅಷ್ಟೇ. ಅಲ್ಲದೆ ಗೌಡರ ಓಟ್‌ಬ್ಯಾಂಕ್ ಆಗಿರುವ ಒಕ್ಕಲಿಗರ ಪ್ರಾಬಲ್ಯ ಕೂಡ ರಾಜ್ಯದೆಲ್ಲೆಡೆ ಏಕಪ್ರಕಾರವಾಗಿಲ್ಲ ಎಂಬುದಾಗಿದೆ. ಅದರ ಬದಲಾಗಿ ಕಾಂಗ್ರೆಸ್ ಜೊತೆಗಿನ ಮೈತ್ರಿಯೇ ಬಿಎಸ್‌ಪಿಗೆ ಲಾಭದಾಯಕ ಎಂಬ ತರ್ಕಗಳಿವೆ. ಕೇಂದ್ರದಲ್ಲಿ ಯುಪಿಎ ಸರ್ಕಾರಕ್ಕೆ ಈಗ ಹೊರಗಿನಿಂದ ಬೆಂಬಲ ನೀಡುವ ಬಿಎಸ್‌ಪಿಗೆ ಕಾಂಗ್ರೆಸ್ ಸಖ್ಯದಿಂದ ಜಾಸ್ತಿ ಚೌಕಾಸಿ ನಡೆಸಲು ಸಾಧ್ಯ. ಯಾವಾಗಲೂ ಶುದ್ಧ ಮಾರ್ವಾಡಿಗಳಂತೆ ತನ್ನ ಲಾಭವನ್ನಷ್ಟೇ ಯೋಚಿಸುವ ಬಿಎಸ್‌ಪಿ ಆತುರಗೆಟ್ಟು ಗೌಡರ ಹಿಂದೆ ಓಡುವುದಿಲ್ಲ ಎಂಬುದಂತೂ ಖಚಿತ.

ಆದರೆ ಕಾಂಗ್ರೆಸ್‌ನ ಪರಿಸ್ಥಿತಿ ಹಾಗಿಲ್ಲ. ಸ್ವತಃ ಬಿಎಸ್‌ಪಿ ಬೇಡವೆಂದರೂ ಕಾಂಗ್ರೆಸ್‌ಗೀಗ ಬಿಎಸ್‌ಪಿ ಸಖ್ಯ ಬೇಕಿದೆ. ಮಾಯಾವತಿ ಈಗ ಎಂತಹ ಪ್ರಭಾವಶಾಲಿ ನಾಯಕಿಯಾಗಿದ್ದಾರೆಂದರೆ ಸೋನಿಯಾ ಗಾಂಧಿಯಷ್ಟೇ ಪಾಪ್ಯುಲಾರಿಟಿ ಈಕೆಗಿದೆ. ಆದರೆ ಸೋನಿಯಾಗೆ ತಮ್ಮದೇ ಆದ ಓಟ್‌ಬ್ಯಾಂಕಾಗಲಿ, ಬೇಕೆಂದಾಗ ಅದನ್ನು ಬೇಕೆಂದ ಕಡೆ ವರ್ಗಾಯಿಸುವ ಶಕ್ತಿಯಾಗಲೀ ಇಲ್ಲ. ಮಾಯಾವತಿಗೆ ಇವೆರಡೂ ಇದೆ. "ನನ್ನ ಕೈಲಿ ಓಟುಗಳಿವೆ. ಅದು ನಿಮಗೆ ಬೇಕೆಂದರೆ ಬದಲಾಗಿ ನನಗೇನು ಕೊಡುತ್ತೀರಾ" ಎನ್ನುವ ಮಾಯಾವತಿ ನಾಳೆ ದಿನ ಕರ್ನಾಟಕದಲ್ಲೂ ಇದೇ ಚೌಕಾಸಿ ರಾಜಕೀಯ ಮಾಡಿದರೂ ಆಶ್ಚರ್ಯವಿಲ್ಲ.

ಕರ್ನಾಟಕದಲ್ಲಿ ಈಗಾಗಲೇ ಬಿಎಸ್‌ಪಿಯಿಂದ ಏಟು ತಿಂದಿರುವ ಕಾಂಗ್ರೆಸ್‌ಗೆ ಅದನ್ನು ನಿರ್ಲಕ್ಷಿಸಲೂ ಆಗದ ನಿಯಂತ್ರಿಸಲೂ ಆಗದ, ದುಃಸ್ಥಿತಿ ಇದೆ. 2004ರ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ, ಮೈಸೂರು, ಚಾಮ

ಬಲಿದಾಳೆ ಈಶ

ರಾಜನಗರ, ಬೆಳಗಾಂ, ಚಿಕ್ಕೋಡಿ, ಶಿವಮೊಗ್ಗಾ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಬಳ್ಳಾರಿಗಳಲ್ಲಿ ಬಿಎಸ್‌ಪಿ ಅಭ್ಯರ್ಥಿಗಳು ಗಮನಾರ್ಹ ಸಂಖ್ಯೆಯಲ್ಲಿ ಓಟು ಪಡೆದು ಕಾಂಗ್ರೆಸ್ ಅನ್ನು ಅಸಹಾಯಕ ಸ್ಥಿತಿಗೆ ತಳ್ಳಿದ್ದರು. ಅದರ ಓಟ್‌ಷೇರ್ 1998 ರಲ್ಲಿ 0.08% ಇದ್ದಿದ್ದು 2004 ರಲ್ಲಿ 1.22% ಗೇರಿತ್ತು. ಚಾಮರಾಜನಗರ ಸಂಸತ್ ಕ್ಷೇತ್ರದಲ್ಲಿ 78 ಸಾವಿರ, ಹಾಸನದಲ್ಲಿ 53 ಸಾವಿರ, ಬಳ್ಳಾರಿಯಲ್ಲಿ 36 ಸಾವಿರ... ಹೀಗೆ 7 ಕ್ಷೇತ್ರಗಳಲ್ಲಿ ಬಿಎಸ್‌ಪಿ ಅಭ್ಯರ್ಥಿಗಳು 25,000 ಕ್ಕೂ ಹೆಚ್ಚು ಓಟು ಗಳಿಸಿದ್ದರು.

ಬೇರೆ ಪಕ್ಷಗಳಿಗಿರುವ ಭಯ ಏನೆಂದರೆ ಒಂದು ಸಾರಿ ಬಿಎಸ್‌ಪಿ ಬೆಂಬಲಕ್ಕೆ ನಿಲ್ಲುವ ಮತದಾರ ಆ ಅಭ್ಯರ್ಥಿ ಗೆಲ್ಲಲಿ, ಸೋಲಲಿ ತನ್ನ ನಿಷ್ಠೆ ಮಾತ್ರ ಬದಲಾಯಿಸುವುದಿಲ್ಲ. ಅಸೆಂಬ್ಲಿ ಚುನಾವಣೆಯಲ್ಲೂ ಆನೇಕಲ್‌ನಲ್ಲಿ ಬಿಎಸ್‌ಪಿ ರಾಜ್ಯಾಧ್ಯಕ್ಷ ಬಿ. ಗೋಪಾಲ್ 25,000 ಓಟು ಪಡೆದರೆ, ಸಕಲೇಶಪುರದಲ್ಲಿ ಶ್ರೀಧರ ಕಲಿವೀರ 17,000, ಮೊಣಕಾಲ್ಮೂರಿನಲ್ಲಿ ಎನ್. ಜಯಣ್ಣ 16,000 ಓಟು ಪಡೆದಿದ್ದರು. ಇದರರ್ಥ ಸ್ಪಷ್ಟ, ಬಿಎಸ್‌ಪಿ ಅಭ್ಯರ್ಥಿಗಳು ಕೇವಲ ದಲಿತ ಸಮುದಾಯದ ಪ್ರತಿನಿಧಿಗಳಂತಲ್ಲದೆ ಇತರೆ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರ ಬೆಂಬಲವನ್ನು ಗಳಿಸಲು ಆರಂಭಿಸಿದ್ದಾರೆಂಬುದು ಗೋಚರಿಸುತ್ತಿದೆ. 2004 ರಲ್ಲಿ ರಾಜ್ಯದಲ್ಲಿ ಬಿಎಸ್‌ಪಿ ಅಭ್ಯರ್ಥಿಗಳು ಒಟ್ಟಾರೆ 4.50 ಲಕ್ಷ ಓಟು ಗಳಿಸಿದ್ದರು. ಮುಂದೆ ಇದು 40 ಲಕ್ಷ ಓಟುಗಳಾಗಿ ಬೆಳೆದರೆ ಕರ್ನಾಟಕದ ರಾಜಕೀಯದಲ್ಲೂ ಬಿಎಸ್‌ಪಿ ನಿರ್ಣಾಯಕ ಪಾತ್ರ ವಹಿಸಬಹುದಾದ ಹಂತ ಬರುತ್ತದೆ. ಆದರೆ ಅದು ಕೇವಲ ದಲಿತರ ಓಟುಗಳಿಂದಷ್ಟೇ ಸಾಧ್ಯವಾಗುವುದಿಲ್ಲ.

ಉತ್ತರ ಪ್ರದೇಶದಲ್ಲಾದಂತೆ ಇಲ್ಲೂ ಬಿಎಸ್‌ಪಿಗೆ ಬಹುಸಂಖ್ಯಾತ ಜಾತಿ ಸಮುದಾಯದ ಬೆಂಬಲ ಬೇಕಾಗುತ್ತದೆ. ಅದು ಲಿಂಗಾಯತರೊ, ಒಕ್ಕಲಿಗರೊ, ಕುರುಬರೊ ಅಥವಾ ಗೊಲ್ಲರೊ ಎಂಬುದು ಭವಿಷ್ಯದ ಪ್ರಶ್ನೆ. ಈ ಜಾತಿ ಸಮುದಾಯಗಳೂ ಮತ್ತವರ ನಾಯಕರುಗಳೂ ಕೂಡ ಬೇರೆ ಬೇರೆ ರಾಜಕೀಯ ಪಕ್ಷಗಳ ಪ್ರಭಾವದಡಿ ಈಗಾಗಲೇ ಇದ್ದಾರೆ. ಒಬ್ಬರದೇ ನಾಯಕತ್ವದಲ್ಲಿ, ಏಕಶಿಲಾರೂಪಿಯಾಗಿ ಸಂಘಟಿತರಾಗಿರದ, ಸಾಲಿಡ್ ಓಟ್‌ಬ್ಯಾಂಕ್ ರೀತಿ ಇರದ ಸಮುದಾಯಗಳಿವು. ಇವರೆಲ್ಲರನ್ನೂ ಒಗ್ಗೂಡಿಸುವ ಹಂತಕ್ಕೆ ಬರಬೇಕೆಂದರೆ ಬಿಎಸ್‌ಪಿ ಸವೆಸಬೇಕಿರುವ ದಾರಿ ಇನ್ನೂ ಬಹಳ ದೂರವಿದೆ. ದಲಿತರು, ಹಿಂದುಳಿದವರು ಹಾಗೂ ಮುಸ್ಲಿಮರು ಬಿಜೆಪಿಯನ್ನು ನಂಬುವುದಿಲ್ಲ. ಕಾಂಗ್ರೆಸ್ ಇವರ ನಂಬಿಕೆಯನ್ನು ದುರುಪಯೋಗಪಡಿಸಿಕೊಂಡಿದೆ. ಇನ್ನು ಜೆಡಿಎಸ್‌ಗೆ ಸರ್ವಜನಪಕ್ಷ ಎನಿಸಿಕೊಳ್ಳಲು ಅಸಾಧ್ಯ.

ಕರ್ನಾಟಕದಲ್ಲಿ ಬಿಎಸ್‌ಪಿಗೂ ಸ್ವಲ್ಪ ಅವಕಾಶವಿದೆ ಎಂದುಕೊಳ್ಳಲು ಇದೆಲ್ಲಾ ವಾಸ್ತವಗಳೂ ಇವೆ. ಹಾಗಾಗಿಯೇ ಇವತ್ತು ಒಬ್ಬ ಶಾಸಕರಿಲ್ಲದಿದ್ದರೂ, ಒಂದು ಬಲಿಷ್ಠ ಪಾರ್ಟಿಯಾಗಿ ತನ್ನ ಅಸ್ತಿತ್ವ ಸಾಬೀತು ಮಾಡಿಲ್ಲದಿದ್ದಾಗಲೂ ಈ ನೀಲಿ ಆನೆ (ಮರಿ) ಬಗ್ಗೆ ಎಲ್ಲರ ಗಮನ ಹರಿಯುತ್ತಿದೆ. ■

ಮಾಯಾ ಮಂತ್ರಕ್ಕೆ ಮಾವಿನ ಕಾಯಿ ಉದುರುವುದಿಲ್ಲ

ಬಿಎಸ್‌ಪಿ ಇವತ್ತು ಒಂದು ಪ್ರಮುಖ ನ್ಯಾಷನಲ್ ಪಾರ್ಟಿಯಾಗಿ ಬೆಳೆಯುತ್ತಿದ್ದರೂ ಕೋಮುವಾದ, ಭ್ರಷ್ಟಾಚಾರ, ಅಲ್ಪಸಂಖ್ಯಾತರ ರಕ್ಷಣೆ ಕುರಿತಾಗಿ ಅದಕ್ಕೆ credibility ಕಡಿಮೆ. ಇನ್ನು ಜಾಗತೀಕರಣ, ಖಾಸಗೀಕರಣ, SEZ, ರೈತರ ಆತ್ಮಹತ್ಯೆ ಎತ್ತುಂಗಡಿಗಳ ಬಗ್ಗೆ ಬಿಎಸ್‌ಪಿಯ ರಾಜಕೀಯ ನಿಲುವುಗಳೇನೆಂಬುದಂತೂ ಯಾವನಿಗೂ ಗೊತ್ತಿಲ್ಲ. ಅದಕ್ಕೂ ಮುಖ್ಯ ಇವ್ಯಾವೂ ಬಿಎಸ್‌ಪಿಯ ತತ್ವ ಸಿದ್ಧಾಂತಗಳಾಗಲಿ, ಚುನಾವಣಾ ಪ್ರಣಾಳಿಕೆಯಲ್ಲಾಗಲಿ ಜಾಗ ಪಡೆದುಕೊಳ್ಳುವುದಿಲ್ಲ. ಇಂತದ್ದನ್ನೆಲ್ಲಾ ಪ್ರಶ್ನಿಸಿದರೆ ಬಿಎಸ್‌ಪಿ ಸಹಿಸುವುದೂ ಇಲ್ಲ. ಮುಲಾಯಂ ತನ್ನ ಆಡಳಿತವಿದ್ದಾಗ ಉತ್ತರ ಪ್ರದೇಶ ಅಭಿವೃದ್ಧಿ ಮಂಡಳಿ (UPDC) ರಚಿಸಿ ತನ್ನ ಚೇಲಾ ಅಮರ್‌ಸಿಂಗ್‌ನನ್ನು ಅದರ ಅಧ್ಯಕ್ಷರನ್ನಾಗಿಸಿದ್ದರು. ಈ ಮಂಡಳಿಯಲ್ಲಿ ಖ್ಯಾತ ಉದ್ಯಮಪತಿಗಳಾದ ಬಿರ್ಲಾ, ಬಜಾಜ್, ನಿಲೇಕಣಿ, ಸಹಾರಾ ಗ್ರೂಪ್‌ನ ಸುಬ್ರತೊ ರಾಯ್, ಅಮಿತಾಭ್ ಬಚ್ಚನ್ ಮುಂತಾದವರಿದ್ದರು. ಇವರೇ ಯುಪಿಯ ಕೈಗಾರಿಕ ಅಭಿವೃದ್ಧಿಯ ನೀತಿ ನಿರೂಪಕರಾಗಿದ್ದವರು. ಮಾಯಾವತಿ ಗೆದ್ದ ನಂತರ ಅಮರ್‌ಸಿಂಗ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಈಗ ಮಾಯಾವತಿ ಮುಂದೇನು ಮಾಡುತ್ತಾರೋ ಕಾದು ನೋಡಬೇಕಿದೆ. ಇದೇ UPDC ಕಮಿಟಿಯು ವಿಶೇಷ ಆರ್ಥಿಕ ವಲಯ (SEZ)ಗಳ ರಚನೆ ಬಗ್ಗೆಯೂ ಕಾರ್ಯೋನ್ಮುಖವಾಗಿತ್ತು. ಮುಂದೆ ಅಕಸ್ಮಾತ್ ಈ ಕಮಿಟಿಗಳು ರದ್ದಾದರೂ SEZ ನಂತಹ ರಿಯಲ್ ಎಸ್ಟೇಟ್ ಕಳ್ಳತನ ನಿಲ್ಲುವ ಸಾಧ್ಯತೆಯಂತೂ ಇಲ್ಲ. ಬಡರೈತರ ಹುಂಡಿ ಮೇಲೆ ದಲಿತ ಮುಖ್ಯಮಂತ್ರಿ ಒದ್ದರೆ ಅದು ಅಷ್ಟೇನೂ ಆಹ್ಲಾದಕರವಾಗಿರದು ಅಲ್ಲವೆ!

Social Engineering ಅರ್ಥಾತ್ ಹೊಸ ಜಾತಿ ಸಂಯೋಜನೆಯೊಂದಿಗೆ ಒಂದು ಎಲೆಕ್ಷನ್ ಗೆಲ್ಲುವುದೇ ಬಡ ಭಾರತೀಯನ ಇವತ್ತಿನ ಸಂಕಟಗಳಿಗೆಲ್ಲಾ ಪರಿಹಾರ ತಂದುಕೊಡಲಾರದು.

ಈ ಎಚ್ಚರ ಜನರಿಗಿರದೇ ಹೋದರೆ ಗರೀಬಿ ಹಟಾವೋ, ಜೈಶ್ರೀರಾಂ ಸ್ಲೋಗನ್ ಕೇಳಿ ಮೋಸ ಹೋದಂತೆಯೇ ಮಾಯಾವತಿಯ

ತಿಲಕ್, ತರಾಜ್ ಔರ್ ತಲ್‌ವಾರ್
ಉಸ್ಕೊ ಮಾರೊ ಜೂತೆ ಚಾರ್

ಎಂಬ ಡೈಲಾಗ್‌ನಿಂದಲೂ ಜನ ಫೂಲ್ ಆಗುತ್ತಾರೆ. ಏಕೆಂದರೆ ಅದೇ ಮಾಯಾವತಿ ಈಗ

ಹಾತಿ ನಹಿ ಗಣೇಶ್ ಹೈ
ಬ್ರಹ್ಮ ವಿಷ್ಣು ಮಹೇಶ್ ಹೈ

ಎನ್ನುತ್ತಿದ್ದಾರೆ. ■

ಸಿಟಿ ಸೆಂಟ್ರಲ್ ಆಸ್ಪತ್ರೆ ಎಂಬ ಮೃತ್ಯುಕೂಪ


ದಾವಣಗೆರೆ

ದಾವಣಗೆರೆ ಎಂದರೆ ಆಸ್ಪತ್ರೆಗಳಿಗೆ ಹೆಸರುವಾಸಿ. ಸುತ್ತಮುತ್ತಲ ಜಿಲ್ಲೆಗಳ ರೋಗಿಗಳು ಚಿಕಿತ್ಸೆಗೆಂದು ಇಲ್ಲಿಗೆ ಬರುತ್ತಾರೆ. ದೊಡ್ಡಾಸ್ಪತ್ರೆ ಎಂದು ಖ್ಯಾತಿ ಗಳಿಸಿರುವ ಚಿಗಟೇರಿ ಜನರಲ್ ಆಸ್ಪತ್ರೆಯಲ್ಲಿ ಜಿಗಣೆಗಳಂತೆ ರಕ್ತ ಹೀರುವ ವೈದ್ಯರಿದ್ದು ರೋಗಿಗಳಿಂದ ಹಣ ಸುಲಿದರೂ ಕೂಡ ನ್ಯಾಯವಾದ ಚಿಕಿತ್ಸೆ ನೀಡದೆ ಇರುವುದರಿಂದ ಅನಿವಾರ್ಯವಾಗಿ ರೋಗಿಗಳ ಸಂಬಂಧಿಗಳು ತಮ್ಮವರ ಜೀವ ಉಳಿಸಿಕೊಳ್ಳಲು ಜಾಸ್ತಿ ಹಣ ಖರ್ಚಾದರೂ ಪರವಾಗಿಲ್ಲವೆಂದುಕೊಂಡು ಒಳ್ಳೆಯ ಚಿಕಿತ್ಸೆಯನ್ನು ಕೊಡಿಸುವುದಕ್ಕಾಗಿ ಖಾಸಗಿ ಆಸ್ಪತ್ರೆಗಳಿಗೆ ಸೇರಿಸುತ್ತಾರೆ. ದಾವಣಗೆರೆಯ ಪಿ.ಜೆ. ಬಡಾವಣೆ, ಎಂ.ಸಿ.ಸಿ. 'ಎ' ಬ್ಲಾಕ್, ಎಂ.ಸಿ.ಸಿ. 'ಬಿ' ಬ್ಲಾಕ್‌ಗಳಲ್ಲಿಯೇ ಸುಮಾರು 50 ಖಾಸಗಿ ನರ್ಸಿಂಗ್ ಹೋಂಗಳಿವೆ. ಆದರೆ ಈ ಖಾಸಗಿ ಆಸ್ಪತ್ರೆಗಳಲ್ಲಿ ಒಳ್ಳೆಯ ಚಿಕಿತ್ಸೆ ಸಿಗುವುದಿರಲಿ, ದಾಖಲು ಮಾಡಿದ ರೋಗಿಯನ್ನು ಜೀವಂತವಾಗಿ ಮರಳಿ ಮನೆಗೆ ಕರೆದುಕೊಂಡು ಹೋಗುವ ಖಾತ್ರಿಯೇ ಇಲ್ಲವಾಗಿದೆ. ಸಣ್ಣಪುಟ್ಟ ಕಾಯಿಲೆಗಳಿದ್ದರೂ ಮಾಡಬಾರದ ಟೆಸ್ಟುಗಳನ್ನೆಲ್ಲ ಮಾಡಿ, ಕೊಡದೆ ಇರುವ ಔಷಧಿ ಮಾತ್ರೆಗಳನ್ನು ಕೊಟ್ಟಿದ್ದೇವೆಂದು ಹೇಳಿ ದಿನವೊಂದಕ್ಕೆ ಕನಿಷ್ಠ 10 ರಿಂದ 20 ಸಾವಿರ ರೂ.ಗಳಂತೆ ಬಿಲ್ಲು ಜಡಿದು ವಸೂಲಿ ಮಾಡುತ್ತಿರುವುದರಿಂದಾಗಿ ಸರ್ಕಾರಿ ಆಸ್ಪತ್ರೆಯೆಂಬ ಬೆಂಕಿಯಿಂದ ಹೊರಬಂದು ಖಾಸಗಿ ಆಸ್ಪತ್ರೆಯೆಂಬ ಬಾಣಲೆಗೆ ಬೀಳಲೇಬೇಕಾದ ಪರಿಸ್ಥಿತಿ ರೋಗಿಗಳದಾಗಿದೆ.

ರೋಗಿಗಳನ್ನು I.C.U. ವಾರ್ಡ್‌ಗಳಲ್ಲಿ ವಾರಗಳ ಕಾಲ ಚಿಕಿತ್ಸೆ ಕೊಡುವ ನೆಪದಲ್ಲಿಟ್ಟುಕೊಂಡು ರೋಗಿ ಸತ್ತಿದ್ದರೂ ಕೃತಕ ಉಸಿರಾಟದ ಜೋಡಣೆ ಮಾಡಿ ಕಾಲ ಕಳೆದು ರೋಗಿಗಳ ಸಂಬಂಧಿಗಳಿಂದ ಲಕ್ಷಗಟ್ಟಲೆ ಹಣ ವಸೂಲಿ ಮಾಡುವ ಹೀನಾಯ ವರ್ತನೆಯನ್ನು ಇಲ್ಲಿನ ಅನೇಕ ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಮಾಡಲಾಗುತ್ತದೆಯಾದರೂ-ಹೆಣಕ್ಕೂ ಚಿಕಿತ್ಸೆ ಮಾಡಿದ್ದೇವೆಂದು ಹಣ ಸುಲಿಗೆಗಿಳಿಯುವ ಅಮಾನುಷತೆಯನ್ನು ದಾವಣಗೆರೆಯ "ಸಿಟಿ ಸೆಂಟ್ರಲ್ ಹಾಸ್ಪಿಟಲ್"ನಲ್ಲಿ ಮಾತ್ರ ಕಾಣಬಹುದೇನೋ?

ಸಿಟಿ ಸೆಂಟ್ರಲ್ ಹಾಸ್ಪಿಟಲ್ ಎಂಬ ಮೃತ್ಯುಕೂಪ

ನಾಲ್ಕೈದು ವರ್ಷಗಳ ಕೆಳಗೆ ಪ್ರಿನ್ಸ್ ಜಯಚಾಮ ರಾಜೇಂದ್ರ ಬಡಾವಣೆ (ಪಿ.ಜೆ. ಬಡಾವಣೆ)ಯಲ್ಲಿದ್ದ ಒಂದು ವಸತಿಗೃಹವನ್ನು ನೆಲಸಮ ಮಾಡಿ ಅದರ ಅವಶೇಷಗಳ ಮೇಲೆ ಅವತರಿಸಿದ್ದೆ ಈ ಸಿಟಿ ಸೆಂಟ್ರಲ್ ಹಾಸ್ಪಿಟಲ್. ಇದರ ಮಾಲೀಕ ಡಾ. ಶಾಂತಕುಮಾರ. ಈ ಆಸ್ಪತ್ರೆ ಪ್ರಾರಂಭವಾದಾಗಿನಿಂದ ತಿಂಗಳಿಗೆ ಇಬ್ಬರೇ ಎಂದುಕೊಂಡರೂ ನೂರಾರು ಮಂದಿ ರೋಗಿಗಳು ಶಾಂತಕುಮಾರನ ಧನದಾಹಕ್ಕಾಗಿಯೇ ಈ ಆಸ್ಪತ್ರೆಯಲ್ಲಿ ಪ್ರಾಣ ತೆತ್ತಿದ್ದಾರೆ. ಸಿಟಿ ಸೆಂಟ್ರಲ್ ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳನ್ನು ಐಸಿಯುನಲ್ಲಿಟ್ಟು, ರೋಗಿಯ ಹೆಂಡತಿ ಮಕ್ಕಳಿಗೂ ನೋಡಲು ಬಿಡುವುದಿಲ್ಲ, ವಾರ ಅಥವಾ ಹದಿನೈದು ದಿನಗಳ ಕಾಲ ಹೊರಗೇ ಇದ್ದು ವೈದ್ಯರು ಬರೆದು ಕೊಟ್ಟ ಔಷಧಿ ಮಾತ್ರೆಗಳನ್ನು ತಂದು ಕೊಟ್ಟು ಮನೆ ಮಂದಿ ಎಲ್ಲ ನಾಯಿಗಳಂತೆ ಬಾಗಿಲು ಕಾಯುವ ಪರಿಸ್ಥಿತಿಯನ್ನು ಆಸ್ಪತ್ರೆಯ ಮಾಲೀಕ ಶಾಂತಕುಮಾರ ಸೃಷ್ಟಿಸಿದ್ದಾನೆ. ಶಾಂತಕುಮಾರ ಈ ಪರಿಸ್ಥಿತಿಯನ್ನು ಸೃಷ್ಟಿಸಿರುವುದೇಕೆಂದರೆ: ರೋಗಿಯನ್ನು ನೋಡಿ ಬದುಕುವುದಿಲ್ಲವೆಂಬ ತೀರ್ಮಾನಕ್ಕೆ ಬಂದು, ಸಂಬಂಧಪಟ್ಟವರು ರೋಗಿಯನ್ನು ಡಿಸ್‌ಚಾರ್ಜ್ ಮಾಡಿಸಿ ಕರೆದುಕೊಂಡು ಹೋಗಿ ತನ್ನ ಲಾಭಕ್ಕೆ ಧಕ್ಕೆ ತರಬಾರದೆಂಬುದು ಆತನ ಮೊದಲನೆಯ ತಂತ್ರವಾಗಿದೆ. ಐ.ಸಿ.ಯುನಲ್ಲಿನ ರೋಗಿಯು ಸತ್ತಿರುವುದನ್ನು ಒಂದು ವೇಳೆ ಸಂಬಂಧಿಕರು ಗಮನಿಸಿ ತಕ್ಷಣ ಹೆಣವನ್ನು ವಶಕ್ಕೆ ಒಪ್ಪಿಸುವಂತೆ ಒತ್ತಾಯಿಸಿದರೆ ಕೃತಕ ಉಸಿರಾಟದ ಜೋಡಣೆಯ ನಾಟಕದೊಂದಿಗೆ ಹೆಣಕ್ಕೆ ಶಸ್ತ್ರಚಿಕಿತ್ಸೆ ಮುಂತಾದ ಭಯಂಕರ ಶಸ್ತ್ರಗಳನ್ನು ಮಾಡಿಯಾದರೂ ರೋಗಿಯ ಕಡೆಯವರಿಂದ ಹಣ ಸುಲಿಗೆ ಮಾಡುವುದು ಆತನ ಎರಡನೆ ತಂತ್ರವಾಗಿದೆ.



ನಗರದ ಹೃದಯ ಭಾಗದಲ್ಲಿರುವ ಆ ಆಸ್ಪತ್ರೆ ಬಿ.ಪಿ.ಎಲ್. ಕಾರ್ಡುಗಳನ್ನು ಹೊಂದಿರುವ ರೋಗಿಗಳನ್ನು ಸೆಳೆದು ಇಡೀ ಆಸ್ಪತ್ರೆಯನ್ನು ಗಿಜಿಗುಡುವಂತೆ ತೋರಿಸುವುದರ ಮೂಲಕ ಹಣವಂತ ರೋಗಿಗಳನ್ನು ಸೆಳೆಯುತ್ತಿದೆ. ಆದರೆ ಉನ್ನತ ಚಿಕಿತ್ಸೆ ನೀಡುವ ನೆಪದಲ್ಲಿ ಹೆಚ್ಚೆ ಹೆಚ್ಚಿಗೂ ವಿವಿಧ ತಂತ್ರಗಳನ್ನು ಹೆಣೆದು ರೋಗಿಗಳನ್ನು ಸುಲಿಯಲಾಗುತ್ತಿದೆ. ಎಲ್ಲ ಖಾಸಗಿ ಆಸ್ಪತ್ರೆಗಳ ಹಣೆ ಬರಹವೇ ಹೀಗೆ ಎಂದು ಉತ್ತರ ಕಂಡುಕೊಳ್ಳಬಹುದಾದರೂ ಸಿಟಿ ಸೆಂಟ್ರಲ್ ಆಸ್ಪತ್ರೆಯ ಮಾಲೀಕ ಶಾಂತಕುಮಾರ ಮಾತ್ರ ರೋಗಿಗಳಿಂದ ಹಣ ಸುಲಿಯಲು ಕ್ರೂರ ತಂತ್ರಗಳನ್ನನುಸರಿಸುತ್ತಾನೆ. ಇವುಗಳಲ್ಲಿ ಒಂದೆರಡನ್ನು ಮಾತ್ರ ಉದಾಹರಿಸಬಹುದು.

ಪೂರ್ಣಚಂದ್ರ ತೇಜಸ್ವಿಯನ್ನು ಕೊಂದ ಶಾಂತಕುಮಾರ

ಶಾಂತಕುಮಾರ ತನ್ನ ಸುಲಿಗೆ ಹೀಗೇ ಅಬಾಧಿತವಾಗಿ ಮುಂದುವರೆಯುತ್ತದೆಂದು ಕೊಂಡಿದ್ದನೆನಿಸುತ್ತದೆ. ಆದರೆ ಮೊನ್ನೆ 29.4.2007 ರಂದು ಚಳ್ಳಕೆರೆ ತಾಲ್ಲೂಕು ಬುಡ್ನಹಟ್ಟಿಯ ಪೂರ್ಣಚಂದ್ರ ತೇಜಸ್ವಿ ಎಂಬ ಯುವಕ ಅಪಘಾತಕ್ಕೊಳಗಾಗಿ ಪ್ರಜ್ಞಾಹೀನನಾಗಿದ್ದ. ಚಿತ್ರದುರ್ಗದ ವೈದ್ಯನೊಬ್ಬನ ಸಲಹೆಯ ಮೇರೆಗೆ ತೇಜಸ್ವಿಯ ಕುಟುಂಬದವರು ಆತನನ್ನು ಈ ಮನೆಹಾಳ ಆಸ್ಪತ್ರೆಗೆ ದಾಖಲಿಸಿದ್ದರು. ಮೂರ್‍ನಾಲ್ಕು ದಿನಗಳ ನಂತರ ತೇಜಸ್ವಿಗೆ ಪ್ರಜ್ಞೆ ಬಂದು ತನ್ನ ಕುಟುಂಬದವರ ಹತ್ತಿರ ಮಾತನಾಡಿದ್ದಾನೆ. ತನ್ನ ಗೆಳೆಯರ ಹತ್ತಿರ ಮೊಬೈಲ್‌ನಲ್ಲೂ ಮಾತನಾಡಿದ್ದಾನೆ. ಆದರೆ 7.5.2007 ರ ರಾತ್ರಿ ಇದ್ದಕ್ಕಿದ್ದಂತೆ ತೇಜಸ್ವಿಯ ಪರಿಸ್ಥಿತಿ ಬಿಗಡಾಯಿಸಿ ಗಂಭೀರವಾದಾಗ ತಕ್ಷಣ ಚಿಕಿತ್ಸೆ ನೀಡಲು ಶಾಂತಕುಮಾರನನ್ನು ತೇಜಸ್ವಿಯ ಕುಟುಂಬದವರು ಗೋಗರೆದಿದ್ದಾರೆ. ಶಾಂತಕುಮಾರ ಇದಕ್ಕೆ ಸ್ಪಂದಿಸುವುದಿರಲಿ, ತಣ್ಣಗೆ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಮಲಗಿಬಿಟ್ಟಿದ್ದಾನೆ. ಆಸ್ಪತ್ರೆ ಯಲ್ಲಿನ ವೈದ್ಯರಾಗಲೀ, ಕೊನೆಗೆ ನರ್ಸುಗಳಾಗಲೀ ತೇಜಸ್ವಿಗೆ ಚಿಕಿತ್ಸೆ ನೀಡಿಲ್ಲ-ರಾತ್ರಿಯೆಲ್ಲಾ ನರಳಿ ಒದ್ದಾಡಿದ ತೇಜಸ್ವಿ 8.5.2007 ರಂದು ಬೆಳಿಗ್ಗೆ ಮೃತಪಟ್ಟಿದ್ದಾನೆ.

ಪರವಾನಗಿ ರದ್ದುಗೊಳಿಸಲು ಮೀನ ಮೇಷ ಯಾಕೆ?

ಆಸ್ಪತ್ರೆಯ ಇಂತಿಷ್ಟು ದೂರದವರೆಗೆ ಬಾರು, ವೈನ್‌ಶಾಪುಗಳಿರಬಾರದೆಂಬ ನಿಬಂಧನೆ ಇದ್ದರೂ ಸಿಟಿ ಸೆಂಟ್ರಲ್ ಆಸ್ಪತ್ರೆಯ ಪಕ್ಕದಲ್ಲಿಯೇ ಶ್ರೀನಿಧಿ ಗಾರ್ಡನ್ ಬಾರ್ ಮತ್ತು ರೆಸ್ಟೋರೆಂಟ್ ಇದೆ. (ಆಸ್ಪತ್ರೆ ಪ್ರಾರಂಭವಾಗುವುದಕ್ಕೆ ಮೊದಲೇ ಈ ಬಾರ್ ಮತ್ತು ರೆಸ್ಟೋರೆಂಟ್ ಇತ್ತು). ಕುಡಿದು ಅಮಲೇರಿದವರು ರೋಗಿಗಳೊಂದಿಗೆ, ಅವರ ಸಂಬಂಧಿಕರೊಂದಿಗೆ ದಿನನಿತ್ಯ ಡಿಕ್ಕಿ ಹೊಡೆದುಕೊಂಡು ಹೋಗುತ್ತಿದ್ದರೂ ಸಿಟಿ ಸೆಂಟ್ರಲ್ ಆಸ್ಪತ್ರೆಯ ಪರವಾನಗಿ ಪತ್ರಕ್ಕೆ ಪಕ್ಕದಲ್ಲಿಯೇ ಬಾರ್ ಅಂಡ್ ರೆಸ್ಟೋರೆಂಟ್ ಇದ್ದರೂ ಯಾವುದೇ ಮೀನ ಮೇಷ ಎಣಿಸದೆ ನಗರಸಭೆ ಪರವಾನಗಿ ನೀಡಿಬಿಟ್ಟಿದೆ. ಈಗ ಸಿಟಿ ಸೆಂಟ್ರಲ್ ಆಸ್ಪತ್ರೆಯ ಪರವಾನಗಿ ಪತ್ರಕ್ಕೆ ಯಾವುದೇ ಕ್ರಿಮಿ ಸೋಂಕದಂತೆ ಜಿಲ್ಲಾಧಿಕಾರಿ ಎಂ.ಬಿ. ದ್ಯಾಬೇರಿ ಕಾಯುತ್ತಿದ್ದಾನೆ.

ಹೆಸರು ಬಿ.ಪಿ.ಎಲ್. ರೋಗಿಗಳದ್ದು-ಸುಲಿಗೆ ಸರ್ಕಾರದ ಬೊಕ್ಕಸದ್ದು

ಬಿ.ಪಿ.ಎಲ್. ಕಾರ್ಡ್ ಇದ್ದ ರೋಗಿಗೆ ಯಶಸ್ವಿನಿ, ಸುರಕ್ಷಾ, ಭಾಗ್ಯಲಕ್ಷ್ಮಿ ಯೋಜನೆಗಳಡಿಯಲ್ಲಿ ಸರ್ಕಾರವು ಐದು ಸಾವಿರ ರೂಪಾಯಿ ಅನುದಾನವನ್ನು ಕೊಡುತ್ತದೆ. ಇಲ್ಲಿನ ಬಹುತೇಕ ಬಡಾ ನರ್ಸಿಂಗ್‌ಹೋಮುಗಳು ಮೇಲಿನ ಯೋಜನೆಗಳಿಗೆ ಅನ್ವಯವಾಗುವ ರೋಗಿಗಳನ್ನು ತಮ್ಮಲ್ಲಿ ಸೇರಿಸಿಕೊಂಡು ಇಲ್ಲಿನ ವೈದ್ಯರು ಅದ್ಯಾವ ಪರಿ ಚಿಕಿತ್ಸೆಯನ್ನು ನೀಡುತ್ತಾರೊ ಗೊತ್ತಿಲ್ಲ, ಆದರೆ ಸರ್ಕಾರ ನೀಡುವ ಅನುದಾನದ ಹಣವನ್ನು ಮಾತ್ರ ನಿರಂತರವಾಗಿ ನುಂಗುತ್ತಲೇ ಇದ್ದಾರೆ. ಇಡೀ ದಾವಣಗೆರೆಯ ನರ್ಸಿಂಗ್ ಹೋಮುಗಳಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಸಿಟಿ ಸೆಂಟ್ರಲ್ ಆಸ್ಪತ್ರೆಗೆ ಬಿ.ಪಿ.ಎಲ್. ಅನುದಾನದ ರೋಗಿಗಳು ದಾಖಲಾಗುತ್ತಾರೆ. ಲಕ್ಷಗಟ್ಟಲೇ ಪ್ರತ್ಯಕ್ಷವಾಗಿ ಹಣ ನೀಡುವ ರೋಗಿಗಳನ್ನೇ ಸುಡುಗಾಡು ಪಾಲು ಮಾಡುತ್ತಿರುವಾಗ ಸರ್ಕಾರದಿಂದ ಪರೋಕ್ಷವಾಗಿ ಹಣವನ್ನು ಪಡೆದುಕೊಳ್ಳುವ (ರೋಗಿಗಳ ಹೆಸರಿನಲ್ಲಿ) ಈ ಆಸ್ಪತ್ರೆಯವರು ಬಿ.ಪಿ.ಎಲ್. ರೋಗಿಗಳನ್ನು ಇನ್ನೆಷ್ಟು ಮಟ್ಟದ ಶೋಷಣೆಗೆ ಗುರಿ ಮಾಡುತ್ತಿರಬಹುದು?

ಹಣೆಬರಹ ಇದ್ರೆ ಉಳೀತಿದ್ರು!

ಶಾಂತಕುಮಾರ ವೈದ್ಯನೋ ಅಥವಾ ಬೀದಿ ಬದಿಯ ಗಿಳಿಶಾಸ್ತ್ರದವನೋ ನೀವೇ ಯೋಚಿಸಿ! ತೇಜಸ್ವಿ ಮೃತಪಟ್ಟ ದಿನ ಶಾಂತಕುಮಾರ ಮತ್ತವನ ಸಿಬ್ಬಂದಿಯ ನಿರ್ಲಕ್ಷ್ಯವನ್ನು ತೇಜಸ್ವಿಯ ಹೆಂಡತಿ ಸುಮಿತ್ರಮ್ಮ ಸಾರ್ವಜನಿಕರೊಂದಿಗೆ ಸೇರಿ ಪ್ರಶ್ನಿಸಿದಾಗ ಶಾಂತಕುಮಾರ "ಹಣೆಬರಹ ಇದ್ರೆ ಉಳೀತಾರೆ ಇಲ್ಲಾಂದ್ರೆ ಸಾಯ್ತಾರೆ, ಯಾರಾದ್ರೂ ತಡಿಯಲಿಕ್ಕಾಗುತ್ತಾ?" ಎಂದು ಸುಮಿತ್ರಮ್ಮ ಹಾಗೂ ಸಾರ್ವಜನಿಕರನ್ನೇ ಮರುಪ್ರಶ್ನೆ ಮಾಡಿದ್ದಾನೆ. ತನ್ನ ನಿರ್ಲಕ್ಷ್ಯದಿಂದ ಬಂದು ಪ್ರಾಣವನ್ನು ಕಳೆದಿದ್ದೂ ಅಲ್ಲದೆ ತನ್ನ ತಪ್ಪನ್ನು ಹಣೆಬರಹದ ಮೇಲೆ ಹೇರಿದ್ದಾನೆ. ಹಣೆಬರಹವೇ ಜೀವ ಉಳಿಸುತ್ತದೆ ಅಥವಾ ಅಳಿಸುತ್ತದೆನ್ನುವುದಾದರೆ ಶಾಂತಕುಮಾರ ಶಾಶ್ವತವಾಗಿ ತನ್ನ ಆಸ್ಪತ್ರೆಗೆ ಬೀಗ ಜಡಿದು ಕೀಲಿ ಕೈಯನ್ನು ಹಣೆಬರಹಕ್ಕೊಪ್ಪಿಸಬೇಕಲ್ಲವೇ?



ಪೂರ್ಣಚಂದ್ರ ತೇಜಸ್ವಿಯ ಶವ

ಸಿಟಿ ಸೆಂಟ್ರಲ್ ಆಸ್ಪತ್ರೆಯ ಸೇವೆಯ ಸ್ಯಾಂಪಲ್ಲುಗಳು

ಹೊಸಪೇಟೆಯ ಗುಂಡಾ ಅರಣ್ಯ ವಿಭಾಗದ ಅತಿಥಿಗೃಹದ ಕೇರ್ ಟೇಕರ್ ಆಗಿದ್ದ ವೆಂಕಟೇಶ್‌ರನ್ನು ಅದ್ಯಾರ ಮಾತು ಕೇಳಿ ಸಿಟಿ ಸೆಂಟ್ರಲ್ ಆಸ್ಪತ್ರೆಯೆಂಬ ಮೃತ್ಯುಕೂಪಕ್ಕೆ ಸೇರಿಸಿದರೋ ಗೊತ್ತಿಲ್ಲ, ಆತ ಇಲ್ಲಿದ್ದ ಹನ್ನೆರಡು ದಿನವೂ ಕಣ್ಣು ತೆರೆಯಲಿಲ್ಲ, ಮಾತನ್ನು ಆಡಲಿಲ್ಲ, ಈ ಮಧ್ಯೆಯೇ ವೆಂಕಟೇಶ್‌ರವರ ಪತ್ನಿ ಸುವಮ್ಮ ಹಾಗೂ ತಾಯಿ ವೆಂಕಟೇಶ್‌ರನ್ನು ಡಿಸ್‌ಚಾರ್ಜ್ ಮಾಡುವಂತೆ ಶಾಂತಕುಮಾರನನ್ನು ಪರಿಪರಿಯಾಗಿ ಬೇಡಿಕೊಂಡಿದ್ದಾರೆ. ಆದರೆ ಶಾಂತಕುಮಾರ್ ಮತ್ತು ವೆಂಕಟೇಶ್‌ರನ್ನು ನೋಡಿಕೊಳ್ಳುತ್ತಿದ್ದ ವೈದ್ಯ ಸುಬ್ಬಾರಾವ್ ಸೊಪ್ಪು ಹಾಕಿಲ್ಲ, ಆಸ್ಪತ್ರೆಯಿಂದ ಬಿಡುಗಡೆಯಾಗುವ ಒಂದು ದಿನದ ಮೊದಲೇ ಮೃತರಾಗಿದ್ದರೂ ಸಿಟಿ ಸೆಂಟ್ರಲ್ ಆಸ್ಪತ್ರೆಯವರು ಲಕ್ಷಗಟ್ಟಲೆ ಬಿಲ್ಲು ತೋರಿಸಿ ಹಣ ಕಿತ್ತ ನಂತರ ಮಾತ್ರವೇ ವೆಂಕಟೇಶ್‌ರ ಶವವನ್ನು ತೆಗೆದುಕೊಂಡು ಹೋಗಲು ಅನುಮತಿ ನೀಡಿದ್ದಾರೆ.

****

ದಾವಣಗೆರೆ ತಾಲ್ಲೂಕ್ ದೊಡ್ಡಬಾತಿ ಗ್ರಾಮದ ಪರಸಪ್ಪ ಬಿನ್ ಹಾಲಪ್ಪ ಎಂಬಾತ ಇತ್ತೀಚೆಗೆ ಇದೇ ಆಸ್ಪತ್ರೆಯಲ್ಲಿ ಮೃತನಾಗಿದ್ದಾನೆ. ವೈದ್ಯರ ನಿರ್ಲಕ್ಷ್ಯವೇ ಈತನ ಸಾವಿಗೆ ಕಾರಣ ಎಂದು ಮತ್ತೆ ಹೇಳಬೇಕಿಲ್ಲ. ಆದರೆ ಪರಸಪ್ಪನ ಕುಟುಂಬದ ಅಮಾಯಕತೆಯನ್ನು ಬಳಸಿಕೊಂಡು, ಸತ್ತು ಹೋದ ಪರಸಪ್ಪನ ಮೂಗಿಗೆ ಕೃತಕ ಉಸಿರಾಟದ ನಳಿಗೆಗಳನ್ನು ಜೋಡಿಸಿ, ಶಸ್ತ್ರಚಿಕಿತ್ಸೆಯನ್ನು ಮಾಡಿ 50 ಸಾವಿರ ರೂ. ಕಿತ್ತುಕೊಂಡು ಪರಸಪ್ಪನ ಶವವನ್ನು ಬಿಡುಗಡೆ ಮಾಡಿದ್ದಾರೆ-ಹೀಗೆಂದು ತೇಜಸ್ವಿಯ ಪತ್ನಿ ಸುಮಿತ್ರಮ್ಮನೇ ಜಿಲ್ಲಾಧಿಕಾರಿಗೆ ನೀಡಿದ ಮನವಿಯಲ್ಲಿ ಆಸ್ಪತ್ರೆಯ ವಿರುದ್ಧ ನೇರ ಆರೋಪ ಮಾಡಿದ್ದಾರೆ.

ಲ್ಯಾಂಡ್ ಮಾಫಿಯಾ ನೆರಳಲ್ಲಿ ಅಯ್ಯಪ್ಪ ದೇಗುಲ ವಿವಾದ

ಬೆಂಕಿ ಇಟ್ಟವರು ಬೆತ್ತಲಾಗುತ್ತಿದ್ದಾರೆ

"ಗಂಗಾವತಿಯ ಅಯ್ಯಪ್ಪ ದೇವಸ್ಥಾನದ ಅನಧಿಕೃತ ...ಮೆಂಟ್ ಕೆಡವಿದ ಪ್ರಕರಣ ಬೇರೆ ಬೇರೆ ಬಣ್ಣ ...ಮಕೊಳ್ಳುತ್ತಿದೆ. ಯಾರ ಬಣ್ಣ ಬಯಲಾದರೂ ...ಾಗೋದು ಮಾತ್ರ ಎಲ್ಲ ನಾಯಕರು" ಎಂಬ ...ವನ್ನು 'ಲಂಕೇಶ್' ವಾರದ ಹಿಂದೆ ಪ್ರಕಟಿಸಿತ್ತು.

...ವರದಿ ಪ್ರಕಟವಾದ ನಂತರ ಒಬ್ಬೊಬ್ಬರೇ ಬೆತ್ತಲಾ ...ದ್ದು ಅಯ್ಯಪ್ಪ ಸ್ವಾಮಿ ದೇಗುಲದ ಬೇಸ್‌ಮೆಂಟ್ ...ವುಗೊಳಿಸಿದ ವಿರಪಾಪುರದ ಸರ್ವೆ ನಂ. 53ರಲ್ಲಿ ...ವೆ ಅದು ಒಟ್ಟು 226 ಎಕರೆ ಅರಣ್ಯ ಇಲಾಖೆಯದು ...ನು ಪತ್ತೆಯಾಗಿದೆ. ಇಲ್ಲಿಗೆ ತೆರವುಗೊಳಿಸಿದ ...ಮೆಂಟ್ ಒಂದೇ ಅಲ್ಲ ಗಂಗಾವತಿಯ ವಿಐಪಿಗಳು, ...ಕಾರಣಿಗಳು ಬೇನಾಮಿ ಹೆಸರಲ್ಲಿ ಭೂಮಿ ಒತ್ತುವರಿ ...ಡಿಕೊಂಡಿರುವುದು ಗೊತ್ತಾಗಿದೆ. ಮೇಲೆ ಹೇಳಿದ ... ನಂ. 53 ರ 226 ಎಕರೆ ಜಮೀನು 1968 ... ಅರಣ್ಯ ಇಲಾಖೆಯ ವಶದಲ್ಲಿದ್ದರೂ ...ಾವತಿಯ ಕಂದಾಯ ಇಲಾಖೆ, ...ಕಾರಸ್ಥರ ಮುಲಾಜಿಗೆ ಸಿಕ್ಕು ಇಡೀ ...ಮಿ ಹರಿದುಹಂಚಿಕೊಳ್ಳಲು ...ಾವಾಗಿಬಿಟ್ಟಿದೆ. ಇಲ್ಲಿ ಕಟ್ಟಿದ್ದ ಅನಧಿಕೃತ ...ಮೆಂಟನ್ನು ಮುಂದು ಮಾಡಿಕೊಂಡು ...ನ್ನ ಹಿಂದೂ-ಮುಸ್ಲಿಂರ ನಡುವಿನ ಕದನ ...ಂತೆ ಮಾರ್ಪಡಿಸಿದ ಕಾಂಗ್ರೆಸ್ಸಿಗರು ...ು ವಾರ ಕಾಲ ಗಂಗಾವತಿಯ ನೆಮ್ಮದಿ ...ನ್ನು ಕಿತ್ತುಕೊಂಡಿದ್ದರು.



ಇಕ್ಬಾಲ್ ಅನ್ಸಾರಿ

...ಹಾಗೆ ನೋಡಿದರೆ ಡಿಸೆಂಬರ್ 2005 ... ಸರ್ಕಾರದ ಪ್ರಧಾನ ಕಾರ್ಯದರ್ಶಿ (...ದಾಯ ಇಲಾಖೆ) ಎಸ್.ಎಂ. ಜಾಮ್ ... ಹೊರಡಿಸಿದ ಸುತ್ತೋಲೆಯಂತೆ Writ petion ... 14048 of 2005 (KLR-RES) ...9.2005 ರಂದು ಕರ್ನಾಟಕ ಉಚ್ಚ ನ್ಯಾಯಾಲಯ ...ದ ತೀರ್ಪಿನಂತೆ ಯಾವುದೇ ಗೋಮಾಳ, ...ುರಾಣ, ಹುಲ್ಲುಬಣೆ ಜಮೀನು ...ನ್ನು ಯಾವುದೇ ಸಂಸ್ಥೆಗೆ ಅಥವಾ ... ಮಂಜೂರು ಮಾಡಲು ಅವಕಾಶ

ಕೊಪ್ಪಳ

...ಆದರೂ ಮೊನ್ನೆ ಹುಟ್ಟಾ ಬಿಜೆಪಿಯ ...ತೆ ವರ್ತಿಸುತ್ತಿದ್ದ ಕಾಂಗ್ರೆಸ್ ಶಾಸಕ ಶ್ರೀನಾಥ್ ... ಚಿಕ್ಕಪ್ಪ ಎಚ್.ಆರ್. ಶ್ರೀರಾಮುಲು ಹೆಸರಿನ ...ೇಜಿಗೆಂದು ಇದೇ ಸರ್ವೆ ನಂ. 53 ರ 226 ...ಯಲ್ಲಿ 35 ಎಕರೆ ಭೂಮಿಯನ್ನು ಅರಣ್ಯ ಇಲಾಖೆ ...ನ್ನು ಒಂದು ಮಾತೂ ಕೇಳದೆ ಆಗ ಶ್ರೀನಾಥ ... ಸಂಸದ ರಾಮುಲು ಪಡಕೊಂಡಿದ್ದಾರೆ. ಜೊತೆಗೆ ...ಎಕರೆ ಭೂಮಿಯನ್ನು ಸಣ್ಣ ಕೈಗಾರಿಕಾ ...ಖೆಗೆ ನೀಡಲಾಗಿತ್ತು. ಅದೇ 30 ಎಕರೆಯಲ್ಲಿ ...ರ್ಷಗಳ ಹಿಂದೆ ಕೌನ್ಸಿಲರ್ ಆಗಿದ್ದ ರಾಮನಾಯ್ಕ ...ು ಎಕರೆಯನ್ನು ಅತಿಕ್ರಮಿಸಿಕೊಂಡು ಅಕ್ರಮ-...ು ಸಮಿತಿಯ ಅಧ್ಯಕ್ಷನಾಗಿದ್ದ ಆಗಿನ ಶಾಸಕ ...ಂಗದೇವರಾಯಲುನಿಂದ ಹಕ್ಕುಪತ್ರ ಪಡೆ...ು ಹೋಗಿ ಮುಖಭಂಗಕ್ಕೀಡಾಗಿದ್ದ. ಹಾಗೇ ...5 ಎಕರೆ ಜಮೀನನ್ನು ಸತ್ಯವತಿ ಎಂಬುವವರು ...ರುವಾಗಿ ವಶಪಡಿಸಿಕೊಂಡು ನಂತರ ಅದನ್ನು ...ುಮಾರ ಎಂಬುವವರಿಗೆ ಮಾರಲು ಪ್ರಯತ್ನಿಸಿ

...ಕೋಟ್ಯಂತರ ರೂಪಾಯಿ ಬೆಲೆಬಾಳುವ ಇಂತಹ ...ಮಿಯನ್ನು ಲಪಟಾಯಿಸಲೆಂದೇ ಸರ್ವೆ ನಂ. 53 ರ 226 ಎಕರೆಯಲ್ಲಿ ಸಣ್ಣ ಕೈಗಾರಿಕೆಗೆಂದು ನೀಡಿದ್ದ 30 ಎಕರೆಯಲ್ಲಿ ಧಾರ್ಮಿಕ ಸ್ಥಳಗಳನ್ನು ಹುಟ್ಟುಹಾಕಿದ್ದು ಗಂಗಾವತಿ ಕಾಂಗ್ರೆಸ್ಸಿನ ಕೆಲವರು ಮುಂದೊಂದು ದಿನ ಅವುಗಳ ಸುತ್ತಮುತ್ತ ಮನೆಗಳನ್ನು ಕಟ್ಟಿಕೊಂಡು ಇಲ್ಲಾ ಮಾರಿಕೊಂಡು ರೊಕ್ಕ ಮಾಡಿಕೊಳ್ಳುವ ಪ್ಲಾನ್ ಹೊಂದಿದ್ದರು. ಹೀಗೆ ಇಲ್ಲಿ ಅಕ್ರಮವಾಗಿ ರಾಜಕಾರಣಿಗಳು ಬೇನಾಮಿ ಹೆಸರಲ್ಲಿ ಅಂದ್ರೆ ಕೃಷ್ಣಪ್ಪ ಲಮಾಣಿ ಹೆಸರಿಗೆ 14 ಎಕರೆ, ನರೇಂದ್ರ ಲಮಾಣಿ ಹೆಸರಿಗೆ 3 ಎಕರೆ ಭೂಮಿ ವಾರಸುದಾರರನ್ನು ಹುಡುಕಿಕೊಂಡು ಹೋದರೆ ಅದು ಗಂಗಾವತಿ ಬಸ್‌ಸ್ಟ್ಯಾಂಡ್ ದಾಟಿ ನಿವೃತ್ತ ರಾಜಕಾರಣಿಯೊಬ್ಬರ ಕಾಂಪೌಂಡ್‌ಗೆ ಕರೆದೊಯ್ದರೆ, ಮಾಜಿ ಶಾಸಕ ಮುರಳೀಧರನಿಗೆ ಬೇಕಾದ ಪ್ರಕಾಶ ಎಂಬ ಹೆಸರಲ್ಲಿ 2 ಎಕರೆ ಭೂಮಿ ವಶದಲ್ಲಿದೆ. ಯಾರಿಗೂ ಗೊತ್ತಿರದ ಮಹ್ಮದ್ ಆಸೀಫ್ ಹೆಸರಲ್ಲಿ 4 ಎಕರೆ, ತರೂತಮಿಯಾ ಹೆಸರಲ್ಲಿ 1 ಎಕರೆ 20 ಗುಂಟೆ ಅತಿಕ್ರಮವಾಗಿದ್ದರೆ, ಕಂದಾಯ ಇಲಾಖೆ ನೌಕರರ ಸಂಘಕ್ಕೆ ನೀಡಿರುವ 9 ಎಕರೆ ಭೂಮಿ ಬರಬಾದಾಗುತ್ತಿದೆ.

ಎತ್ತ ಹೊರಳಿದರೂ ಇಲ್ಲಿನ ಭೂಮಿ ಅಕ್ರಮಕೋರರನ್ನು ಬೆರಳು ಮಾಡಿ ತೋರಿಸುವುದು ಕಾಂಗ್ರೆಸ್ಸಿನ ಕೆಲವರತ್ತ. ಪರಿಸ್ಥಿತಿ ಹೀಗಿರುವಾಗ ಅಕ್ರಮ ದೇವಸ್ಥಾನದ ಬೇಸ್‌ಮೆಂಟ್ ತೆರವುಗೊಳಿಸಿದ ಕೂಡಲೇ ಶ್ರೀನಾಥ ದಿಗಿಲುಗೊಂಡಿದ್ದಾನೆ. ಬೇನಾಮಿ ಹೆಸರಿನ ಭೂಮಿಗೂ ಕುತ್ತು ಬರುತ್ತದೆ ಎಂದು ಅಯ್ಯಪ್ಪಸ್ವಾಮಿಯ ಭಕ್ತ ಶಿವದಾಸ್‌ನನ್ನು ಕರೆಸಿಕೊಂಡಿದ್ದಾನೆ. ಅದಕ್ಕೂ ಮುನ್ನ ಈತನನ್ನು ಸಚಿವ ಇಕ್ಬಾಲ್ ಅನ್ಸಾರಿ ಕರೆಸಿ ದೇವಸ್ಥಾನ ಬೇರೆಡೆಗೆ ಕಟ್ಟಿಸಿಕೊಡುತ್ತೇನೆ ಎಂದು ಮಿನಿ ವಿಧಾನ ಸೌಧದ ಏರಿಯಾದಿಂದ ತೆರವುಗೊಳಿಸಲು ಒಪ್ಪಿಗೆ ಪಡೆದಿದ್ದಾರೆ. ಆದರೆ ಶ್ರೀನಾಥ್‌ಗೆ ಹೆದರಿ ದಾಸ್ ದೇಗುಲ ಧ್ವಂಸ ಎಂದು ಚೀರಿಕೊಳ್ಳುತ್ತ ಗಂಗಾವತಿ ತುಂಬ ಓಡಾಡುವ ಹೊತ್ತಿಗೆ, ಅದಕ್ಕೆ ರಾಜಕೀಯ ಬೆರೆಸಿ ಮಜಾ ಉಡಾಯಿಸಲು ಕಾಂಗ್ರೆಸ್ಸಿಗರು ರೆಡಿಯಾಗಿ ಬಿಟ್ಟರು. ಜೊತೆಗೆ ಬಿಜೆಪಿಗಳು ಸೇರಿದ ಮೇಲೆ ಕೇಳುತ್ತೀರಾ? ಗಂಗಾವತಿ ವಿನಾಕಾರಣ ಒಂದು ವಾರ ಆತಂಕದಲ್ಲಿ ಕಳೆಯಿತು.

ಒಂದು ಮಾಹಿತಿಯಂತೆ ಕೃಷ್ಣಪ್ಪ ಲಮಾಣಿಯ 14 ಎಕರೆ, ನರೇಂದ್ರ ಲಮಾಣಿಯ 3 ಎಕರೆ, ಮಹ್ಮದ್ ಆಸೀಫ್‌ನ 4 ಎಕರೆ, ಸಿದ್ದಪ್ಪ ನಾಯಕನ 1 ಎಕರೆ, ಮತ್ತೊಂದು 2 ಎಕರೆ ಹೀಗೆ ಸುಮಾರು 25 ಕೋಟಿ ಬೆಲೆಬಾಳುವ 25 ಎಕರೆ ನೊಂದಣಿ ಇಲ್ಲದೆ ಈ ಭೂಮಿ ಗಂಗಾವತಿಯ ಗಣ್ಯರಿಗೆ ಮರು ಮಾರಾಟವಾಗಿದೆ. ಈ ಬಗ್ಗೆ ಈಗಾಗಲೇ ರಹಸ್ಯ ತನಿಖೆ ನಡೆದಿದ್ದು ಶೀಘ್ರ ವರದಿ ಬರಲಿದೆಯಂತೆ.



ಶ್ರೀನಾಥ್

ಇನ್ನೊಂದಿಷ್ಟು ಹಿನ್ನೆಲೆ

ಹೇಗೋ ಏನೋ 1998 ರ ಜೂನ್ 6 ರಂದು ಕೊಪ್ಪಳದ ಡಿ.ಸಿ. ಕಚೇರಿಯಿಂದ ಗಂಗಾವತಿಯ ವಿರಪಾಪುರ ಸರ್ವೆ ನಂ. 53 ರ 9 ಎಕರೆ ಭೂಮಿಯ ಮಾಲೀಕತ್ವ ದೃಢೀಕರಿಸುವ ದಾಖಲೆ ತರಲು ಉಮಾಪತಿ, ರಾಮಾನಾಯ್ಕ (ಮಾಜಿ ಕೌನ್ಸಿಲರ್), ಲಕ್ಷ್ಮವ್ವ ಕನಕಪ್ಪ ಎಂಬುವವರಿಗೆ ನೋಟೀಸ್ ಹೋಗಿದೆ ಅಷ್ಟೆ. ನಂತರ ಅದೇನಾಯಿತೆಂಬ ದಾಖಲೆಗಳು ಲಭ್ಯವಿಲ್ಲ. ನಂತರ 2002 ಫೆಬ್ರವರಿಯಲ್ಲಿ ರಾಮಾನಾಯ್ಕನಿಗೆ ಸಾಗುವಳಿ ಮಾಡುವ ಭೂಮಿ ಅರಣ್ಯ ಪ್ರದೇಶದ್ದು ಆದ್ದರಿಂದ ಸಾಗುವಳಿ ಚೀಟಿ ನೀಡಲಾಗುವುದಿಲ್ಲ ಎಂದು ವಲಯ ಅರಣ್ಯಾಧಿಕಾರಿಗಳು ಕಂದಾಯ ಅಧಿಕಾರಿಗಳಿಗೆ ಹೇಳಿದ್ದರು. ರಾಮಾನಾಯ್ಕ ಸೇರಿದಂತೆ ಅನೇಕರಿಗೆ ಗಂಗಾವತಿ ಕಾಂಗ್ರೆಸ್‌ನವರ ಬೆಂಬಲ ಇತ್ತು. ಇದೇ ಅರಣ್ಯ ಪ್ರದೇಶದಲ್ಲಿ ಅಂದಿನ ಶಾಸಕ ಶ್ರೀರಂಗದೇವರಾಯಲು ತನ್ನ ಓಟ್‌ಬ್ಯಾಂಕ್ ಭದ್ರ ಮಾಡಿಕೊಳ್ಳಲು, ಸಾಧ್ಯವಾದರೆ ಅಲ್ಲೇ ಒಂದಿಷ್ಟು ಭೂಮಿ ಲಪಟಾಯಿಸಲೆಂದು ಕೆಲವರಿಗೆ ಜಾಗ ನೀಡಿಬಿಟ್ಟಿದ್ದಾನೆ. ಇಲ್ಲಿ ರಂಗದೇವರಾಯಲು ಹೆಸರಿನಲ್ಲೂ ಬೇನಾಮಿ ಭೂಮಿ ಇದೆ ಎನ್ನುತ್ತಾರೆ 'ಹಸ್ತ'ದವರು, ಅದು ತನಿಖೆಯಿಂದ ಹೊರಬರಲಿದೆ.



ಇನ್ನು ಸರ್ವೆ ನಂ. 53 ರ ದಾಖಲೆಯಂತೆ 226 ಎಕರೆಯಲ್ಲಿ 11 ಎಕರೆಯನ್ನು ಕರ್ನಾಟಕ ನೀರು ಸರಬರಾಜು ಯೋಜನೆಗೆ ಬಿಟ್ಟು ಕೊಟ್ಟಿದ್ದರೆ ಕೇವಲ 106 ಎಕರೆ ಜಮೀನು ಮಾತ್ರ ಅರಣ್ಯ ಇಲಾಖೆಗೆ ವರ್ಗಾ ಮಾಡಿದ್ದು 2000 ರಲ್ಲಿ ಗೊತ್ತಾಗಿದೆ. ಅದೂ ಸಾರ್ವಜನಿಕರೊಬ್ಬರು ಇದೇ ಭೂಮಿಯಲ್ಲಿ ಕಟ್ಟಡ ಕಟ್ಟಲು ಪರ್ಮಿಷನ್ ಕೇಳಿದಾಗಲೇ. ಆಗ ಮತ್ತೊಮ್ಮೆ 226 ಎಕರೆಯನ್ನು ಮ್ಯುಟೇಷನ್ ಮಾಡಲು ಅರಣ್ಯಾಧಿಕಾರಿ ಕೇಳಿಕೊಂಡರೂ ತಹಶೀಲ್ದಾರರು ಆ ಕೆಲಸ ಮಾಡದಂತೆ ಆವತ್ತಿನ ರಾಜಕೀಯ ಶಕ್ತಿಗಳು ತಡೆದಿದ್ದವು.

ಇವತ್ತು ಎಚ್.ಆರ್. ಶ್ರೀನಾಥಗೆ ಈ ಪರಿ ಬ್ಯಾನಿ ಆಗಲು ಕಾರಣ ತಮ್ಮ ಶಿಕ್ಷಣ ಸಂಸ್ಥೆಗೆ ಇದೇ ಸರ್ವೆ ನಂ. 53 ರಲ್ಲಿ 35 ಎಕರೆ ಜಮೀನು ಪಡಕೊಂಡದ್ದು ಮತ್ತು ಈವರೆಗೆ ಬರೀ 5 ಎಕರೆ ಬಳಸಿಕೊಂಡದ್ದು. ಇದರಲ್ಲಿ ಉಳಿದಿರುವ 30 ಎಕರೆಯನ್ನು ಅರಣ್ಯ ಇಲಾಖೆ ವಾಪಸ್ಸು ಪಡೆಯಬೇಕು. ಏಕೆಂದರೆ ವಾಣಿಜ್ಯೋದ್ಯಮಿಯಾದ ಕಾರಣಕ್ಕೇನೆ ಶ್ರೀನಾಥ ಕುಟುಂಬ ಅದನ್ನು ದುರುಪಯೋಗ ಪಡಿಸಿಕೊಳ್ಳಬಹುದು ಎಂಬುದು ಕೆಲವರ ವಾದ. ಆದರೆ ಇದೇ ಜಾಗದಲ್ಲಿ ರೆಸಾರ್ಟ್ ಆರಂಭಿಸಲು ತಯಾರಿ ನಡೆದಿತ್ತು.

ಅರಣ್ಯ ಇಲಾಖೆಯ ಈ ಜಮೀನಿನಲ್ಲಿ ಲಕ್ಷ್ಮವ್ವ ಕನಕಪ್ಪ ಎಂಬಾಕೆಯ ಕಬ್ಜಾದಲ್ಲಿದ್ದ ಭೂಮಿಯನ್ನು ಅಯ್ಯಪ್ಪಸ್ವಾಮಿ ದೇವಸ್ಥಾನ ಟ್ರಸ್ಟ್ ಕಮಿಟಿಗೆ 2006 ಮಾರ್ಚ್ ತಿಂಗಳಲ್ಲಿ ಅಕ್ರಮವಾಗಿ ಮಾರಾಟ ಮಾಡಲಾಗಿದೆ. ಇದೇ ಭೂಮಿ ಅರಣ್ಯ ಇಲಾಖೆಯದು ಎಂದು 9 ವರ್ಷಗಳ ಹಿಂದೆ 1998 ರಲ್ಲಿ ಅಂದಿನ ತಹಶೀಲ್ದಾರ್ ನಾಗಪ್ಪ ಜಿಲ್ಲಾಧಿಕಾರಿಗಳಿಗೆ ನೀಡಿದ್ದ ವರದಿಯಲ್ಲಿ ತಿಳಿಸಿದ್ದಾನೆ. ಅಂದ ಮೇಲೆ ಅಯ್ಯಪ್ಪಸ್ವಾಮಿ ದೇಗುಲದ ಬೇಸ್‌ಮೆಂಟ್ ಅಕ್ರಮವಲ್ಲದೆ ಇನ್ನೇನು? ಇದಕ್ಕಿಂತ ಸ್ಪಷ್ಟ ದಾಖಲೆ ಬೇರೆ ಬೇಕಾ? ಶ್ರೀನಾಥಗಿದು ಯಾಕೆ ಅರ್ಥ ಆಗುತ್ತಿಲ್ಲ?

ಬರೀ ತಾರಾತಿಗಡಿ ಮಾಡಿಯೇ ಬೆಲೆ ಬಾಳುವ ಭೂಮಿಯನ್ನು ಕಬಳಿಸಿ ರಕ್ಷಣೆಗಾಗಿ ಧಾರ್ಮಿಕ ಸ್ಥಳಗಳನ್ನು ಹುಟ್ಟುಹಾಕಿ ಭೂಮಿ ಉಳಿಸಿಕೊಳ್ಳುವುದರ ಜೊತೆಗೆ ರಾಜಕೀಯ ಲಾಭವನ್ನು ಪಡೆಯುವುದು ಇವರ ಸಂಚು. ಅದಕ್ಕೆ ಅಯ್ಯಪ್ಪ ದೇವಸ್ಥಾನ ಅಕ್ರಮ ಎಂದು ತೆರವುಗೊಳಿಸಿಬಿಟ್ಟರೆ, ಒತ್ತುವರಿ ಭೂಮಿಗೂ ಕುತ್ತು ಬರುವುದು ಗ್ಯಾರಂಟಿ ಎಂದು ಹೆದರಿಯೇ ಅದಕ್ಕೆ ಧಾರ್ಮಿಕ ವಿವಾದದ ಬಣ್ಣ ಕೊಟ್ಟಿದ್ದಾರೆ ಕಾಂಗ್ರೆಸ್ಸಿಗರು.

ಕಾಂಗ್ರೆಸ್ಸಿನವರ ಕೋಮುವಾದ ಮತ್ತು ಲ್ಯಾಂಡ್ ಮಾಫಿಯಾಗಳ ಹಿಡಿತದಲ್ಲಿರುವ ಭೂಮಿ ಸರ್ಕಾರ ವಶಪಡಿಸಿಕೊಳ್ಳಲು ಆಗ್ರಹಿಸಿ ಕರ್ನಾಟಕ ರೈತ ಸಂಘ (KRS) TUCI, ಕರ್ನಾಟಕ ರೈತ ಕೂಲಿ ಸಂಘರ್ಷ ಸಮಿತಿ, AITUC, ಬಂಡಾಯ ಸಾಹಿತ್ಯ ಸಂಘಟನೆ, AICCTU, ತಿರುಳ್ಗನ್ನಡ ಕ್ರಿಯಾಸಮಿತಿ ಸೇರಿ 'ಭೂಹೀನರಿಗಾಗಿ ಭೂ ರಕ್ಷಣಾ ಹೋರಾಟ ರಂಗ' ಅಸ್ತಿತ್ವಕ್ಕೆ ತಂದಿವೆ.

ಶೀಘ್ರದಲ್ಲಿ ಹೋರಾಟ ಆರಂಭವಾಗಲಿದೆ.

-ವಿನಯ್

ಪ್ರತಿಭಟನೆಗಿಳಿದ ...ರ್ವಜನಿಕರು ಮತ್ತು ಸುಮಿತ್ರಮ್ಮ

...ಶಾಂತಕುಮಾರ ಮತ್ತು ಇವನ ... ಸಿಬ್ಬಂದಿಯ ನಿರ್ಲಕ್ಷ್ಯತನದ ...ದ್ಧ ಆಕ್ರೋಶಗೊಂಡ ...ತ್ರಮ್ಮನೊಂದಿಗೆ ...ಜನಿಕರೂ ಸೇರಿ ಆಸ್ಪತ್ರೆಯ ...ದೆಯೇ ಧರಣಿ ಕುಳಿತು ...ಕುಮಾರನ ವಿರುದ್ಧ ...ಷಣೆಗಳನ್ನು ...ಾರಂಭಿಸಿದಾಗ ಇಂಗು ತಿಂದ ...ಸಂತಾದ ಶಾಂತಕುಮಾರ ...ಗಿ ನರ್ಸಿಂಗ್ ಹೋಂ ...ದ ಅಧ್ಯಕ್ಷ ಬಿ.ಎಸ್. ...ಕಾಶರನ್ನು ಅಡ್ಡತಂದು ... ನಾಗಪ್ರಕಾಶ್ ಮಧ್ಯಸ್ಥಿಕೆ ... 50 ಸಾವಿರ ರೂಪಾಯಿ ...ರ ಕೊಡಿಸುವುದಾಗಿ ಭರವಸೆ ನೀಡಿದ ಮೇಲೆ ಧರಣಿ ಅಂತ್ಯಗೊಂಡಿದೆ. ಆದರೆ 50 ಸಾವಿರ ಪರಿಹಾರ ಕೊಡುತ್ತೇನೆಂದು ಒಪ್ಪಿಕೊಂಡ ಶಾಂತಕುಮಾರ ಪ್ರತಿಭಟನೆ ನಿಂತ ಸ್ವಲ್ಪ ಹೊತ್ತಿನಲ್ಲಿಯೇ ಹಣ ಕೊಡುವುದಿಲ್ಲವೆಂದು ಪ್ಲೇಟು ಬದಲಾಯಿಸಿದ್ದಾನೆ. ಶಾಂತಕುಮಾರನ ನಯವಂಚನೆಯ ಬೆನ್ನಹಿಂದೆಯೇ ಸುಮಿತ್ರಮ್ಮನೊಂದಿಗೆ ರೈತಸಂಘಟನೆ ಹಾಗೂ ಪ್ರಗತಿಪರರು ಸೇರಿ ಶಾಂತಕುಮಾರನ ವಿರುದ್ಧ ಪ್ರತಿಭಟನೆಗೆ ಮತ್ತೆ ಸಜ್ಜಾಗಿದ್ದಾರೆ.



ಪೂರ್ಣಚಂದ್ರ ತೇಜಸ್ವಿಯ ಹೆಂಡತಿ

ಪೂರ್ಣಚಂದ್ರ ತೇಜಸ್ವಿಯ ಶವದೊಂದಿಗೆ ಪ್ರತಿಭಟನೆ

ರೈತಸಂಘ, ಸಾರ್ವಜನಿಕರು ಹಾಗೂ ಉಪ್ಪಾರ ಸಮಾಜದವರು ತೇಜಸ್ವಿಯ ಶವವನ್ನು ಟ್ರ್ಯಾಕ್ಟರಿನ ಮೇಲಿಟ್ಟು ದಾವಣಗೆರೆಯ ಮುಖ್ಯ ಬೀದಿಗಳಲ್ಲಿ ಶಾಂತಕುಮಾರ ಹಾಗೂ ಸಿಟಿ ಸೆಂಟ್ರಲ್ ಆಸ್ಪತ್ರೆಯ ದ್ರೋಹವನ್ನು ನಿರ್ದಾಕ್ಷಿಣ್ಯವಾಗಿ ಬಯಲಿಗೆಳೆದಿದ್ದಾರೆ. ಗಂಡನನ್ನು ಕಳೆದುಕೊಂಡ ಸುಮಿತ್ರಮ್ಮ ಸಿಟಿ ಸೆಂಟ್ರಲ್ ಆಸ್ಪತ್ರೆಯ ಮಾನ್ಯತೆಯನ್ನು ರದ್ದುಗೊಳಿಸುವಂತೆ ಜಿಲ್ಲಾಧಿಕಾರಿಗೆ ಮನವಿಪತ್ರ ನೀಡಿದ್ದಾರೆ.



ವೈದ್ಯನ ವಿರುದ್ಧ ಪ್ರತಿಭಟನಾ ಮೆರವಣಿಗೆ

ಮಹಾನಗರ ಪಾಲಿಕೆ ಆಯುಕ್ತ ಪಾಣಲಿಂಗ ಶಿವಸಾಲಿ ಹಾಗೂ ಜಿಲ್ಲಾಧಿಕಾರಿ ... ದ್ರಾಟೇರಿಗೆ ಮಾನ ಮರ್ಯಾದೆಗಳಿದ್ದರೆ ಕೂಡಲೇ ಸಿಟಿ ಸೆಂಟ್ರಲ್ ಆಸ್ಪತ್ರೆಯ ಮಾನ್ಯತೆಯನ್ನು ರದ್ದುಗೊಳಿಸಬೇಕು.


-ಚಂದ್ರಶೇಖರ ...

ನನ್ನ ಮುಂದಿರುವ ಗೋಡೆಯ ಮೇಲೆ ಪೂರ್ವ ಕುಮ್ಮಾನ್ ಪ್ರಾಂತ್ಯದ ಭೂಪಟವೊಂದು ಇಳಿಬಿದ್ದಿದೆ. ಅದರ ಮೇಲೆ ಅನೇಕ ಶಿಲುಬೆಯ ಗುರುತುಗಳು ಹರಡಿದಂತೆ ಮೂಡಿವೆ. ಇಲ್ಲಿನ ಎಲ್ಲಾ ಶಿಲುಬೆಗಳ ಕೆಳಗೆ ಕೆಲವು ಅಂಕಗಳನ್ನು ನಮೂದಿಸಲಾಗಿದೆ. ಈ ಶಿಲುಬೆ ಗುರುತುಗಳು ಚಾವಫರ್‌ನ ನರಭಕ್ಷಕಿ ಮನುಷ್ಯರನ್ನು ಹಿಡಿದು ತಿಂದ ಸ್ಥಳಗಳನ್ನು ಸೂಚಿಸಿದರೆ, ಕೆಳಗಿರುವ ಅಂಕಗಳು ಅದು ಬಲಿ ತೆಗೆದುಕೊಂಡ ತಾರೀಖುಗಳನ್ನು ಸೂಚಿಸುತ್ತವೆ. ಇಲ್ಲಿ ಇಂಥ ಅರವತ್ತ ನಾಲ್ಕು ಶಿಲುಬೆಗಳಿವೆ. ಈ ಅಂಕಸಂಖ್ಯೆಗಳು ನಿಜವಾದ ನರಹತ್ಯೆಗಳೊಂದಿಗೆ ತಾಳೆಯಾಗುವ ಬಗ್ಗೆ ನನಗೇ ಸಂದೇಹಗಳಿವೆ. ಏಕೆಂದರೆ ಈ ಭೂಪಟವನ್ನು ನನಗೆ ಕಳುಹಿಸಿ ಈಗಾಗಲೇ ಎರಡು ವರ್ಷಗಳು ಗತಿಸಿವೆ. ಈ ನಡುವೆ ಸಂಭವಿಸಿದ ಎಲ್ಲಾ ನರಹತ್ಯೆಗಳೂ ನನಗೆ ವರದಿಯಾಗಿಲ್ಲ. ಹಾಗೇ ನರಭಕ್ಷಕನ ದಾಳಿಗೀಡಾಗಿ ತಕ್ಷಣಕ್ಕೆ ಗಾಯಗೊಂಡು, ಅನಂತರದಲ್ಲಿ ಮರಣ ಹೊಂದಿದವರ ಹೆಸರಿಗೆ ಇಲ್ಲಿ ಶಿಲುಬೆಗಳನ್ನಾಗಲಿ, ದಿನಾಂಕಗಳನ್ನಾಗಲೀ ದಯಪಾಲಿಸಲಾಗಿಲ್ಲ.

ಇಲ್ಲಿನ ತೀರಾ ಹಳೆಯ ಶಿಲುಬೆಯ ಕೆಳಗಿರುವ ದಿನಾಂಕ 15ನೇ ಡಿಸೆಂಬರ್ 1925ರಷ್ಟು ಹಿಂದಿನದಾದರೆ, ಇತ್ತೀಚಿನ ಶಿಲುಬೆಯ ಕೆಳಗಿರುವ ದಿನಾಂಕ 21ನೇ ಮಾರ್ಚ್ 1930. ಇಲ್ಲಿನ ಒಂದು ತುದಿಯ ಶಿಲುಬೆಯಿಂದ ಇನ್ನೊಂದು ತುದಿಯಲ್ಲಿರುವ ಶಿಲುಬೆಯ ನಡುವಿನ ದೂರ: ಉತ್ತರ-ದಕ್ಷಿಣವಾಗಿ ಐವತ್ತು ಮೈಲಿಗಳು, ಪೂರ್ವ-ಪಶ್ಚಿಮವಾಗಿ: ಮುವತ್ತು ಮೈಲಿಗಳು. ಒಟ್ಟು ಪ್ರದೇಶದ ವಿಸ್ತೀರ್ಣ: 1500 ಚದರ ಮೈಲಿಗಳು. ಈ ಒಟ್ಟೂ ಭೂಭಾಗ ಅಂಗೈ ಅಗಲ ಸಮತಟ್ಟಾದ ನೆಲವಿಲ್ಲದ ಗಿರಿ ಗಹ್ವರಗಳೂ; ಕಣಿವೆ ಕಂದರಗಳಿಂದಾವೃತವಾದ; ಬೇಸಿಗೆಯ ಬಿಸಿಲಿನ ಝಳಕ್ಕೆ ಬಸವಳಿದು ಹೋಗುವ, ಚಳಿಗಾಲದ ಹಿಮಪಾತಕ್ಕೆ ಗಡಗಡ ತತ್ತರಿಸುವ, ಸಮುದ್ರ ಮಟ್ಟದಿಂದ ಏಳೆಂಟು ಸಾವಿರ ಅಡಿಗಳಷ್ಟು ಎತ್ತರದಲ್ಲಿರುವ ಪ್ರದೇಶ. ಇದೇ ಚಾವಫರ್‌ನ ನರಭಕ್ಷಕಿಯ ಸಾಮ್ರಾಜ್ಯ. ಈ ಸಾಮ್ರಾಜ್ಯದ ಸರಹದ್ದಿನಲ್ಲಿ ವಿವಿಧ ಗಾತ್ರದ ಹಳ್ಳಿಗಳು, ಗುಮ್ಮಿಗಳು, ನದಿ ಝರಿಗಳು, ಗೋಮಾಳಗಳು, ದನದ ದೊಡ್ಡಿಗಳು, ಹೊಲ ಗದ್ದೆಗಳೂ ಹರಡಿಕೊಂಡಿವೆ. ಕೆಲವು ಹಳ್ಳಿಗಳು ನೂರು ಮತ್ತು ಅದಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದರೆ, ಕೆಲವು ಒಂದೆರಡು ಸಣ್ಣ ಸಣ್ಣ ಹಿಡುವಳಿಗಳೊಂದಿಗೆ ಅಷ್ಟೇ ಪುಟ್ಟ ಪುಟ್ಟ ಕುಟುಂಬಗಳನ್ನು ಹೊಂದಿವೆ. ಈ ಹಳ್ಳಿಗಳನ್ನೆಲ್ಲಾ ಸಂಪರ್ಕಿಸುವ ಏಕೈಕ ಮಾರ್ಗವೆಂದರೆ ಹಾವಿನಂತೆ ಹರಿಯುವ ಕಾಲುದಾರಿಗಳು, ಇವು ಸಾಗುವುದು ಇಕ್ಕೆಲಗಳಲ್ಲೂ ಗವ್ವೆನ್ನುವ ದಟ್ಟಾರಣ್ಯಗಳ ನಡುವೆ. ಈ ನರಭಕ್ಷಕಿಯ ಕಾರಣದಿಂದಾಗಿ ಈಗ ಇವು ಸಾವಿನ ದಾರಿಗಳಾಗಿವೆ. ಹಾಗಾಗಿ ಹಳ್ಳಿಗರು ಈ ದಾರಿಗಳ ಸಹವಾಸದಿಂದ ತುಂಬಾ ದೂರವಿದ್ದಾರೆ. ಆದ್ದರಿಂದ ಹಳ್ಳಿಹಳ್ಳಿಗಳ ನಡುವಿನ ಸಂಪರ್ಕವೇ ಭಾಗಶಃ ಬಂದಾಗಿಬಿಟ್ಟಿದೆ. ಹೀಗಾಗಿ ಇವರು ಮನುಷ್ಯ ಸಂಪರ್ಕಕ್ಕಾಗಿ ಹೊಸ ಮಾರ್ಗವೊಂದನ್ನು ಕಂಡುಕೊಂಡಿದ್ದಾರೆ. ಇದನ್ನು ನಿಮ್ಮ ನಿಮ್ಮ ಕಲ್ಪನೆಗೆ ತಕ್ಕಂತೆ ಊಳಿಕ್ಕುವುದು, ಕೂಗಿ ಹೇಳುವುದು, ಕಿರುಚಿಕೊಳ್ಳುವುದು ಅಥವಾ ಬೇರೊಂದು ಹೆಸರಿನಿಂದ ಗುರುತಿಸಿಕೊಳ್ಳಬಹುದು. ಇದು ಹೇಗೆ ಸಂಭವಿಸುತ್ತದೆಂದರೆ.... ಹಳ್ಳಿಯಲ್ಲಿ ಗಟ್ಟಿಯಾಗಿ ಕೂಗಬಲ್ಲ ಒಬ್ಬ ಎತ್ತರದ ಕೋಡುಗಲ್ಲಿನ ಮೇಲೋ, ಅದಿಲ್ಲದಿದ್ದರೆ ಎತ್ತರದ ಮನೆಯ ಮಾಳಿಗೆಯ ಮೇಲೋ ನಿಂತು ಕೂ....ಹೋ.... ಎಂದು ಕೂಗುತ್ತಾನೆ. ಸುತ್ತಮುತ್ತಲ ಸಮೀಪದ ಹಳ್ಳಿಗಳಿಂದ ಇದಕ್ಕೆ ಪ್ರತಿಕ್ರಿಯೆ ನಿರೀಕ್ಷಿಸುತ್ತಾನೆ. ಅತ್ತಲಿಂದ ಮಾರುತ್ತರ ಬರುತ್ತಿದ್ದಂತೆ, ವಿಷಯವನ್ನು ಜೋರಾಗಿ ಕೂಗಿ ಹೇಳುತ್ತಾನೆ. ಹೀಗೆ ಆ ಹಳ್ಳಿಗಳಿಂದ ಅವುಗಳ ಸುತ್ತಮುತ್ತಲ ಹಳ್ಳಿಗಳಿಗೆ ಅಲ್ಲಿಂದ ಮುಂದಿನ ಹಳ್ಳಿಗಳಿಗೆ.... ಹೀಗೆ ಸುದ್ದಿ ಗಾಳಿಯ ಮೂಲಕ ಹರಡುತ್ತಾ ಹೋಗುತ್ತದೆ. ಸದ್ಯಕ್ಕೆ ಇದೊಂದೇ ಈ ಪ್ರಾಂತ್ಯದಲ್ಲಿರುವ ಸಂಪರ್ಕ ಮಾಧ್ಯಮ.

ಈ ನರಭಕ್ಷಕಿಯ ಹಾವಳಿಯನ್ನು ಕುರಿತು 1929ರ ಫೆಬ್ರವರಿಯಲ್ಲಿ ಜಿಲ್ಲಾ ಸಮಾವೇಶವೊಂದನ್ನು ಕರೆಯಲಾಗಿತ್ತು, ಅಲ್ಲಿ ನಾನೂ ಹಾಜರಿದ್ದೆ. ಅಲ್ಲಿ ಜಿಲ್ಲಾಡಳಿತವು ಈ ನರಭಕ್ಷಕಿಯನ್ನು ಹೊಡೆಯುವಂತೆ ನನ್ನಲ್ಲಿ ಮನವಿ ಮಾಡಿತು. ನಾನು ಅದನ್ನು ಒಪ್ಪಿಕೊಳ್ಳಲೇಬೇಕಾಗಿತ್ತು, ಆದರೆ ಇದೇ ಅವಧಿಯಲ್ಲಿ ಕುಮ್ಮಾನ್ ವಿಭಾಗ ಮತ್ತೆರಡು ನರಭಕ್ಷಕಗಳ ಹಾವಳಿಯಿಂದ ಬಳಲುತ್ತಿತ್ತು, ಆದರೂ ನಾನು ಮೊದಲು ಚಾವಫರ್‌ನ ನರಭಕ್ಷಕಿಯ ರಾಶಿಗೆ ಹೋಗುವುದೆಂದು ತೀರ್ಮಾನಿಸಿದೆ.

ಈ ಶಿಲುಬೆ, ತಾರೀಖುಗಳಿದ್ದ ಭೂಪಟವನ್ನು ನನಗೆ ಸರ್ಕಾರವೇ ಒದಗಿಸಿತ್ತು, ಇದರ ಪ್ರಕಾರ ಇತ್ತೀಚೆಗೆ ನರಭಕ್ಷಕಿಯು ಕಾಲಾಅಗರ್ ಎನ್ನುವ ಹಳ್ಳಿಯ ಈಶಾನ್ಯ ಭಾಗದಲ್ಲಿದ್ದ ಕಣಿವೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಿತ್ತು, ಮೈ ತುಂಬಾ ದಟ್ಟಾರಣ್ಯವನ್ನು ಹೊದ್ದಿದ್ದ ಈ ಕಣಿವೆಯು ಸಮುದ್ರ ಮಟ್ಟದಿಂದ 8500 ಅಡಿಗಳ ಎತ್ತರದಲ್ಲಿದ್ದು, ನಲವತ್ತು ಮೈಲಿಗಳಷ್ಟು ಉದ್ದವಿತ್ತು, ಕಾಡುನಾರಿಯೊಂದು ಕಣಿವೆಯ ಉತ್ತರದಂಚಿನುದ್ದಕ್ಕೂ ಸಾಗಿ ಹೋಗಿತ್ತು, ಈ ದಾರಿಯ ಒಂದು ಮಗ್ಗುಲಿನ ಬಹುಪಾಲು ಪ್ರದೇಶ ಗಗನಚುಂಬಿಸುವ ಓಕ್ ಮರಗಳು ಹಾಗೂ ಆಳೆತ್ತರದ ಬಾಡುಬಕ್ಕನ ಪೊದೆಗಳಿಂದ ಗಿಡಿದುಕೊಂಡು ಅಬೇಧ್ಯವಾಗಿತ್ತು, ಮತ್ತೊಂದು ಬದಿ: ಕೃಷಿ ಭೂಮಿಗಳಿಗೆ ಹಾಕಿದ್ದ ಅಷ್ಟೇ ದಟ್ಟವಾದ ಬೇಲಿಗಳಿಂದ ಕೂಡಿ, ಕಾಡಿಗೂ ಬೇಲಿಗೂ ವ್ಯತ್ಯಾಸವೇ ಕಾಣದಷ್ಟು ದಟ್ಟವಾಗಿ ಹರಿದಿತ್ತು, ಹೀಗೆ ಸಾಗುವ ದಾರಿ ಒಂದು ಕಡೆ ವಂಕಿಯಂತೆ ತಿರುವಿಕೊಂಡು ಕಡಿದಾದ ತಿರುವನ್ನು ನಿರ್ಮಿಸಿ ಮುಂದೆ ಸಾಗಿತ್ತು, ಈ ವಂಕಿಯ ಕಾಡಿನ ಭಾಗದಲ್ಲಿ ಅರಣ್ಯ ಇಲಾಖೆಗೆ ಸೇರಿದ ಒಂದು ವಿಶ್ರಾಂತಿಧಾಮವಿತ್ತು, ನಾನು ಇದನ್ನೇ ಗುರಿಯಾಗಿಟ್ಟುಕೊಂಡು ನಾಲ್ಕು ದಿನಗಳ ಸುದೀರ್ಘ ನಡಿಗೆಯನ್ನು ಸವೆಸಿದ್ದೆ. ಇಲ್ಲಿಂದ ಮುಂದಕ್ಕೆ ನಾನು ನಾಲ್ಕು ಸಾವಿರ ಅಡಿ ಎತ್ತರದ ಏರುದಾರಿಯಲ್ಲಿ ನಡೆದು ಆ ಕಾಡು ಬಂಗಲೆಯನ್ನು ತಲುಪಬೇಕಿತ್ತು,



ಅಂತೂ ಇಂತೂ 1929ರ ಏಪ್ರಿಲ್ ತಿಂಗಳ ಒಂದು ದಿನ ನಾನು ಇಲ್ಲಿಗೆ ತಲುಪಿದೆ. ಈ ಪ್ರದೇಶದಲ್ಲೇ ಇತ್ತೀಚಿನ ಕೊನೆಯ ನರಹತ್ಯೆ ಸಂಭವಿಸಿದ್ದು, ಈತ ಒಬ್ಬ 22 ವರ್ಷ ವಯಸ್ಸಿನ ದನಗಾಹಿ. ನಾನು ಇಲ್ಲಿಗೆ ತಲುಪಿದಾಗ ತೀರಾ ವಯಸ್ಸಾದ ಮುದುಕಿಯೊಬ್ಬಳು ನನ್ನನ್ನು ನೋಡಲು ಬಂದಳು. ತನ್ನನ್ನು 'ಆ ಮೃತ ಯುವಕನ ಅಜ್ಜಿ' ಎಂದು ಪರಿಚಯಿಸಿಕೊಂಡಳು.

'ಯಾವುದೇ ಪ್ರಚೋದನ ಇಲ್ಲದೆ ಆ ಹುಲಿ ಈ ಜಗತ್ತಿನಲ್ಲಿ ನನಗಿದ್ದ ಒಬ್ಬನೇ ಒಬ್ಬ ರಕ್ತ ಸಂಬಂಧಿಯನ್ನು ಕೊಂದುಹಾಕಿತು' ಎಂದು ಆರಂಭಿಸಿ ಅವಳ ಇಡೀ ವೃತ್ತಾಂತವನ್ನು ಹೇಳಿದಳು. ಆ ಹುಲಿಯನ್ನು ಬಲಿ ಹಾಕಲು ತನ್ನ ನಾಲ್ಕು ಕೋಣಗಳನ್ನು ಬಳಸಿಕೊಳ್ಳುವಂತೆ ಕೋರಿದಳು. ಎರೆಕಟ್ಟಲು ಅವಳ ಕೋಣಗಳನ್ನು ಬಳಸಿ ನರಭಕ್ಷಕಿಯನ್ನು ಕೊಲ್ಲುವುದಾದರೆ ಆ ಹುಲಿಯ ವಿರುದ್ಧ ಸೇಡುತೀರಿಸಿಕೊಳ್ಳುವಲ್ಲಿ ಅವಳ ಸಹಾಯವೂ ದೊರೆತಂತಾಗಿ ಇದರಿಂದ ಅವಳ ಮೊಮ್ಮಗನ ಆತ್ಮಕ್ಕೂ ಶಾಂತಿ ಸಿಗುತ್ತದೆಂಬುದು ಅವಳ ಭಾವನೆ. ನನಗೆ ಅವಳ ಭಾವನೆಗಳನ್ನು ಘಾಸಿಗೊಳಿಸಲು ಮನಸ್ಸಾಗಲಿಲ್ಲ, ಆದರೆ ಅವು ಬಲಿತುಕೊಬ್ಬಿದ್ದ ಕೋಣಗಳಾದ್ದರಿಂದ ಎರೆ ಕಟ್ಟಲು ಅವು ಯೋಗ್ಯವಾಗಿರಲಿಲ್ಲ, ಆದ್ದರಿಂದ 'ನಾನು ಈಗಾಗಲೇ ನೈನಿತಾಲಿನಿಂದ ನಾಲ್ಕು ಕೋಣಗಳನ್ನು ತಂದಿದ್ದೇನೆ, ಅವು ಮುಗಿದ ಮೇಲೆ ಖಂಡಿತವಾಗಿಯೂ ನಿನ್ನ ಕೋಣಗಳನ್ನು ಬಳಸಿಕೊಳ್ಳುತ್ತೇನೆ' ಎಂದು ಹೇಳಿದೆ. ಅಷ್ಟು ಹೊತ್ತಿಗೆ ಸಮೀಪದ ಹಳ್ಳಿಯ ಮುಖ್ಯಸ್ಥನು ತನ್ನ ಹಳ್ಳಿಗರೊಂದಿಗೆ ನನ್ನನ್ನು ನೋಡಲು ಬಂದರು. ಅವರ ಹೇಳಿಕೆ ಪ್ರಕಾರ ಹುಲಿ ಈ ಪ್ರದೇಶದಲ್ಲಿ ಹತ್ತು ದಿನಗಳ ಹಿಂದೆ ಕಾಣಿಸಿಕೊಂಡಿತ್ತು, ಇತ್ತೀಚೆಗೆ ಅದು ಕಣಿವೆಯ ಪೂರ್ವ ಇಳಿಜಾರಿನಲ್ಲಿ, ಇಲ್ಲಿಂದ ಇಪ್ಪತ್ತೈದು ಮೈಲಿ ದೂರದಲ್ಲಿರುವ ಹಳ್ಳಿಯ ಸುತ್ತಮುತ್ತ ಇರಬೇಕು. 'ಮೊನ್ನೆತಾನೆ ಆ ಹಳ್ಳಿಯ ಒಬ್ಬ ಮನುಷ್ಯನನ್ನು ಅವನ ಹೆಂಡತಿಯೊಂದಿಗೆ ಕೊಂದು ತಿಂದಿದೆ' ಎಂದು ಹೇಳಿದರು.

ಹತ್ತು ದಿನಗಳ ಹಿಂದಿನ ಜಾಡನ್ನು ಹಿಡಿದು ಹುಲಿಯನ್ನು ಹಿಂಬಾಲಿಸುವುದರಲ್ಲಿ ಯಾವುದೇ ಉಪಯೋಗವಿರಲಿಲ್ಲ, ಈ ಬಗ್ಗೆ ಹಳ್ಳಿಯ ಮುಖ್ಯಸ್ಥನ ಜೊತೆ ದೀರ್ಘವಾಗಿ ಚರ್ಚಿಸಿ, ನಾನು ದಲ್ಕಾನಿಯಾ ಎಂಬ ಹಳ್ಳಿಗೆ ಹೋಗುವುದೇ ಸರಿ ಎಂದು ತೀರ್ಮಾನಿಸಿದೆವು.

> ಅನೇಕ ಕಾರಣಗಳಿಂದ 'ಚಾವಫರ್‌ನ ನರಭಕ್ಷಕಗಳು' ಕಾರ್ಬೆಟ್‌ನ ಅತ್ಯುತ್ತಮ ಹಾಗೂ ರೋಮಾಂಚಕ ಕತೆಗಳಲ್ಲಿ ಒಂದು. ಒಂದೆಂದು ಹೋದರೆ ಎರಡು ನರಭಕ್ಷಕಗಳು, ಈ ಎರಡರ ಬೆನ್ನು ಹತ್ತಿದರೆ ಮತ್ತೆರಡು ಹುಲಿಗಳು, ಇವುಗಳ ನಡುವೆ ಜೋಡಿ ಚಿರತೆಗಳ ಸೇರ್ಪಡೆ. ಈ ಹುಲಿಗಳ ದಾಳಿಗೀಡಾಗಿ ಸತ್ತವರು ನೂರಾರು ಮಂದಿಯಾದರೆ ಆಶ್ಚರ್ಯಕರವಾಗಿ ಬದುಕುಳಿದವರ ರಕ್ತ ಹೆಪ್ಪುಗಟ್ಟಿಸುವ ಅನುಭವಗಳು. ಒಬ್ಬನಂತೂ ಹುಲಿಯ ಬಾಯಿಂದ ತಲೆ ಕಿತ್ತುಕೊಂಡು ಬದುಕುಳಿಯುವುದು ಇಡೀ ಶಿಕಾರಿ ಕಥನಗಳಲ್ಲೇ ಅಪರೂಪದ ಘಟನೆ. ಈ ಎಲ್ಲದರ ನಡುವೆ ಪಟ್ಟು ಹಿಡಿದ ಪಿಶಾಚಿಯಂತೆ ಐದು ವರ್ಷಗಳ ಕಾಲ ಶಿಕಾರಿದಾರರನ್ನೆಲ್ಲ ಆಟ್ಟಾಡಿಸಿ ಜೀವ ತಿನ್ನುವ ಈ ನರಭಕ್ಷಕ ಅಂತಿಮವಾಗಿ ಕಾರ್ಬೆಟ್‌ನ ಶಿಕಾರಿ ಸಾಮರ್ಥ್ಯಕ್ಕೆ ಸವಾಲಾಗಿ ನಿಂತು ಬಿಡುವುದು.... ಈ ಭೀಕರ ಮುಖಾಮುಖಿಯಲ್ಲಿ ಕತೆಗೆ ಕತೆಯೇ ರೋಮಾಂಚಕತೆಯ ಸರಮಾಲೆಯಾಗಿಬಿಡುತ್ತದೆ. ಒಮ್ಮೆ ಕೈಗೆತ್ತಿಕೊಂಡರೆ, ಕೆಳಗಿಳಿಸಲಾಗದ ಅನಿವಾರ್ಯತೆಯನ್ನು ಸೃಷ್ಟಿಸಿಬಿಡುತ್ತದೆ...

ಸಾವುಗಳ ಸರಮಾಲೆ



ಕಾಲಾಅಗರ್‌ನಿಂದ ದಲ್ಕಾನಿಯಾ ಹತ್ತು ಮೈಲಿಗಳ ದೂರದಿತ್ತು, ಇತ್ತೀಚಿಗೆ ಜೋಡಿಕೊಲೆಗಳಾದ ಜಾಗ ತಲುಪಲು ಅಲ್ಲಿಂದ ಹತ್ತು ಮೈಲಿ ನಡೆದು ಸಾಗಬೇಕಿತ್ತು.

ಭೂಪಟದ ಮೇಲಿದ್ದ ಶಿಲುಬೆ ಗುರುತುಗಳ ವಿತರಣೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ದಲ್ಕಾನಿಯಾ ಮತ್ತು ಅದರ ಸುತ್ತಮುತ್ತಲ ಹಳ್ಳಿಗಳಲ್ಲಿ ಅವುಗಳ ಸಾಂದ್ರತೆ ಹೆಚ್ಚಿತ್ತು, ಈ ಹಿನ್ನೆಲೆಯಲ್ಲಿ ಯೋಚಿಸುವುದಾದರೆ ಆ ಪ್ರದೇಶವೇ ನರಭಕ್ಷಕಿಯ ಕೇಂದ್ರಸ್ಥಾನವಾಗಿತ್ತು,

ಮರುದಿನ ಬೆಳಿಗ್ಗೆ ತಿಂಡಿತಿಂದ ನಂತರ ನಾನು ಕಾಲಾಅಗರ್ ಅನ್ನು ಬಿಟ್ಟು, ಕಾಡಿನ ದಾರಿಗಿಳಿದೆ. ಈ ದಾರಿ ಮುಂದುವರಿದು ಕಣಿವೆಯ ಏಣಿನತ್ತ ಹೋಗುತ್ತದೆ ಎಂದು ಹಳ್ಳಿಗರು ಮೊದಲೇ ತಿಳಿಸಿದ್ದರು. ಈ ಏಣಿನ ತುದಿಯಲ್ಲಿ ಇಳಿಜಾರಿನತ್ತ ಸಾಗುವ ಕಾಲುದಾರಿಯನ್ನು ಹಿಡಿದು ಎರಡು ಮೈಲಿ ನಡೆದರೆ ನಾನು ದಲ್ಕಾನಿಯಾ ತಲುಪುತ್ತಿದ್ದೆ. ಎರಡೂ ಬದಿಗಳಲ್ಲಿ ದಟ್ಟವಾದ ಕಾಡನ್ನು ಹೊಂದಿದ್ದ ಈ ರಸ್ತೆ ಕಣಿವೆಯ ಕಡಿದಾದ ಅಂಚಿನಲ್ಲಿಯೇ ಸಾಗಿತ್ತು. ಇದನ್ನು ಬಹಳ ದಿನಗಳಿಂದ ಯಾರೂ ಬಳಸಿದಂತಿರಲಿಲ್ಲ, ಅಕ್ಕಪಕ್ಕಗಳನ್ನು ಸೂಕ್ಷ್ಮವಾಗಿ ತಡವುತ್ತಾ ಕಣಿವೆಯ ಏಣಿನ ನೆತ್ತಿಗೆ ಬಂದಾಗ ಮಧ್ಯಾಹ್ನ ಎರಡು ಗಂಟೆಯಾಗಿತ್ತು, ನಾನು ಇಲ್ಲಿಗೆ ಬಂದಾಗ ನನಗಾಗಿ ನಿರೀಕ್ಷಿಸಿದ್ದ ಅನೇಕ ಮಂದಿ ಹಳ್ಳಿಗರನ್ನು ಎದುರಾದೆ. ಇವರು ಕೆಳಗಿನ ದಲ್ಕಾನಿಯಾದಿಂದ ಬಂದಿದ್ದರು. ನಾನು ಬರುವ ಸುದ್ದಿ ಹಳ್ಳಿಯಿಂದ ಹಳ್ಳಿಗೆ 'ಗಾಳಿವಾರ್ತೆ'ಯ ಮೂಲಕ ಸಾಗಿ ಇವರನ್ನೂ ತಲುಪಿತ್ತು, ಇವರು ನನ್ನನ್ನು ಸ್ವಾಗತಿಸುವುದರೊಂದಿಗೆ ಮತ್ತೊಂದು ತುರ್ತಿನ ಮಾಹಿತಿಯನ್ನೂ ತಂದಿದ್ದರು. ಇಂದು ಬೆಳಿಗ್ಗೆ ತಾನೆ ದಲ್ಕಾನಿಯಾದಿಂದ ಉತ್ತರಕ್ಕೆ ಹತ್ತು ಮೈಲಿಗಳ ದೂರದಲ್ಲಿದ್ದ ಇನ್ನೊಂದು ಹಳ್ಳಿಯ ಬಳಿ ಹೊಲದಲ್ಲಿ ಕೊಯಿಲು ಮಾಡುತ್ತಿದ್ದ ಹೆಂಗಸರ ಗುಂಪಿನ ಮೇಲೆ ನರಭಕ್ಷಕಿ ದಾಳಿ ಮಾಡಿತ್ತು,

ನನ್ನ ಸಾಮಾನು ಸರಂಜಾಮುಗಳನ್ನು ಹೊತ್ತಿದ್ದ ನನ್ನ ಸಹಾಯಕರು ಈಗಾಗಲೇ ಪ್ರಯಾಸದ ಎಂಟು ಮೈಲಿಗಳನ್ನು ಸಾಗಿ ಬಂದಿದ್ದರೂ ಸಹ ನನ್ನೊಂದಿಗೆ ಮುಂದುವರಿಯಲು ಸಿದ್ಧರಾಗಿದ್ದರು. ಆದರೆ ಹಳ್ಳಿಗರು ನೀಡಿದ ಮುಂದಿನ ದಾರಿಯ ಚಿತ್ರವನ್ನು ಕೇಳಿ ಇವರೆಲ್ಲರನ್ನೂ ಬಿಟ್ಟು ನಾನೊಬ್ಬನೇ ಬೆಳಿಗ್ಗೆ ದಾಳಿಯಾದ ಜಾಗಕ್ಕೆ ಹೋಗುವುದೆಂದು ತೀರ್ಮಾನಿಸಿದೆ. ಇದನ್ನು ಕೇಳಿದ ಕೂಡಲೇ ನಮ್ಮವರು ನನ್ನ ಊಟದ ಸಿದ್ಧತೆ ನಡೆಸಿದರು. ಮೂರು ಗಂಟೆಯ ಹೊತ್ತಿಗೆ ಊಟ ಮುಗಿಸಿ, ನಮ್ಮವರನ್ನು ಹಳ್ಳಿಗರೊಂದಿಗೆ ದಲ್ಕಾನಿಯಾಕ್ಕೆ ಹೋಗಲು ಹೇಳಿ, ನಾನು ನನ್ನ ದಾರಿ ಹಿಡಿದೆ. ಒಳ್ಳೆಯ ದಾರಿಯಾದರೆ ಈ ಹತ್ತು ಮೈಲಿಗಳ ನಡಿಗೆಗೆ ನನಗೆ ಎರಡೂವರೆ ಗಂಟೆಗಳು ಸಾಕು. ಆದರೆ ಕಣಿವೆಯ ನೆತ್ತಿಯಲ್ಲಿ ಹರಿದಿದ್ದ ಈ ದಾರಿಯಂತೂ ಗೋಜಲಿನ ಮುದ್ದೆಯಾಗಿತ್ತು, ಆಕಾಶ ಮುಟ್ಟುವ ಮರಗಳು, ಆಳೆತ್ತರದ ಪೊದೆಗಳು, ಕಡಿದಾದ ಕೋಡುಗಲ್ಲುಗಳು, ಅವುಗಳಾಚೆಯ ಪ್ರಪಾತಗಳು..... ಪ್ರತಿಕ್ಷಣ ಸಾವಾಗಿ ಕಾಲಿಗೆ ತೊಡರುತ್ತಿದ್ದವು. ಇಲ್ಲಿನ ಒಂದೊಂದು ಮರೆಯ ಜಾಗವೂ ಸಾವಿನ ಅಡಗುದಾಣಗಳಂತಿದ್ದವು. ಮೃತ್ಯುವೆಂಬುದು ಯಾವ ಕ್ಷಣದಲ್ಲಿಯಾದರೂ ನರಭಕ್ಷಕ ಅಥವಾ ಇನ್ನಾವುದೋ ರೂಪದಲ್ಲಿ ಎದುರಾಗಿ "ನಿನ್ನ ಸಮಯ ಮುಗಿಯಿತು, ಬಾ...." ಎಂದು ಕರೆಯುವಂತಿದ್ದ ಈ ದಾರಿಯ ನಡಿಗೆ ನಿರೀಕ್ಷೆ ಮೀರಿ ನನ್ನನ್ನು ನಿಧಾನಗೊಳಿಸಿತ್ತು, ನಾನಿನ್ನೂ ಅನೇಕ ಮೈಲಿಗಳನ್ನು ನಡೆಯಬೇಕಿತ್ತು, ಆದರೆ ಪಶ್ಚಿಮದಲ್ಲಿ ತನ್ನ ಪಾಳಿ ಮುಗಿಸಿ ಹೊರಟಿದ್ದ ಸೂರ್ಯ ಅಪಾಯದ ಗಂಟೆ ಬಾರಿಸುತ್ತಿದ್ದ. ಇದರ ಸೂಚನೆಯನ್ನು ಮೀರಿ ನಾನು ಮುಂದುವರಿಯುವುದಾದರೆ ಅದು ಹರಕೆ ಹೊತ್ತು ಸಾವಿನ ಮನೆಯನ್ನು ಹೊಕ್ಕಂತಾಗುತ್ತಿತ್ತಷ್ಟೇ.

ನಾನು ಇಂದು ರಾತ್ರಿಗೆ ಇಲ್ಲೇ ಉಳಿಯಲು ತೀರ್ಮಾನಿಸಿದೆ. ಬೇರೆ ಸಂದರ್ಭದಲ್ಲಾದರೆ ಇದು ಮಹತ್ವದ ಪ್ರಶ್ನೆಯಲ್ಲ, ಒಣಎಲೆಗಳ ಹಾಸಿಗೆಯ ಮೇಲೆ; ಚಂದ್ರಾದಿ ನಕ್ಷತ್ರಗಳನ್ನು ನೋಡುತ್ತಾ.... ನಿದ್ದೆ ಹೋಗುವ ಸುಖವೇ ಬೇರೆ. ಆದರೆ ಇಲ್ಲಿ....! ನರಭಕ್ಷಕಿಯ ನೆಲದಲ್ಲಿ...!!! ಅದು ಹಗ್ಗ ಪರೀಕ್ಷಿಸಲು ಹೋಗಿ ನೇಣುಬಿದ್ದಂತೆಯೇ ಸರಿ. ಆದರೆ ಸಿಕ್ಕಲ್ಲಿ ಯೋಗ್ಯವಾದ ಮರವೊಂದನ್ನು ಹುಡುಕಿ, ಆಯಕಟ್ಟಿನ ಕೊಂಬೆಯ ಮೇಲೆ ಮೈಚೆಲ್ಲಿ ಮಲಗುವ ಅನುಭವವಿದ್ದ ನನಗೆ ಇದೂ ಸಮಸ್ಯೆಯಾಗಿರಲಿಲ್ಲ, ಈ ಬಾರಿ ನಾನು ಒಂದು ದೊಡ್ಡ ಓಕ್ ಮರವನ್ನು ಹುಡುಕಿಕೊಂಡು, ಒಂದು ಕೊಂಬೆಗೆ ನನ್ನ ಬಂದೂಕವನ್ನು ಭದ್ರವಾಗಿ ಕಟ್ಟಿ, ನಿಶ್ಚಿಂತೆಯಿಂದ ನಿದ್ದೆಹೋದೆ. ಎಷ್ಟು ಹೊತ್ತು ನಿದ್ದೆ ಹೋಗಿದ್ದೆನೋ ಗೊತ್ತಿಲ್ಲ, ಎಚ್ಚರವಾದಾಗ ಮರದ ಕೆಳಗೆ ಕೆಲವು ಪ್ರಾಣಿಗಳು ಸರಪರ ಸದ್ದು ಮಾಡುತ್ತಿದ್ದುದು ಕೇಳಿಸಿತು. ಅಲ್ಲಿಂದ

ಮುಂದುವರಿದು ಸ್ವಲ್ಪ ದೂರದಲ್ಲಿದ್ದ ಮರಹತ್ತುವ ...ಷ್ಪತೇಳಿಸಿತು. ಹೀಗೆ ಒರಟೊರಟಾಗಿ ಕಾಂಡದ ತೊಗಟೆ ...ತ್ತುಬಿರುವಂತೆ ಮರ ಹತ್ತುವ ಪ್ರಾಣಿಗಳು ಕರಡಿಗಳಲ್ಲದೆ ...ರೇರೆ ಆಗಿರಲು ಸಾಧ್ಯವಿರಲಿಲ್ಲ. ಇಡೀ ಕರಡಿಯ ...ಹೊಟ್ಟೆತುಂಬವೇ ಕರಫಲದ ಮರವನ್ನೇರುತ್ತಿತ್ತು. ಹಿಮಾಲಯದ ...ಹದಿನಾರುಸಾವಿರ ಅಡಿಗಳ ಎತ್ತರದ ಪ್ರದೇಶಗಳಲ್ಲಿ ನಲವತ್ತು ...ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರಗಳು ಬಿಡುವ ...ಣ್ಣ ಕೆಂಪನೆಯ ಹಣ್ಣುಗಳಿಗೆ ಮನುಷ್ಯರಂತೆಯೇ ಮುಗಿ ...ಬೀಳುವ ಇಲ್ಲಿನ ಕರಡಿಗಳು ಸುಲಭಕ್ಕೆ ಮರ ಇಳಿಯುವ ...ಲ್ಲ. ಈಗಂತೂ ಇವು ಮಾಡುತ್ತಿದ್ದ ಗೌಜುಗದ್ದಲದಿಂದಾಗಿ ...ನ್ನ ನಿದ್ದೆ ಹಾರಿ ಹೋಗಿತ್ತು. ಅವು ಅಲ್ಲಿಂದ ಹೋಗು ...ವವರೆಗೂ ನಾನು ನಿದ್ದೆಯ ಬಗ್ಗೆ ಯೋಚಿಸುವಂತೆಯೂ ...ಇರಲಿಲ್ಲ.

ನಿಧಾನವಾಗಿ ಸೂರ್ಯ ಪೂರ್ವದಿಗಂತದಿಂದ ...ಮೇಲೆದ್ದು ಬಂದ. ಸುತ್ತಮುತ್ತಲ ವಸ್ತುಗಳು ಒಂದೊಂದಾಗಿ ...ಸ್ಪಗ್ಗೋಚವಾಗತೊಡಗಿದವು. ನಾನು ಮರ ಇಳಿದು ...ಹಳ್ಳಿಯತ್ತ ನಡೆದೆ. ಹಳ್ಳಿ ಎಂದು ಹೇಳುವ ಇದು ...ಎರಡು ಗುಡಿಸಲುಗಳು ಹಾಗೂ ಒಂದು ದನದ ದೊಡ್ಡಿ ...ಇದ್ದ ಜನವಸತಿ. ಇದರ ಮುಂದೆ ಸುತ್ತಲೂ ಕಾಡಿದ್ದ ...ಒಂದು ಎಕರೆ ಕೃಷಿ ಭೂಮಿಯಿತ್ತು. ಇಲ್ಲಿದ್ದ ಪುಟ್ಟ ಜನ ...ಸಮುದಾಯ ಭಯಗ್ರಸ್ತ ಸ್ಥಿತಿಯಲ್ಲಿತ್ತು. ಅವರೆಲ್ಲಾ ಎಷ್ಟು ...ಭೀತರಾಗಿದ್ದರೆಂದರೆ.... ನನ್ನನ್ನು ನೋಡಿದ ಕೂಡಲೇ ...ಅವರಿಂದ ವ್ಯಕ್ತವಾದ ಸಂತಸ-ಉದ್ಗಾರಗಳು ಅದನ್ನು ...ಹೇಳುತ್ತಿದ್ದವು. ಹೆಂಗಸರು ತಮ್ಮ ಗೋಧಿ ಹೊಲದಲ್ಲಿ ...ಕಟಾವಿನಲ್ಲಿ ತೊಡಗಿದ್ದಾಗ; ಹುಲಿ ಪಕ್ಕದ ಕಾಡಂಚಿನಿಂದ ...ಹೊಟ್ಟೆ ಮೇಲೆ ತೆವಳುತ್ತಾ ಇವರತ್ತ ಸಾಗಿ ಬಂದಿದೆ. ...ಇದನ್ನು ದೂರದಿಂದ ಗಮನಿಸಿದ ಗಂಡುಸೊಬ್ಬ ಹುಲಿಯೂ ...ಬೆಚ್ಚುವಂತೆ ಕೂಗಿಕೊಂಡಿದ್ದಾನೆ. ಹೆಂಗಸರಿಂದ ಇನ್ನೂ ...ದೂರವಿದ್ದ ಹುಲಿ ಅವನ ಕೂಗಿಗೆ ಬೆಚ್ಚಿ ಹಿಂತಿರುಗಿ ...ಓಡಿ ಹೋಗಿದೆ. ಜನ ಅತ್ತಲೇ ನೋಡುತ್ತಿದ್ದಾಗ.... ಅದು ...ಕಾಡೊಳಕ್ಕೆ ಹೋಗುತ್ತಿದ್ದಂತೆಯೇ ಇನ್ನೊಂದು ಹುಲಿ ...ಅದನ್ನು ಕೂಡಿಕೊಂಡಿದೆ, ಎರಡೂ ಹುಲಿಗಳು ಕಣಿವೆಯ ...ಇಳಿಜಾರಿನತ್ತ ಕಲ್ಲೆಸೆದಂತೆ ಓಡಿ ಕಣ್ಮರೆಯಾಗಿವೆ. ಅಲ್ಲಿದ್ದವರು ...ಜೀವಭಯದಿಂದ ತತ್ತರಿಸಿ ಹೋಗಿದ್ದಾರೆ. 'ಎರಡೂ ...ಹುಲಿಗಳು ಮತ್ತೆ ಹಿಂತಿರುಗಿದರೆ ನಮ್ಮನ್ನೆಲ್ಲಾ ಒಟ್ಟಿಗೇ ...ಕೊಂದು ಬಿಡಬಹುದು' ಎಂದು ಯೋಚಿಸುತ್ತಾ ಇಡೀ ...ರಾತ್ರಿ ಮುಚ್ಚಿದ ಬಾಗಿಲುಗಳ ಹಿಂದೆ ಜೀವ ಕೈಯಲ್ಲಿ ...ಹಿಡಿದು ಕುಳಿತಿದ್ದಾರೆ. ಇವರ ಭೀತಿಯನ್ನು ...ಇಮ್ಮಡಿಗೊಳಿಸುವಂತೆ ಆ ಎರಡೂ ಹುಲಿಗಳು ನಿಗದಿತ ...ಅಂತರದಲ್ಲಿ ನಿರಂತರವಾಗಿ ಘರ್ಜಿಸತೊಡಗಿವೆ. ಅವರೆಲ್ಲಾ ...ನಿದ್ರೆ ಇಲ್ಲದೆ ರಾತ್ರಿ ಕಳೆದಿದ್ದಾರೆ. ನಾನು ಬರುವುದಕ್ಕೆ ಸ್ವಲ್ಪ ...ಹೊತ್ತಿಗೆ ಮುಂಚೆ ಅವು ಘರ್ಜಿಸುವುದನ್ನು ನಿಲ್ಲಿಸಿವೆ. ...ಇಷ್ಟು ಅವರು ನನಗೆ ಹೇಳಿದ ವಿವರಗಳು. ಇದರಿಂದಾಗಿ ...ನಾನು ಗಾಳಿ ಸುದ್ದಿಯಂತೆ ಕೇಳಿದ್ದ ಒಂದು ವಿಷಯ ...ಖಚಿತವಾಗಿತ್ತು, ನರಭಕ್ಷಕಗಳು ಒಂದಲ್ಲಾ.... ಎರಡಿವೆ. ...ತಾಯಿಯೊಂದಿಗೆ ವಯಸ್ಕ ಮರಿಯೂ ಕೂಡಿಕೊಂಡು ...ನರ ಬೇಟೆಯಲ್ಲಿ ಕೈಜೋಡಿಸಿದೆ ಎಂದು ನಾನು ಊಹಿಸಿದ್ದಕ್ಕೆ ...ಸಾಕ್ಷಿ ದೊರೆತಿತ್ತು.

ಈ ಪರ್ವತವಾಸಿಗಳ ಹೃದಯ ಬಹಳ ದೊಡ್ಡದು. ...ಅದು ಅವರ ಅತಿಥಿ ಸತ್ಕಾರದಲ್ಲಿ ಎದ್ದು ಕಾಣುತ್ತದೆ. ...ಅವರು ನನಗಾಗಿ ಅಡುಗೆ ಮಾಡುತ್ತೇವೆಂದು ಹೇಳಿ ...ಸಿದ್ಧರಾದರು. ನನ್ನ ಕ್ಯಾಂಪನ್ನು ದಲ್ಯಾನಿಯಾದಲ್ಲಿ ಬಿಟ್ಟು, ...ಇಲ್ಲಿ ಬಂದು ರಾತ್ರಿಯನ್ನು ಮರದ ಮೇಲೆ ಕಳೆದಿದ್ದನ್ನು ...ಕೇಳಿ ಅವರು ಆರ್ದ್ರರಾದರು. ಆದರೆ ಇಂಥ ಪುಟ್ಟ ...ಸಮುದಾಯಗಳ ಅಡುಗೆಯ ಸಂಪನ್ಮೂಲಗಳ ಸ್ಥಿತಿಗತಿ ...ಗಳನ್ನು ಬಲ್ಲ ನಾನು ಅದನ್ನು ನಯವಾಗಿ ತಳ್ಳಿಹಾಕಿ, ...ಸಾಧ್ಯವಾದರೆ ಒಂದು ಲೋಟ ಟೀ ಕೊಡಿ ಎಂದೆ. ...ಅವರಲ್ಲಿ ಟೀ ಇರಲಿಲ್ಲ . ಹಾಗಾದರೆ ಒಂದು ಲೋಟ ...ಹಾಲನ್ನೇ ಕೊಡಿ ಎಂದೆ. ಅಪಾರವಾಗಿ ಬೆಲ್ಲ ಹಾಕಿದ್ದ ...ಮಂದವಾದ ಹಾಲನ್ನು ಕುಡಿಯಲು ಕೊಟ್ಟರು. ಕುಡಿದು ...ಅಭ್ಯಾಸವಿದ್ದರೆ ಇದು ಆಪ್ಯಾಯಮಾನವಾಗಿರುತ್ತದೆ. ಇದಾದ ...ನಂತರ ಅವರ ಗೋಧಿ ಬೆಳೆಯನ್ನು ಕಟಾವು ಮಾಡಿ ...ಕೊಳ್ಳುವವರೆಗೂ ಬೆಂಗಾವಲು ನೀಡುವಂತೆ ಕೋರಿದರು. ...ನಾನು ಸಿದ್ಧನಾಗಿ ನಿಂತೆ. ಅವರ ಕಟಾವು ಮಧ್ಯಾಹ್ನದ ...ಹೊತ್ತಿಗೆ ಮುಗಿಯಿತು. ನಾನು ಅವರಿಂದ ಬೀಳ್ಕೊಂಡು ...ರಾತ್ರಿ ಹುಲಿಗಳು ಘರ್ಜಿಸುತ್ತಿದ್ದ ದಿಕ್ಕಿನತ್ತ ಇಳಿದೆ.

...ನಾನು ಇಳಿಯುತ್ತಿದ್ದ ಕಣಿವೆಯು ಲಾಧ್ಯಾ ...ನಂದೋರ್ ಹಾಗೂ ಪಶ್ಚಿಮಗೌಲಾದಂಥ ನದಿಗಳ ...ಜಲಾನಯನ ಪ್ರದೇಶವಾಗಿತ್ತು, ದಕ್ಷಿಣ-ಪಶ್ಚಿಮವಾಗಿ ಇಪ್ಪತ್ತು ...ಮೈಲಿಗಳಷ್ಟು ದೂರ ಹಬ್ಬಿದ್ದ ಈ ಕಣಿವೆ ಮೈತುಂಬಾ ...ನಿಬಿಡವಾದ ಕಾಡನ್ನು ಹೊದ್ದಿತ್ತು, ಇಲ್ಲಿ ಹುಲಿಗಳ ...ಹೆಜ್ಜೆಯನ್ನು ಗುರುತಿಸುವುದಾಗಲೀ, ಹಿಂಬಾಲಿಸುವುದಾಗಲೀ ...ಸಾಧ್ಯವಿರಲಿಲ್ಲ, ಹೀಗಾಗಿ ನಾನೇ ಹುಲಿಯ ಆಕರ್ಷಣೆ ...ಆಗಿ ಅದೇ ನನ್ನನ್ನು ಗುರುತಿಸುವಂತೆ ಮಾಡಿ, ಅಥವಾ ...ಇತರ ಪ್ರಾಣಿಗಳ ಸಂಕೇತ-ಸೂಚನೆಗಳಿಗಾಗಿ ಕಾದು ...ಹುಲಿಗಳನ್ನು ಹುಡುಕಿ ಅಪಶ್ಯ ಮುಖಾಮುಖಿಯಾಗ ...ಬೇಕು,

(ಮುಂದುವರೆಯುವುದು)



ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳಿಗೆ ಬಹಿರಂಗ ಸವಾಲು

ಒಂದು ಪತ್ರ

ಮಾನ್ಯ "ಹವ್ಯಕ ಜಗದ್ಗುರುಗಳೆ",

ಸಾರ್ವಜನಿಕರ ಹಣ, ಸರ್ಕಾರದ ಹಣ, ಸರ್ಕಾರಿ ಯಂತ್ರದ ಧಾರಾಳ ದುರ್ಬಳಕೆ, ಸರ್ಕಾರಿ ಜಮೀನುಗಳ ಒತ್ತುವರಿ ಮಾಡಿಕೊಂಡು ಸರ್ಕಾರಿ ಅಧಿಕಾರಿಗಳನ್ನು, ರಾಜಕಾರಣಿಗಳನ್ನು ಕಾಲಿಗೆ ಬೀಳಿಸಿಕೊಂಡು ಜನರಿಗೆ ಮಂಕುಬೂದಿ ಎರಚುತ್ತಾ, ನಮ್ಮ ಇಡೀ ತಾಲ್ಲೂಕಿಗೆ ಕಳಂಕ ಪ್ರಾಯವೆಂಬಂತೆ ವಿಶ್ವ ಗೋ ಸಮ್ಮೇಳನವೆಂಬ ಬೂಟಾಟಿಕೆಯ ಮೇಳವೊಂದನ್ನು ಆಯೋಜಿಸಿಕೊಂಡು ಮೆರೆಯುತ್ತಿರುವ ನಿಮ್ಮ ಆತ್ಮಸಾಕ್ಷಿಯೇನೆಂಬುದನ್ನು ಜನರ ಮುಂದೆ ತೆರೆದಿಡಲು ನಮ್ಮ ಈ ಕೆಳಕಂಡ ಅನುಮಾನಗಳಿಗೆ ಸಮರ್ಪಕ ಉತ್ತರವನ್ನು ನೀಡುವಿರಾಗಿ ಆಶಿಸುತ್ತೇವೆ.

1. ಕಳೆದ ವರ್ಷ ತಾವು ಮಾಡಿದ ರಾಮಾಯಣ ಮಹಾಸತ್ರ ಯಾಗದ ಪರಿಣಾಮಗಳು ಏನಾದವು?

   (ಹಣ ಸಂಗ್ರಹಣೆ, ಕಾಡು-ಗುಡ್ಡ ಬೋಳಿಸಿ ಸಮತಟ್ಟು ಮಾಡಿದ್ದು ಮತ್ತು ಸರ್ಕಾರಿ ಜಾಗ ಒತ್ತುವರಿ ಮಾಡಿಕೊಂಡಿದ್ದು ಬಿಟ್ಟು.)

2. ಹೋಮ-ಹವನಗಳನ್ನು ಕುರಿತು ನಿಮ್ಮ ಹಿಂಬಾಲಕ ವಿಜ್ಞಾನಿಗಳ ಸಂಶೋಧನೆಗಳ ಫಲಾಫಲಗಳೇನು?

   (ಯಾವುದೇ ವಸ್ತುವನ್ನು ದಹಿಸಿದಾಗ ಇಂಗಾಲದ ಡೈ ಆಕ್ಸೈಡ್ ಮತ್ತು ಮಾನಾಕ್ಸೈಡ್‌ಗಳು ಉತ್ಪತ್ತಿಯಾಗುತ್ತವೆಯೇ ಹೊರತು ಓಜೋನ್ ಪದರಕ್ಕೆ ಪೂರಕವಾದ ಯಾವುದೇ ವಸ್ತು ಬಿಡುಗಡೆಯಾಗುವುದಿಲ್ಲ ಎಂಬುದು ವೈಜ್ಞಾನಿಕ ಸತ್ಯ.)

3. ಗೋವುಗಳು ಮಾತ್ರ ಶ್ರೇಷ್ಠವೇ ಮತ್ತು ಉಳಿದ ಪ್ರಾಣಿಗಳು ಕೀಳೇ?

   (ಗೋವುಗಳಲ್ಲೂ ವರ್ಣಭೇದ ನೀತಿ-ಕಪ್ಪು,ಬಿಳಿ, ಕೆಂಪು ಶ್ರೇಷ್ಠ. ಉಳಿದವು ಮಧ್ಯಮ. ಅಂದರೆ ಬೇರೆ ಬಣ್ಣದ ಗೋವುಗಳಲ್ಲಿ ಕಡಿಮೆ ಸಂಖ್ಯೆಯ ದೇವರುಗಳು ವಾಸಿಸುತ್ತಾರೆಯೇ?)

4. ನಿಮ್ಮ ಮಠದಲ್ಲಿ ಎಲ್ಲಾ ಜಾತಿ-ಜನಾಂಗಗಳಿಗೂ ಸಮಾನ ಅವಕಾಶವಿದೆಯೆ?

   (ನಾವು ನೋಡಿದಂತೆ ಗೋ ಮೂತ್ರ, ಸಗಣಿ ಬಾಚಲು ಉ.ಕ.ದ ಸಿದ್ದಿಗಳು, ಹರಿಜನರು, ಗಿರಿಜನರು ನೇಮಿಸಲ್ಪಟ್ಟಿದ್ದಾರೆ. ಮೇಲುಜಾತಿಯ ಜನರು ಗೋ ಉತ್ಪನ್ನಗಳನ್ನು ಸವಿಯಲು ಮಾತ್ರ ಅರ್ಹರೆ?)

5. 'ಗೋಪಾಲ ಗೌರವ' ನೀಡಲು ಮಾನದಂಡವಾದರೂ ಏನು?

   (ಗೋಪಾಲ ಎಂದರೆ ಆಡುಭಾಷೆಯಲ್ಲಿ ದನಕಾಯುವವನು ಎಂದರ್ಥ. ಇದರ ಔಚಿತ್ಯವೇನು?)

6. ವಾರಗಟ್ಟಲೆ ನಡೆಯುವ ಈ ಕಾರ್ಯಕ್ರಮ ಪರಿಸರಕ್ಕೆ ಹಾನಿಕರವಲ್ಲವೆ?

   (ಲಕ್ಷಾಂತರ ಜನರು ಒಂದೆಡೆ ಮಲಮೂತ್ರ ವಿಸರ್ಜಿಸುವುದು, ನೀರು, ಗಾಳಿ ಮಲಿನಗೊಳಿಸುವುದು ಈ ಬೇಸಿಗೆಯಲ್ಲಿ ಉಚಿತವೆ?)

7. ಈ ಬಿರು ಬೇಸಿಗೆಯಲ್ಲಿ ಇದರ ಅವಶ್ಯಕತೆ ಇತ್ತೆ?

   (ಕುಡಿಯಲು ನೀರು ದೊರೆಯುತ್ತಿಲ್ಲ, ವಿದ್ಯುತ್ ಮೊದಲೇ ಕೊರತೆ. ಇವೆಲ್ಲವುಗಳ ಅಪವ್ಯಯ ಯಾವ ಪುರುಷಾರ್ಥಕ್ಕೆ?)

8. ನಿಮ್ಮ ಜಾತಿಯ ಹಿಂದೂ ಸ್ವಯಂಸೇವಕರ ಅವಶ್ಯಕತೆ ನಿಮಗಿಲ್ಲವೆ?

   (ದಿನಕ್ಕೆ 300 ರೂಪಾಯಿಗಳ ದಕ್ಷಿಣೆ ಪಡೆಯುವ ನಿಸ್ವಾರ್ಥ, ಶಿಸ್ತಿನ ಸ್ವಯಂಸೇವಕರಿಗೆ ನಮ್ಮ ಅಭಿನಂದನೆಗಳು.)

9. ಕೇವಲ ಆಶೀರ್ವಾದ ಬಲದಿಂದ ಕುಮಾರಸ್ವಾಮಿಯವರನ್ನು ಮುಖ್ಯಮಂತ್ರಿ ಮಾಡಿದ ನೀವು ಪವಾಡಪುರುಷರೇ?

   (ನಿಮ್ಮಲ್ಲಿ ಆ ಶಕ್ತಿ ಇದ್ದಿದ್ದರೆ ಒಳ್ಳೊಳ್ಳೆಯ ವ್ಯಕ್ತಿಗಳನ್ನು ಎಂ.ಎಲ್.ಎ-ಎಂ.ಪಿ.ಗಳನ್ನಾಗಿ ಮಾಡಿ ಈ ಭರತಖಂಡದ ಉದ್ಧಾರ ಮಾಡಬಹುದಿತ್ತಲ್ಲವೆ?)

10. ನಿಮ್ಮ ಸಮ್ಮೇಳನಗಳ ಉದ್ದೇಶ ರಾಜ್ಯ, ರಾಷ್ಟ್ರ, ವಿಶ್ವ ಮಟ್ಟಗಳಲ್ಲಿ ನಿಮ್ಮನ್ನು ನೀವು ಮಿಂಚಿಸಿಕೊಳ್ಳುವ ಪ್ರಯತ್ನವೇ?

    (ಸಮ್ಮೇಳನಕ್ಕೆ ಪ್ರತಿನಿತ್ಯ ದೊಡ್ಡ ರಾಜಕಾರಣಿಗಳು, ಅಧಿಕಾರಿಗಳು ಆಗಮಿಸುವುದು, ನೀವು ಅವರೊಂದಿಗೆ ನಿದ್ದೆಗೆಟ್ಟು ಅಹರ್ನಿಶಿ ಸುತ್ತುವುದು-ಜಗದೋದ್ಧಾರಕ್ಕಾಗಿಯೆ? ಉದಾ: ಕೊಲ್ಲೂರಿಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ನಡುರಾತ್ರಿ 1.00 ಗಂಟೆಗೆ ಭೇಟಿ ನೀಡಿದ್ದು).

11. ಈ ಸಮ್ಮೇಳನ ಮಂತ್ರಿ ಮಹೋದಯರನ್ನು ಓಲೈಸುವ ಒಂದು ಸಾಧನವೇ?

    (ಇದಕ್ಕೇ ಇರಬೇಕು ಬಜೆಟ್‌ನಲ್ಲಿ 2 ಕೋಟಿ ಅಲ್ಲದೆ ಮುಖ್ಯಮಂತ್ರಿಗಳು 30 ಕೋಟಿಯ ಆಶ್ವಾಸನೆ ನೀಡಿದ್ದು).

12. ಸಮ್ಮಿಶ್ರ ಸರ್ಕಾರದ ಎರಡೂ ಪಕ್ಷಗಳ ಬೆಸುಗೆಯ ಕೊಂಡಿ ನೀವಂತೆ-ಹೌದೆ?

    (ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಇಬ್ಬರೂ ಪೈಪೋಟಿಯ ಮೇಲೆ ತಮ್ಮ ಪಾದಾರವಿಂದಗಳಿಗೆ ಬೀಳುವುದನ್ನು ನೋಡಿದರೆ ನಮಗೇನೋ ಅನುಮಾನ).

13. ಕಳೆದ ವರ್ಷ ರಾಮಾಯಣ ಮಹಾಸತ್ರ ಯಾಗ, ಈ ವರ್ಷ ವಿಶ್ವ ಗೋ ಸಮ್ಮೇಳನ. ಮುಂದಿನ ವರ್ಷ ವಿಶ್ವ ವಾನರ ಸಮ್ಮೇಳನ?

    (ಸನಾತನ ಧರ್ಮದಲ್ಲಿ ಗೋವಿನ ನಂತರ ಪೂಜ್ಯ ಸ್ಥಾನ ಮಂಗಗಳಿಗೆ, ಅವುಗಳ ಸ್ಥಿತಿಯೂ ಬಹಳ ಗಂಭೀರವಾಗಿದೆ).

ಮೊದಲೇ ನಮ್ಮ ತಾಲ್ಲೂಕು ಹಿಂದುಳಿದ ಪ್ರದೇಶ. ಮುಳುಗಡೆಯಿಂದಾಗಿ ದಿವಾಳಿಯೆದ್ದ ಪ್ರದೇಶ. ನಿಮ್ಮಂತವರಿಂದಾಗಿ ಬೌದ್ಧಿಕವಾಗಿಯೂ ನಮ್ಮ ಜನ ದಿವಾಳಿ ಆಗಿದ್ದಾರೆ. ನಮ್ಮ ಜನರಿಗೆ ಅಗತ್ಯವಿರುವುದು ಉದ್ಯೋಗ ಒದಗಿಸುವ ಉದ್ಯಮಗಳು, ಶಿಕ್ಷಣ ಒದಗಿಸುವ ಶಾಲೆಗಳು, ಆರೋಗ್ಯ ಒದಗಿಸುವ ಆಸ್ಪತ್ರೆಗಳು, ಆಶ್ರಯ ಒದಗಿಸುವ ಮನೆಗಳು.

ಇವೆಲ್ಲವನ್ನು ಬಿಟ್ಟು ಪರಿಸರದ ಪ್ರಥಮ ವೈರಿ ಗೋವನ್ನು ಮಾನವ ಜನಾಂಗದ ಭವಿಷ್ಯದ ಆಶಾಕಿರಣವನ್ನಾಗಿ ಬಿಂಬಿಸುವ, ಇಡೀ ಸರ್ಕಾರವನ್ನೇ ಕಾಲಿಗೆ ಬೀಳಿಸಿಕೊಂಡು ಸಾರ್ವಜನಿಕ ಬೊಕ್ಕಸಕ್ಕೆ ಕನ್ನ ಹಾಕುವ ನಿಮ್ಮ ಹುನ್ನಾರಕ್ಕೆ ಧಿಕ್ಕಾರವಿರಲಿ.

-ವಿಚಾರವಾದಿಗಳ ಸಂಘ, ಹೊಸನಗರ ತಾಲ್ಲೂಕು

ತಳದ ಮಣ್ಣೆಲ್ಲಾ
ಮೇಲೆ ಬಂದು
ನೀರು ಕೆಂಪಾಗಿ
ಕುಡಿಯಲು ನಿಷಿದ್ಧ

ನೀರು ಬೇಕೇ ಬೇಕು
ಮಣ್ಣು ತಳಕ್ಕಿಳಿಯಬೇಕು
ಇಲ್ಲ ಶೋಧಿಸಬೇಕು

ಮಣ್ಣು ಭಾರ
ತಳಕ್ಕಿಳಿದೇ ತೀರುತ್ತದೆ
ನೀರು ತಿಳಿಯಾಗಲು

ಸ್ವಲ್ಪ
ಕಾ
ಯ
ಬೇ
ಕು
ಸುಮ್ಮನಿರಬೇಕು
ಇನ್ನೂ ಕಲ್ಮಶ ತೊರೆಯದಿದ್ದರೆ
ಸ್ವಚ್ಛ ಹತ್ತಿ ಬಿಳೀ ಬಟ್ಟೆಯಿಂದ
ಶೋಧಿಸಿಬಿಡಬೇಕು!

ಇದೀಗ ದೇವಜಲ ಸಿದ್ಧ!

ಜ್ಯೋತಿ ಗುರುಪ್ರಸಾದ್



ಕುಮಾರಸ್ವಾಮಿ ಮಾಡಿರೊ ಒಂದೊಳ್ಳೆ ಕೆಲ್ಸ ಹೇಳಕ್ಕ...

ಓಂದೇ ಒಂದು ರಾತ್ರಿ ಹೊಡೆದು ಹೋದ ಮುಂಗಾರು ಮಳೆ ದೆಸೆಯಿಂದ ನೆಲ ಗುವಗುರಿಯುತ್ತಿತ್ತು. ಹೊಲಮಾಳವನ್ನು ದಿಟ್ಟಿಸಿ ನೋಡಿದವರೆ, ಬೆಂಕಿಯ ದವೆಯಂತೆ ಭೂಮಿಯ ಝಳ ನರ್ತಿಸುತ್ತ ಮೇಲೇಳುತ್ತಿತ್ತು. ಬಾಲಿ ಮರಕ್ಕೆ ಅಂಟಿದ ಭರಣೆ ಹುಳಗಳ ಮೊರೆತ ಇನ್ನು ನಿಂತಿರಲಿಲ್ಲ. ಮುಂಗಾರಿನ ಸಮಯದಲ್ಲಿ ನೇಗಿಲು ನೊಗವನ್ನು ಈಚೆ ತೆಗೆಯುವ ಭೂಮಿ ಪುತ್ರನ ಉತ್ಸಾಹವನ್ನು ನೆನೆದ ಕಾಳಮಾವ.

"ಆಗ ನಾನು ಒತ್ತುಟ್ಟೊವತ್ತಿಗೆ ಅರ್ಧ ವಲ ಉತ್ತು ಬುಡತಿದ್ದೆ ಕಂದ್ಕ ತಾಯಿ. ಈಗಿನ ಮುಂಡೆ ಮಕ್ಕಳು ಕಾಫಿ ಕುಡದ ಮ್ಯಾಲೆ ವಲ ಹುಳಕ್ಕೋಯ್ತರೆ. ಆಟೊತ್ತಿಗೆ ಬಿಸುಲೇರಿ ದನ ಸುಸ್ತಾಯ್ತವೆ" ಎಂದ.

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಕುಮಾರಸ್ವಾಮಿನು ನಿನ್ನಂಗೆ ಅಂದವುನೆ ಕಣ-ಮಾವ" ಎಂದು ಉಗ್ರಿ ನಗಾಡಿದ.

"ಅವುನ್ಯಾವಾಗ ವಲ ಹುತ್ತಿದುನ್ಲ?" ಎಂದಳು ಜುಮ್ಮಿ.

"ವಳ ಹುಳದೋಗ್ಲಿ ನೇಗ್ಲು ನ್ವಗ ನೋಡಿದ್ದನೊ ಇಲವೊ. ಯಾಕೆ ಅಂದ್ರೆ ದ್ಯಾವೇಗೌಡ ವಲ ಉತ್ತಿದ್ರೆ ಅವುನು ನೇಗುಲು ನ್ವಗ ನೋಡಿರೋನು" ಎಂದ ಉಗ್ರಿ.

"ನೇಗಲು ನೋಡಿದೋನ್ಯಂಗೆ ಕಾಳಮಾವನಂಗೆ ಮಾತಡ್ಯನ್ಲ?"

"ಅವುನು ಏನಂದವುನೆ ಗೊತ್ತೇನೆ, ಅಧಿಕಾರ ಹಿಡಿವಾಗ ಇದ್ದ ಉಮೇದು ಈಗಿಲವಂತೆ."

"ಅವುನೇಳಿದ್ಯಂಗಾಯ್ತು ಅಂದ್ರೆ, ಡಕಾತಿ ರಾಮಲಿಂಗ ಇವುನಂಗೆ ಅಂತಿದ್ದ ಏನಪ್ಪಾ ಅಂದ್ರೆ ನಾನು ಆಗ ಮಾಡಿದ ಕಳ್ತನವ ಈಗ ಮಾಡಕ್ಯಾದತೆ ಅಂತಿದ್ದ ಅಂಗಾಯ್ತು" ಎಂದ ಹೋಟೆಲ್ ಚಿಕ್ಕ.

"ರಾಮಲಿಂಗೇನೊ ಡಕಾತಿ ಕ್ಯಲಸ ಮಾಡಿದ್ದ. ಕುಮಾರಸ್ವಾಮಿ ಯಾವ ಡಕಾತಿ ಮಾಡಿದ್ನೊ?" ಎಂದ ಸೀರ.

"ಉಗ್ರಿನೆ ಕೇಳಪ್ಪ"

"ನಲವತ್ತು ಜನ ಯಮ್ಮೆಲ್ಲೆಗಳ ಒಂದು ಬಸ್ಸಿಗೆ ತುಂಬಕಂಡೋಗಿ ಆವುರಿಗ್ಯಲ್ಲ ಕುಡಿಸಿ, ತಿನ್ನಿಸಿ, ಹೆಂಗುಸರನ್ನು ಸಪ್ಲೈ ಮಾಡಿ ಅಧಿಕಾರ ಹಿಡಿಯದು ಡಕಾತಿ ಕ್ಯಲಸವೆಯ ಕಣ್ರೊ."

"ನಿಜ ಬುಡು, ಅಂತ ಕ್ಯಲಸವ ಇಡಿ ಕರನಾಟಕ ದೇಸದಲ್ಲಿ ಯಾವ ಮಗನೂ ಮಾಡಿಲ್ಲ, ಗಂಡು ಅಂದ್ರೆ ಕುಮಾರಸ್ವಾಮಿ" ಎಂದು ಸೀರ ಕೊಂಡಾಡಿದ.

"ಇದೇನೊ ಮಾವ ಹಿಂಗಂತೀ? ದೇಸದ ಮರಿಯಾದಸ್ಥ ರಾಜಕಾರಣಿಗಳ್ಯಲ್ಲ ತಲೆ ತಗ್ಗಿಸೊ ತರಹ ಕ್ಯಲಸ ಮಾಡಿದ ಅಂತ ಗೋಪಿಂದೇಗೌಡ್ರು ಕೆ.ಆರ್. ಪ್ಯಾಟೆ ಕಿಸ್ಣ ಆ ಎಂ.ಪಿ. ಪ್ರಕಾಶ ಮಾತಾಡ್ತಯಿರುವಾಗ ನೀನು ಕುಮಾರಸ್ವಾಮಿ ಕ್ಯಲಸ ಮೆಚ್ಚಗತಾಯಿದ್ದಿಯಲ್ಲೊ. ನಿನಿಗೂ ಆ ಚಲುವರಾಯಸ್ವಾಮಿ ಗಾಳಿ ಬೀಸ್ತೆ?"

"ಚಲುವರಾಯಸ್ವಾಮಿ ಕುಮಾರಸ್ವಾಮಿ ಹಂಗಲಿಬಿದ್ದವುನೆ ಕಂದ್ಯ, ನನಿಗ್ಯಾರಂಗಿದ್ದತೂ? ಇರದೇಳಿದ್ನಪ್ಪ"

"ಯಾವತ್ತಿಗೂ ಯಾರಂಗೂ ವಳ್ಳೆದಲ್ಲ ಚಿಗಪ್ಪ. ಹಂಗಿನಲ್ಲಿದ್ರೆ ವಾಯ್ಸು ಹೋಗಿಬುಡತದೆ" ಎಂದು ವಾಟಿಸ್ಸೆ ಬಂದ.

"ನೀನೇನೊ ಅಂಗಂತಿ. ಇವತ್ತು ಯಲ್ಲರೂ ಯಲ್ಲಾರಂಗಿನಲ್ಲೂ ಇರೊ ಸ್ಥಿತಿ ಬಂದದಲ್ಲೊ?" ಎಂದ ಉಗ್ರಿ.

"ಎಜ್ಜಾಕ್ಟ್ಲಿ ಕರಟ್. ಅಂತ ದ್ಯಾವೇಗೌಡನೇ ಬಿಜೆಪಿ ಹಂಗಿನಲ್ಲಿ ಕಾಲ ಮಾಡ್ತ ಅವುನೆ ಅಂದ ಮ್ಯಾಲೆ ಇಡೀ ಸರ್ಕಾರದ ಜನ ವಬ್ಬರಿಗೊಬ್ಬರ ಹಂಗಿನಲ್ಲೇ ಜೀವನ ಮಾಡ್ತ ಅವುರೆ ಕಣೊ."

"ಈ ಸರ್ಕಾರಿ ಜನವ ಕುಮಾರಸ್ವಾಮಿ ಬಾಯಿಗೆ



ಬಂದಂಗೆ ಚೈತ ಕುಂತವುನಂತೆ ಯಾಕ್ಲ?" ಎಂದ ಸೀರ.

"ವೆರಿ ಸಿಂಪಲ್ಲು ಚಿಗಪ್ಪ, ಕುಮಾರಸ್ವಾಮಿಗೆ ಕ್ಯಲಸ ಗೊತ್ತಿಲ್ಲ, ಗೊತ್ತಿಲ್ದೆಯಿರೊನತ್ರ ಏನೇಳಿಸಿಗಳದು ಅಂತ ಅಧಿಕಾರಿಗಳು ನೆಗ್ಲೆಟ್ ಮಾಡ್ಯವುರೆ. ಅದ್ಕೆ ಇವುನಿಗೆ ಮುಕ್ಳಿ ಹುರಿಯತ್ತಿಗಂಡು ಕೂಗಾಡ್ತ ಅವುನೆ."

"ಕೂಗಾಡ್ಲಿ ಬುಡು ಇನ್ನೇಟು ದಿನ ಕೂಗಾಡ್ಯನು?"

"ಇದ್ದೊಟು ದಿನವೆ ಆಯ್ತು ಅಂತರೆ. ಮ್ಯಾಟ್ರು ಅದಲ್ಲ, ಪರೆಗ್‌ಜಾಂಪಲ್ ನೀನು ಬೆಂಗಳೂರಿಗೋಗಿ ಆಟೋ ಹತ್ತಿಗಂಡು ಚಾಮರಾಜಪ್ಯಾಟೆ ದ್ಯಾಲಾಸಿ ಶ್ರೀನಗರಕ್ಕೆ ನಡಿ ಅಂತಿ, ರಿಕ್ಷಾದೋನು ಹೋಯ್ತನೆ ಅದೇ ನೀನು ಶ್ರೀನಗರ ಎಲ್ಯದಣ್ಣ ನಡಿ ದಸಿಯ ಅಂದ್ರೆ ಅವುನು ಏನು ಮಾಡ್ತನೆ ಗೊತ್ತ?"

"ಏನು ಮಾಡ್ಯನು ಹೋಯ್ತನೆ."

"ಹೋಯ್ತನೆ ಸರಿ, ಕಾರಪೋರೇಷನ್ ಕಡಿಂದ ಲಾಲ್‌ಬಾಗಿನ ಕಡಿಗೋಗಿ ಶ್ರೀನಗರಕ್ಕೆ ಬತ್ತನೆ. ನೂರುಪಾಯಿ ಮೀಟ್ರು ಚಾರ್ಜಾಯ್ತದೆ. ಅದೇ ಚಾಮರಾಜ ಪ್ಯಾಟೆ ಕಡಿಂದ ಹೋಗಿದ್ರೆ ನಲವತ್ತು ರೂಪಾ ಯಾಗದು."

"ಇದುಕೂ ಕುಮಾರಸ್ವಾಮಿಗು ಏನು ಸಮಂಧುವುಲ?"

"ಸಮಂದಿರೊವತ್ತಿಗೆ ಚಿಗಪ್ಪ ಹೇಳಿದ್ದು. ಈ ಕುಮಾರಸ್ವಾಮಿ ಹಿಂದೆ ಮಂತ್ರಿಯಾಗಿದ್ದೊನಲ್ಲ ಆಡಳ್ತ ಯಂಗೆ ಮಾಡಬೇಕು ಅಂತ ತಿಳಕಂಡೋನಲ್ಲ, ಒಂದರ್ಜಿ ಸರ್ಕಾರ ಯಂತ್ರದ್ವಳಿಕೋಗಿ ಎಲ್ಯಾಸಿ ಬಂದು ತನ್ನ ಟೇಬಲ್ ಮ್ಯಾಕೆ ಬತ್ತು ಅನ್ನದೂ ಗೊತ್ತಿಲ್ಲ ಅಂತ ಅಧಿಕಾರಿಗಳು ತಿಳಕಂಡವುರೆ, ಅದ್ಕೆ ಅವುನೇಳಿದ್ದ ನೆಗ್ಲೆಟ್ ಮಾಡ್ತ ಅವುರೆ, ಇವುನು ಏನೊ ಮಾಡ್ತಿ ಅಂತ ಬಂದೋನು ಏನೂ ಮಾಡದಂಗ ಹೋಯ್ತಾ ಅವುನೆ."

"ಅಂಗರೆ ಕುಮಾರಸ್ವಾಮಿ ಏನು ಮಾಡಲಿಲ್ಲವೇನ್ಲ?"

"ಇಪ್ಪತ್ತು ತಿಂಗಳಲ್ಲಿ ಏನು ಮಾಡಕ್ಯಾದತಕ್ಕ? ಇಡೀ ಕರ್ನಾಟಕದ ದೇವುಸ್ಥಾನ ಸಾಲ್ದೆ ತಮುಳುನಾಡು ತಿರುಪ ದೇವುಸ್ಥಾನವ್ಯಲ್ಲ ರವುಂಡು ವಡದ. ಅಲ್ಲಿ ಇಲ್ಲಿ ಮನಗಿದ್ದ ಈ ನಡುವೆ ಅವುರ ಮನಿಯೋರು ಮಾಡಿಕಳೊ ಆಸ್ತಿನ ಸಕ್ರಮ ಮಾಡಿಸಿಕೊಟ್ಟ. ರಾಧಿಕನ ಮನೆಲಿ ಮನಗಿದ್ದ ಇನ್ನೇನು ಮಾಡಿದ ಅಂತ ಜನ ಕೇಳ್ತ ಕುಂತವುರೆ ನಿನಿಗೇನಾರ ಅವುನು ಮಾಡಿರೊ ಕ್ಯಲಸ ಕಂಡ್ರೆ ಹೇಳು..."

ಸೂಪರ್ ಪವರ್ ಟು ದಿ ಪವರ್ ಆಫ್ ಇನ್‌ಫಿನಿಟಿ ಮುಖ್ಯಮಂತ್ರಿ!

'ನಿನಗಿಂತ ವಿ.ಸಿ. ಸೂಪರ್ ಪವರ್ರಾ....?' ಕನಲಿ ಕೇಳಿದರು ಗೌರವಾನ್ವಿತ ಮುಖ್ಯಮಂತ್ರಿಗಳು.

ಇದು ಗೌಡಿಕೆಯ ಗತ್ತು ಅಂದರೆ ಇಂತಹ ಪ್ರಶ್ನೆಯನ್ನು ಇದುವರೆವಿಗೆ ಯಾರಿಗೂ ಎತ್ತುವ ತಾಕತ್ತು ಇರಲಿಲ್ಲ!

ಒಬ್ಬರು ಗೌರವಾನ್ವಿತ ಕುಲಪತಿಗಳು.

ಇನ್ನೊಬ್ಬರು ಗೌರವಾನ್ವಿತ ಮುಖ್ಯಮಂತ್ರಿಗಳು.

ಇವರಿಬ್ಬರಲ್ಲಿ ಯಾರು ಹೆಚ್ಚು ಗೌರವಾನ್ವಿತರು? ಹೆಚ್ಚು ಗೌರವಾನ್ವಿತರಿಗೆ ಹೆಚ್ಚು ಪವರು!

ಕುಲಪತಿಗಳು, ಆ ಬ್ರಹ್ಮ ಅನ್ನೋನು ಹಣೆಯಲ್ಲಿ ಸರಿಯಾಗಿ ಬರೆದಿದ್ದರೆ, ಮುಖ್ಯಮಂತ್ರಿ ಆಗಬಹುದು, ಅವರ ಅಪ್ಪನ ಸ್ಥಾನಾನೂ ಪಡೆಯಬಹುದು. 'ಅಪ್ಪ' ಪದಕ್ಕೆ ಯಾರಾದರೂ ಅಡ್ಡಿ ಬರ್ತಾರೆ ಅಂದರೆ 'ಅಮ್ಮನ' ಸ್ಥಾನಾನೂ ಪಡೆಯಬಹುದು ಎಂದೇ ಹೇಳೋಣಂತೆ. ಆದರೆ ಘನವಂತ ಮುಖ್ಯಮಂತ್ರಿಗಳು ಕುಲಪತಿ ಆಗಲು ಸಾಧ್ಯ ಇಲ್ಲವೇ. ಅಂದ ಮೇಲೆ ಕುಲಪತಿಗಳೇ ಹೆಚ್ಚು ಗೌರವಾನ್ವಿತರು ತಾನೆ. ಹಾಗಿರಲು ಸಾಧ್ಯವಿಲ್ಲವಂತೆ. ಕುಲಪತಿಗಳನ್ನ ಮಾನ್ಯ ಮುಖ್ಯಮಂತ್ರಿಯವರು ಕೈಗೊಂಬೆ ತರಹ ಆಡಿಸಬಹುದಂತೆ! ಅಂದಮೇಲೆ ಮುಖ್ಯಮಂತ್ರಿಗಳೇ ಸೂಪರ್ ಪವರು ಅಂದ ಹಾಗಾಯ್ತು!

ಶ್ರೀಯುತ ಕುಮಾರಸ್ವಾಮಿಯವರು ಸಂವಿಧಾನಕ್ಕೇ ಆಗಾಗ್ಗೆ ಇಂತಹ ತಮ್ಮ ಅಮೋಘ ವ್ಯಾಖ್ಯಾನದ ಕೊಡುಗೆ ನೀಡುತ್ತಿರುತ್ತಾರೆ.

ಮುಖ್ಯಮಂತ್ರಿ ಆದ ಹೊಸದು. ಕೋಮುವಾದಿ ಪಕ್ಷದೊಂದಿಗೆ ಹೊಂದಾಣಿಕೆ ಹೇಗೆ ಸಾಧ್ಯ ಅಂದದ್ದಕ್ಕೆ- "ನಾನು ಎಲ್ಲೆಲ್ಲೋ ತಡಕಿ ನೋಡಿದೆ. ಜಾತ್ಯತೀತತೆ ಅಂದರೆ ಏನು ಅಂತ ಸಿಗಲೇ ಇಲ್ಲ" ಎಂಬ ಅರ್ಥದ ಮಾತುಗಳನ್ನು ಆಡಿದ್ದರು.

ಅವರ ಖಾಸಾ ತಂದೆ ಹರದನಹಳ್ಳಿ ದೇವೇಗೌಡರು ಇತ್ತೀಚೆಗೆ ಯಾಕೋ 'ಚಕ್ರವ್ಯೂಹದಲ್ಲಿ ಸಿಲುಕಿರುವ' ಮಗನ ಕೋ-ಜಾ ಸರ್ಕಾರದ ಬಗ್ಗೆ ಮುನಿಸಿ ಕೊಂಡಿರುವಂತಿದೆ. ರಾಜಧರ್ಮ ಬಿಡಬೇಡಿ, ಲಕ್ಷ್ಮಣರೇಖೆ ಮೀರಬೇಡಿ ಎಂಬುದಾಗಿ ಸರ್ಕಾರಕ್ಕೆ ಸಲಹೆ ನೀಡಿದರು. 'ಯಾರಿವನು ದೇವೇಗೌಡ', 'ಹಾಸನಿಯನೆ ಇವನ', 'ನನಗೂ ದೇವೇಗೌಡರಿಗೂ ಯಾವುದೇ ಸಂಬಂಧ ಇಲ್ಲ' ಎಂದು ಮುಂತಾಗಿ ಯಕ್ಷಗಾನದ ರಾಕ್ಷಸನ ರೀತಿಯಲ್ಲಿ ಕುಣಿದ ಸದಾನಂದ ಗೌಡರು, ಯಡಿಯೂರಪ್ಪನವರು ಹುಷಾರಾದರು. ಎಲ್ಲಿ ಇನ್ನು ಆರು ತಿಂಗಳಲ್ಲಿ ಕೈ ಸೇರಲಿರುವ ಮುಖ್ಯಮಂತ್ರಿ ಪದವಿ ಜಾರಿ ಹೋಗುತ್ತೋ ಎಂಬ ಆತಂಕದಿಂದ 'ಗೌಡರು ಅನುಭವಿಗಳು, ಸರ್ಕಾರ ಉತ್ತಮ ಕೆಲಸ ಮಾಡಲೆಂದು ಸಲಹೆ ನೀಡಿದ್ದಾರೆ. ಅದನ್ನು ನಾವು ಅತ್ಯಂತ ನಮ್ರತೆಯಿಂದ ಸ್ವೀಕರಿಸಿದ್ದೇವೆ' ಎಂದು ಹೇಳುತ್ತಾ ಗೌಡರ ಕಾಲು ಹಿಡಿಯುವ ಜಾಡಿಗೆ ಬಂದರು.

ನಮ್ಮ ಘನತೆವೆತ್ತ ಮುಖ್ಯಮಂತ್ರಿಗಳ ಪ್ರತಿಕ್ರಿಯೆ, ತಂದೆಯ ಮಾತಿಗೆ, ಏನಿತ್ತು?

'ನನಗೆ ರಾಜಧರ್ಮ ಗೊತ್ತಿಲ್ಲ!'

'ನನಗೆ ಲಕ್ಷ್ಮಣರೇಖೆ ಗೊತ್ತಿಲ್ಲ!'

ಜಾತ್ಯತೀತತೆ ಕುರಿತು ತಿಳಿಯಲು ಮಾನ್ಯ ಮುಖ್ಯಮಂತ್ರಿ ಅದ್ಯಾವುದೋ ಪುಸ್ತಕ ತಡಕಿದರೂ ಅದರ ಅರ್ಥಾನೆ ಸಿಗಲಿಲ್ಲವಲ್ಲ. ಹಾಗೇನೆ ಅವರು ಈ ವಿಷಯಗಳನ್ನು ಕುರಿತು ತಿಳಿಯಲು ಅದು ಯಾವ್ಯಾವ ಉದ್ಗ್ರಂಥಗಳನ್ನು ಪರಿಶೀಲಿಸಿ ಅರ್ಥ ತಿಳಿಯಲಿಲ್ಲವೋ ಗೊತ್ತಿಲ್ಲ. ಅಂತೂ ಅವಕ್ಕೆ ಉತ್ತರ ಸಿಗಲಿಲ್ಲ!


ಅಲ್ಲ ನಮ್ಮ ಘನತೆವೆತ್ತ ಮುಖ್ಯಮಂತ್ರಿಗಳಿಗೆ-

ಜಾತ್ಯತೀತತೆ ಅಂದರೆ ಗೊತ್ತಿಲ್ಲ,

ರಾಜಧರ್ಮ ಗೊತ್ತಿಲ್ಲ,

ಲಕ್ಷ್ಮಣರೇಖೆ ಗೊತ್ತಿಲ್ಲ!

ಹಾಗಾದರೆ ಅವರಿಗೆ ಗೊತ್ತಿರುವುದು ಏನು?



ಯಾರು ಸೂಪರ್ ಪವರು? ವಿಸೀನಾ? ಮುಖ್ಯ ಮಂತ್ರೀನಾ? ಎನ್ನುವುದು! ಇದನ್ನು ಸನ್ಮಾನ್ಯರೇ ಇತ್ತೀಚಿನ ಪ್ರಹಸನದಲ್ಲಿ ಬಹಿರಂಗಗೊಳಿಸಿದ್ದಾರೆ.

ಈ ಪ್ರಹಸನ ನಡೆದದ್ದಾದರೂ ಹೇಗೆ?

ಮೈಸೂರು ಮುಕ್ತ ವಿಶ್ವವಿದ್ಯಾನಿಲಯದ ಹಲವು ಹಂಗಾಮಿ ನೌಕರರನ್ನು ಕೆಲಸದಿಂದ ತೆಗೆದು ಹಾಕಲಾಗಿತ್ತು.

ಯಾಕೆ ತೆಗೆದು ಹಾಕಿದರು? ಇದು ಕಾನೂನು ವಿರುದ್ಧ ಕ್ರಮವೆ?

ಯಾವುದೇ ರೋಸ್ಟರ್ ಪದ್ಧತಿಯನ್ನು ಅನುಸರಿಸದೆ ಅವರ ಆಯ್ಕೆ ಮಾಡಲಾಗಿತ್ತಂತೆ. ಹಿಂದಿನ ಕುಲಪತಿಗಳಿಗೆ ಅದೇನೋ ಜಾತಿ ವಾತ್ಸಲ್ಯ. ಅದರಲ್ಲೇನೂ ಆಶ್ಚರ್ಯ ಇಲ್ಲ ಬಿಡಿ. ಅನೇಕರಿಗೆ ಈ ಜಾತಿ ಅನ್ನೋದು ಮನುಷ್ಯನಿಗೆ ಚರ್ಮ ಇದ್ದಂತೆ. ಅದನ್ನ ಬೇರ್ಪಡಿಸೋಕೆ ಸಾಧ್ಯವೇ ಇಲ್ಲ, ಅವರೂ ಅದರ ಆಧಾರದ ಮೇಲೆ ಇಂತಹ ಉನ್ನತ ಹುದ್ದೆ ಗಿಟ್ಟಿಸಿದವರು ಅಂತ ಕಾಣುತ್ತೆ, ತಮ್ಮ ಅಧಿಕಾರಾವಧಿಯಲ್ಲಿ ಜಾತಸ್ಥರನ್ನೆಲ್ಲ ಒಳಕ್ಕೆ ನುಗ್ಗಿಸಿದ್ದರಂತೆ. ಅಂತಹವರನ್ನೆಲ್ಲ ಹೊಸದಾಗಿ ಬಂದ ಕುಲಪತಿಗಳು ಕಿತ್ತು ಎಸೆದರಂತೆ. ಆ ನೌಕರರು ಮುಷ್ಕರ ಹೂಡಿದರು.

ಇತ್ತೀಚೆಗೆ ಘನತೆವೆತ್ತ ಮುಖ್ಯಮಂತ್ರಿಗಳು ಮೈಸೂರಿಗೆ ತಮ್ಮ ಪಾದ ಬೆಳೆಸಿದಾಗ ಈ ವಿಷಯವನ್ನೆಲ್ಲ ಸಾಂಗತವಾಗಿ ವಿವರಿಸಲಾಯಿತಂತೆ. ತಮ್ಮ ಆಡಳಿತದ ಅವಧಿಯಲ್ಲಿ ನೂರಾರು ಜನರಿಗೆ ತೊಂದರೆಯಾಗಿದೆ ಎಂದರೆ ಏನು ಅರ್ಥ? ಪತ್ರಿಕೆಗಳು ತಮ್ಮನ್ನು 'ದೊರೆ', 'ರಾಜ', 'ಅರಸು' ಎಂದೆಲ್ಲ ಸಂಬೋಧಿಸುತ್ತಿರುವಾಗಲೂ ಇಂತಹ ಅನ್ಯಾಯ ನಡೆಯಬಹುದೆ... ಕೂಡದು... ಕೂಡದು.... ದಾನಶೂರ ಕರ್ಣನ ಅಪರಾವತಾರವಾದ ಮುಖ್ಯಮಂತ್ರಿಗಳು ತಮ್ಮ ಪಾದಧೂಳಿನಿಂದ ಮುಕ್ತ ವಿಶ್ವವಿದ್ಯಾನಿಲಯದ ಆವರಣವನ್ನು ಪವಿತ್ರಗೊಳಿಸಿದರು.

ಆದರೆ.....

ಅಲ್ಲಿ ಕುಲಪತಿಯೇ ಇಲ್ಲ!

ಕನಲಿ ಕೆಂಡ ಆದರು ಮುಖ್ಯಮಂತ್ರಿಗಳು.

ಅವತ್ತು ಭಾನುವಾರ. ಇರಬಹುದು. ಸರ್ಕಾರಿ ನೌಕರ ಎಂದರೆ ದಿನದ ಇಪ್ಪತ್ನಾಲ್ಕು ಗಂಟೆಯೂ ಸರ್ಕಾರಿ ನೌಕರನೇ. ಮುಖ್ಯ ಮಂತ್ರಿಯೇ ಊರ ಬಾಗಿಲಿಗೆ ಬಂದಿರುವಾಗ ದೈನೇ ಯಂತೆ ನಿಂತಿರಬಾರದೆ ಕುಲಪತಿ. ಹಿಂದಿನವರು ಹೀ ಮಾಡುತ್ತಿದ್ದುದನ್ನು ಕಂಡಿಲ್ಲವೆ ಅವರು?

'ಕರೆಸ್ರಿ ಆಯಮ್ಮನ್ನ' ಗರ್ಜಿಸಿದರು ಅವರು.

ಪಾಪ ಆಯಮ್ಮ ಯಾವುದೋ ದೇವರ ಪೂಜೆ ಮಾಡುತ್ತಾ ಕುಳಿತಿತ್ತಂತೆ. ಅಮೂರ್ತ ದೇವರಿಗೆ ಹೀ ಹರಕೆ ಹೊರೋದಕ್ಕಿಂತ ಈ ಮೂರ್ತ ದೇವರಿಗೆ ಹೊದ ವುದರಿಂದ ಆಯುರಾರೋಗ್ಯ ಅಲ್ಲದಿದ್ದರೂ ಐಶ್ವರ್ಯ

ಅಣಕ

ಎಚ್.ಎಲ್. ಕೇಶವಮೂರ್ತಿ

ವಂತೂ ದೊರಕುತ್ತದೆ ಎಂದು ತಿಳಿದಿರಲಿಲ್ಲವೆಂದು ಕಾಣು ಮುಖ್ಯಮಂತ್ರಿಗಳು ಹೇಳಿ ಕಳ್ಸಿದಾರೆ ಅಂದ ತಕ್ಷ ಪೂಜೆ ಅರ್ಧಕ್ಕೆ ಬಿಟ್ಟು ಕೆಟ್ಟೆನೋ ಬಿಟ್ಟನೋ ಅಂ ಬರಬರ ಬಂದರಂತೆ.

'ಯಾರಮ್ಮ ನೀನು?'

'ಕುಲಪತಿ.'

'ಯಾವ ಕುಲಗೆಟ್ಟ ಪತಿಯಮ್ಮ ನೀನು. ಇವರನ್ನೆ ಒಳಕ್ಕೆ ಸೇರಿಸಿಕೊ.'

'ಕಾನೂನಿನಲ್ಲಿ ಅವಕಾಶ ಇಲ್ಲ.'

ಒಳ್ಳೆ ಪಂಚಾಯಿತಿ ಆಯಿತಲ್ಲ ಈ ಯಮ್ಮಂದು ಕಾನೂನಿನಲ್ಲಿ ಅವಕಾಶ ಇದ್ದರೆ ಕೋರ್ಟಿಗೆ ಹೋಗೋರು ಅದು ಇಲ್ಲ, ನನ್ನ ಹತ್ತಿರ ಬಂದಿದಾರೆ.

'ಕಾನೂನುಗೀನೂನೂ ಇರ್ಲಿ, ನಾನೂ ಅವರನ್ನ ಕಂಡಿದೀನಿ. ಇವರ್ನೆಲ್ಲ ಸೇರಿಸ್ಕಳಿ.'

ಕುಲಪತಿಯದ್ದು ಮತ್ತೆ ಅದೇ ರಾಗ. ಮುಖ ಮಂತ್ರಿಯೇ ಕಾನೂನು ಅಲ್ಲವೆ? ಆಕೆ ಕೇಳಲು ಸಿದ್ಧಳೇ ಅವಳು ಕುಲಪತಿಯೇ ಇರಬಹುದು, ಆದರೂ ಹೆ ತಾನೆ. ಯಃಕಶ್ಚಿತ್ ಹೆಂಗಸಿನಿಂದ ಇಂತಹ ಉದ್ಧಟತನವೇ.

ಮಹಿಳೆಯರನ್ನು ಮಂತ್ರಿ ಮಂಡಳದಿಂದ ದೂ ಇಟ್ಟದ್ದಕ್ಕೆ ಯಾರು ಯಾರೋ ಏನೇನೋ ಹರ್ಕೊಂಡ ಸದ್ಯ ಅವರನ್ನು ದೂರ ಇಟ್ಟದ್ದೇ ಒಳ್ಳೆಯದಾಯ್ತು. ಮಂ ಮಂಡಳಕ್ಕೆ ಸೇರಿಸಿಕೊಂಡಿದ್ರೆ ಇವತ್ತಿನಂತೆಯೇ ಅದೇನ ತರಲೆ ತಾಪತ್ರಯ ತಂದಿಡುತ್ತಿದ್ದರೋ ಎಂಬುದೆಲ್ಲ ಕ್ಷಣ ಮಾತ್ರದಲ್ಲಿ ಮನಸ್ಸಿನಲ್ಲಿ ಬಂದು ಹೋಯಿತು.

" !?"

"ನಾಚಿಗೊಬ್ಯಾಡ ತೇಳಕ್ಕ."

"ನಾನ್ಯಾಕೆ ನಾಚಿಗಳನ, ಏನು ಮಾಡಿದ ಅಂತ ಯೋಚನೆ ಮಾಡ್ತಯಿದ್ದೆ ಕಂದ್ಯ."

"ತದಿ ನಮ್ಮ ದ್ವಡಪ್ಪನ ಕೇಳನ. ಯಾಕೆ ಅಂದ್ರೆ ಈ ಕುಮಾರಸ್ವಾಮಿ ನಮ್ಮ ದ್ವಡಪ್ಪನಿಗೆ ಮೂರನೆ ಮಗಿದ್ದಂಗೆ. ದ್ವಡಪ್ಪ ಕುಮಾರಸ್ವಾಮಿ ಮಾಡಿರೊ ವಳ್ಳೆ ಕ್ಯಲಸ ಹೇಳು ಕಂದ."

"ಮುಕ್ಯಮಂತ್ರಿಯಾದೋನ್ನ ಜನ ನೋಡದೇ ಕಷ್ಟ ಆತ್ತು. ಅಂತದ್ರಲ್ಲಿ ಸಾಮಾನ್ಯ ಜನ್ರ ಮನಿಗೆ ಬಂದು ಮಲಿನುಗ್ತನೆ ಅಂದ್ರೆ ಅವುನು ವಳ್ಳೆ ಇವುನೆಯ ಕಂದ್ಯ" ಅಂದ ಕಾಳಮಾವ.

"ನೋಡೋ ಉಗ್ರಿ, ನಮ್ಮ ದ್ವಡಪ್ಪನಂಥೋರೆ ಹಿಂಗೆ ಮಾತಾಡಿದ್ರೆ ಇನ್ನು ನಮ್ಮ ರಾಜ್ಯದ ಪ್ರಾಬ್ಲಂ ಸಾಲ್ವ್ ಆದವೇನೊ. ನೋಡು ದ್ವಡಪ್ಪ ಕುಮಾರಸ್ವಾಮಿ ಆಪ್ಟರಾಲ್ ನನ್ನ ನಿನ್ನಂಥೋನು. ಯಮ್ಮೆಲ್ಲೆ ಆದ. ಅದು ನಾವು ಓಟು ಕೊಡೋವತ್ತಿಗೆ, ನಾವು ಓಟು ಮಾಡಿ ಅವುನು ಗೆದ್ದ. ಅಂದ್ರೆ ಗೆದ್ದೋನು ದ್ವಡ್ಡೋನೊ, ಓಟು ಮಾಡಿದೋನು ದೊಡ್ಡೋನೊ ಹೇಳು?"

"!?"

"ಓಟು ಮಾಡೋನೆ ದೊಡ್ಡೋನು. ಯಾಕೆಂದ್ರೆ ಡೆಮೋಕ್ರಸೀಸ್ ದೆವಮಾಕ್ರಸಿ ಅಂದ್ರೇ ಪ್ರಜಾಪ್ರಭುತ್ವ. ಪ್ರಜಾಪ್ರಭುತ್ವದಲ್ಲಿ ಓಟು ಮಾಡೋನೆ ನಾಯಕ. ಓಟು ಮಾಡಿಸಿಗಳೋನು ಸೇವಕ. ಯಾಕೆ ಅಂದ್ರೆ ಓಟು ತಗೊಂಡ ಮೇಲೆ ಅವುನು ನಮ್ಮ ಸೇವೆ ಮಾಡಬೇಕಾಯ್ತದೆ, ಜೊತೆಗೆ ಆಳೊ ಜವಾಬ್ದಾರಿನೂ ಇರತದೆ. ಅಂದ್ರೆ ಪಸ್ಟು ಸರವಿಸ್ಸು ಆಮ್ಯಾಲೆ ರೂಲಿಂಗು. ನಿನ್ನ ಸೇವೆ ಮಾಡೋನು ನಿನ್ನ ಮನಿಗೆ ಬಂದು ಮನಿಗಿದ್ರೆ, ಆದ್ಯಂಗೆ ನಿನಗಿಂತ ದೊಡ್ಡೊನಾಯ್ತನೆ? ಕಮಾನ್ ಟೆಲ್ ಮಿ."

"ಹೋಗ್ಲ ಅತ್ತಗೆ ತಲಿಯಲ್ಲ ಮಾತಾಡಬ್ಯಾಡ."

"ದ್ವಡಪ್ಪನಿಗೆ ಆನ್ಸರ್ ಮಾಡಕ್ಯಾಯ್ತಾಯಿಲ್ಲ."

"ಹೋಗ್ಲಿ ಬುಡ್ಯ."

"ಒಳ್ಳೆ ಮಾತೇಳಿದೆ ಕಣಕ್ಕ. ಇವತ್ತು ಇಡೀ ಕರ್ನಾಟಕ ದೇವೇಗೌಡನ ಮಕ್ಕಳ ಆಡಳಿತ ನೋಡಿ ಹೋಗ್ಲಿ ಬುಡ್ರಿ ಅತ್ತಗೆ ಅಂತಾ ಅವುರೆ."

"!?"

'ಅಯ್ಯೋ ಹೆಂಗ್ಸಾಗಿ ಹಿಂಗೆಲ್ಲ ಮಾಡಬಾರದು. ಅವರನ್ನ ಸೇರಿಸ್ಕಳಿ.'

'ಕಾನೂನಿನಲ್ಲಿ....!'

'ಅಮ್ಮೋ ನಿನ್ ಕಾನೂನ ಅಲ್ಲಿರೋ ಕಸದ ಬುಟ್ಟಿಗೆಸಿ.'

ಅದಕ್ಕೂ ಆಕೆ ಜಗ್ಗಲಿಲ್ಲ. 'ಕಾನೂನು...' ಅನ್ನೋದು ಬಿಡಲಿಲ್ಲ. ಏನು ಮಾಡಬೇಕು ಮುಖ್ಯಮಂತ್ರಿ?

'ಅವಳನ್ನೇನು ಕೇಳ್ತೀರ. ಒಳಕ್ಕೆ ಹೋಗಿ. ಬಿಡಲಿಲ್ಲ ಅಂದ್ರೆ ಬೇಗ ಜಡೀರಿ' ಛೇ.... ಎಂತಹ ಅದ್ಭುತವಾದ ಸಲಹೆ!

ಇವರೇನೋ ಇಲ್ಲಿ ಹೀಗಂದು ಹೋಗಿಬಿಡ್ತಾರೆ. ಆದರೆ ಪೊಲೀಸಿನವರು ಬೇಗ ಜಡಿಯೋಕೆ ಹೋದರೆ ಅಮಗೇ ಹಿಡಿದು ಜಡೀತಾರೆ.

ಇದಕ್ಕೂ ನಮ್ಮ ಕಾನೂನು ಪರಿಪಾಲಕ ಮುಖ್ಯಮಂತ್ರಿಯ ಬಳಿ ಮದ್ದು ಇತ್ತು!

ಏನು ಮದ್ದು?

'ನಾಳೆಯಿಂದ ಪೊಲೀಸ್ ರಕ್ಷಣೆ ತೆಗೆದುಬಿಡಿ!'

ಇಲ್ಲಿಗೆ ಒಂದು ಅಂಕದ ನಾಟಕ ಮುಗಿಯಿತು. ಮುಂದಿನ ಸೂತ್ರದಾರರು ಮಾನ್ಯ ವಿಧಾನಸಭೆ ಸದಸ್ಯರಾದ ಹೆಚ್.ಎನ್. ಶಂಕರಲಿಂಗೇಗೌಡ ಅವರು. ಹಂಗಾಮಿ ನೌಕರರನ್ನು ಮಾರನೆ ಬೆಳಿಗ್ಗೆ ಕರೆತಂದು ಕುರ್ಚಿಯಲ್ಲಿ ಕೂರಿಸಿದರು!

ಕೆಲಸ?

ಇಲ್ಲ!

ಈ ಎಲ್ಲ ಸಂಗತಿಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ ಅವರ ಬಾಯಿಂದ ಹೊರಬಿದ್ದದ್ದು-ನನಗಿಂತ ಸೂಪರ್ ಸೂಪರ್ ಪವರ್ರಾ....?

ಸ್ವಾಮಿ, ತಾವೇ ಸೂಪರ್ ಪವರ್ರು! ಇನ್ನೂ ಬೇಕಿದ್ದರೆ ಸೂಪರ್ ಸೂಪರ್ ಪವರ್ರು! ಗಣಿತದಲ್ಲಿ ಸೂಪರ್ ಪವರ್ ಟು ದಿ ಪವರ್ ಆಫ್ ಇನ್‌ಫಿನಿಟಿ ಅಂತಾರಲ್ಲ ಅದೇ ಆಗಿ! ಆದರೆ ಹಂಗಾಮಿ ನೌಕರರ ಬಗ್ಗೆ ನಮಗೂ ಮರುಗಿರುವಂತೆಯೇ ಕನಿಕರ ಇದೆ.

ಎಲ್ಲ ಹಂಗಾಮಿ ನೌಕರರಿಗೂ ಕೆಲಸ ಕೊಡಬೇಕೆಂದಿದ್ದರೆ ಕಾನೂನಿನ ತಿದ್ದುಪಡಿ ಮಾಡಿ.

ಕುಲಪತಿ ದುರಹಂಕಾರದಿಂದ ನಡೆದಿದ್ದರೆ ಕಾನೂನು ರೀತಿ ಶಿಕ್ಷೆ ಕೊಡಿ.

ಇದಾವುದನ್ನು ಮಾಡದೆ ಗೂಂಡಾ ರೀತಿ ವರ್ತಿಸಿದರೆ ಎಂತಹವರಿಗಂತೂ ಅನಾಗರಿಕ ಮನುಷ್ಯ ಈತ ಅನ್ನಿಸುತ್ತೆ ಇದು ಪ್ರಜಾತಂತ್ರವೋ, ಗೂಂಡಾ ರಾಜ್ಯವೋ ಎನ್ನುವ ಅನುಮಾನ ತರುತ್ತೆ.


ಇದು ತಪ್ಪು ಮನಸ್ಥಿತಿ ಎನ್ನುತ್ತೀರಾ ಸೂಪರ್ ಪವರ್ ಟು ಇನ್‌ಫಿನಿಟಿ ಮುಖ್ಯಮಂತ್ರಿಗಳೇ....

ಮರೆಯುವ ಮುನ್ನ



ಪಿ. ಲಂಕೇಶ್ ಡಿಸೆಂಬರ್ 4, 1998

ಡಾರ್ಲಿಂಗ್



ಮೇಲುನೋಟಕ್ಕೆ ಅಷ್ಟೇನೂ ಸುಂದರಿಯಲ್ಲ, ಆದರೆ ದಿಟ್ಟಿಸಿ ನೋಡಿದರೆ, ಮಾತಾಡಿಸಿದರೆ ಇವಳ ಆಕರ್ಷಣೆ ನಿಮ್ಮನ್ನು ಮುತ್ತುತ್ತದೆ, ಪ್ರೀತಿ ಉಕ್ಕುತ್ತದೆ, ಯಾಕೆಂದರೆ ಈಕೆ ಪ್ರೀತಿಯ ಜೀವ. ಇವಳ ಮನೆ ಪಕ್ಕದಲ್ಲೊಬ್ಬ ನಾಟಕದ ಕಂಪನಿಯ ಮಾಲೀಕ ಇದ್ದ. ಮಳೆಯಿಂದ ನೊಂದುಹೋಗಿದ್ದ. ಜನ ಈತನ ಥಿಯೇಟರಿಗೆ ಬರದಂತೆ ಹಿಡಿದ ಮಳೆ. ಗೋಳೋ ಎಂದು ಅಳುತ್ತಿದ್ದ. ಇವನನ್ನು ಸಂತೈಸಲು ಹೋಗಿ ಪ್ರೀತಿಸಿದಳು ಈಕೆ. ಎಷ್ಟು ಪ್ರೀತಿ-ಮದುವೆಯಾದೊಡನೆ ಎಲ್ಲರಿಗೆ ಅವನ ನಾಟಕ ವಿವರಿಸಿದಳು. ಎಲ್ಲೆಲ್ಲೂ ಪ್ರಚಾರ ಮಾಡುವಳು, ಮಳೆ ಬಾರದಂತೆ ದೇವರಿಗೆ ಪ್ರಾರ್ಥನೆ ಸಲ್ಲಿಸುವಳು. ಆತ ಮಳೆ ಬರಲಿ, ಬಾರದಿರಲಿ ಗೋಳಾಡುತ್ತಲೇ ಇರುವ ಮನುಷ್ಯ. ದೂರದೂರಿಗೆ ಹೋದಾಗ ಅವನು ಕಾಯಿಲೆಯಿಂದ ಸತ್ತ ಸುದ್ದಿ ಬಂತು. ಇಡೀ ಊರು ಮರುಗುವಂತೆ ಅತ್ತಳು.

ಅಳುತ್ತ ಹೋಗುತ್ತಿದ್ದಾಗ ಒಬ್ಬ ಸಮಾಧಾನ ಹೇಳಿದ. ಆತನ ತಣ್ಣನೆಯ, ಸಾಂತ್ವನದ ಧ್ವನಿ ಅವಳ ಕಿವಿಯಲ್ಲಿ ಮೊಳಗತೊಡಗಿತು. ಮರದ ವ್ಯಾಪಾರಿಯಾಗಿದ್ದ ಆತನ ಧ್ವನಿಗಾಗಿ ಕಾತರಿಸಿದಳು. ಮರದ ವ್ಯಾಪಾರಿ ಸಿಕ್ಕ. ಅವಳನ್ನು ಪ್ರೀತಿಸಿ ಮದುವೆಯಾದ. ಅವಳ ಜೀವನವೆಲ್ಲ ಮರಗಳ ವಿಷಯದಲ್ಲೇ ಮುಳುಗಿತು. ಗಂಡನ ವ್ಯಾಪಾರದ ವಿವರ, ವಿವಿಧ ರೀತಿಯ ಮರಗಳು, ಅವುಗಳ ಬೆಲೆ ಎಲ್ಲ ಕಲಿತು ಗಂಡನಿಗೆ ನೆರವಾದಳು. ಅಂಗಳ, ಮನೆ ಬಿಟ್ಟು ಎಲ್ಲಿಗೂ ಹೋಗಲೊಲ್ಲಳು. ಜನ ನಾಟಕ ನೋಡಲು ಕರೆದರೆ, "ಅದರಲ್ಲೇನಿದೆ? ಅದಕ್ಕಾಗಿ ಹಣ ಯಾಕೆ ಪೋಲು ಮಾಡಬೇಕು?" ಅನ್ನುವಳು.



ಮರದ ವ್ಯಾಪಾರಿಯೂ ಜ್ವರ ಬಂದು ತೀರಿಕೊಂಡ. ಮತ್ತೆ ಅತ್ತು ಕಣ್ಣೀರ ಕೋಡಿ ಹರಿಸಿದಳು; ಏಕಾಂಗಿಯಾಗಿ ದುಃಖಿಸಿದಳು. ಒಮ್ಮೆ ಪಶುವೈದ್ಯನೊಬ್ಬ ದೊರೆತ. ಆತ ಹೆಂಡತಿಯೊಂದಿಗೆ ಜಗಳವಾಡಿ ನೊಂದಿದ್ದ. ಅವನಿಗೆ ಸಮಾಧಾನ ಹೇಳಲೆತ್ನಿಸಿ ಅವನನ್ನೇ ಪ್ರೀತಿಸಿದಳು. ಪಶುವೈದ್ಯನ ವೃತ್ತಿಯನ್ನು ಅಭ್ಯಸಿಸಿ ಅವನಿಗೆ ನೆರವಾದಳು. ತನ್ನನ್ನು ತಾನು ಪೂರ್ತಿಯಾಗಿ ಕೊಟ್ಟುಕೊಂಡು ಥಿಯೇಟರ್ ಮಾಲೀಕ, ಮರದ ವ್ಯಾಪಾರಿಯನ್ನು ಮರೆತಳು. ಆದರೆ ಪಶುವೈದ್ಯ ತನ್ನ ಹೆಂಡತಿಯೊಂದಿಗೆ ರಾಜಿ ಮಾಡಿಕೊಂಡು ಹೊರಟುಹೋದ. ಈಕೆ ಮತ್ತೆ ಏಕಾಂಗಿ.

ವಯಸ್ಸು ಅವಳನ್ನು ಮಂಕಾಗಿಸಿತ್ತು, ಅದಕ್ಕಿಂತ ಹೆಚ್ಚಾಗಿ ಒಬ್ಬಂಟಿತನ ಅವಳನ್ನು ತಿಂದು ಹಾಕಿತ್ತು, ಪ್ರೀತಿ ಇಲ್ಲದೆ ಬದುಕಲಾರದ ಹೆಂಗಸು. ಎಷ್ಟೋ ವರ್ಷ ಹೀಗೆ ಒಣಗುತ್ತ ಹೋದಳು. ಒಂದು ದಿನ ಪಶುವೈದ್ಯ ಬಂದ. ತನ್ನ ಮಗನನ್ನು ಆಕೆಯ ಬಳಿ ಬಿಡುವುದಾಗಿ ಹೇಳಿದ. ಈಕೆ ಖುಷಿಯಿಂದ ಆತನನ್ನು ತನ್ನ ಮಗನಂತೆ ನೋಡಿಕೊಂಡು ಪ್ರೀತಿಸಿ ಚೇತರಿಸಿಕೊಂಡಳು. ಆ ಹುಡುಗನ ಜಗತ್ತು ಆಕೆಯದಾಯಿತು. ಆದರೆ ಆತನೂ ಹೊರಟುಹೋದ.

ಚೆಕಾವ್‌ನ 'ಡಾರ್ಲಿಂಗ್' ಎಂಬ ಕತೆ ನನ್ನ ಮೆಚ್ಚಿನದು. ಮತ್ತೆ ಮತ್ತೆ ನೆನಪಾದ್ದರಿಂದ ಜ್ಞಾಪಕದಿಂದ ಹೇಳಿದ್ದೇನೆ. ಪ್ರೀತಿ ಇಲ್ಲದ ಜೀವ ಎಷ್ಟು ವಿಧದಲ್ಲಿ ಪ್ರೀತಿ ಕಾಣುತ್ತದೆ. ಒಲೆಂಕಾ ಎಂಬ ಈಕೆ ಎಂಥ ಪತಿವ್ರತೆ....

ಸನ್ನಡತೆ-ಸಂಪ್ರದಾಯ



ಮೊನ್ನೆ ಕಂಡೆ. ರಾತ್ರಿ ಎಂಟರವರೆಗೆ ಮಾತಾಡುತ್ತಿದ್ದ ಹುಡುಗಿ ಮಲ್ಲೇಶ್ವರಕ್ಕೆ ರಿಕ್ಷಾದಲ್ಲಿ ಹೋಗಲು ಇಷ್ಟಪಡಲಿಲ್ಲ. 'ಬಸ್ ರಿಕ್ಷಾಕ್ಕಿಂತ ಸುರಕ್ಷಿತ' ಅಂದಳು. ಆಕೆ ಮನೆಗೆ ಬೇಗ ಹೋಗಬೇಕಿತ್ತು; ಬೇಗ ಹೋಗಲು ಆಟೋರಿಕ್ಷಾ ಅನುಕೂಲ. ಆದರೆ ಸ್ವಲ್ಪ ವೇಳೆ ಹಾಳಾದರೂ ರಿಕ್ಷಾಕ್ಕಿಂತ ಬಸ್ ಅವಳಿಗೆ ಇಷ್ಟವಾಗಿತ್ತು.

ನಿಮಗೆ ಗೊತ್ತು, ಎಲ್ಲ ರಿಕ್ಷಾ ಡ್ರೈವರ್‌ಗಳೂ ಕೆಟ್ಟವರಲ್ಲ. ರಿಕ್ಷಾಗಳ ಹಿಂದಿನ ಕತೆ ಕೂಡ ವಿಚಿತ್ರ. ಬೆಳಗ್ಗೆ ಹೊರಟ ಅನೇಕ ರಿಕ್ಷಾದವರು ಸಂಜೆಯವರೆಗೆ ನಡೆಸುತ್ತಾರೆ; ಆತ ಮನೆಯಿಂದ ಹೊರಟನೆಂದರೆ ನಗರದ ಯಾವ ಭಾಗದಲ್ಲಿ ಆತನಿದ್ದಾನೆಂಬುದು ಮನೆಯವರಿಗೆ ಗೊತ್ತಿರುವುದಿಲ್ಲ. ಸಂಜೆಯ ಹೊತ್ತಿಗೆ ಸುಸ್ತಿನಿಂದ ಬೆಂಕಿಯಾಗಿರುತ್ತಾನೆ. ಮಾತಾಡುವ ತಾಳ್ಮೆ ಕೂಡ ಇರುವುದಿಲ್ಲ.

ಆದರೆ ರಿಕ್ಷಾದವರಿಗೆ ಕೆಟ್ಟ ಹೆಸರಿದೆ. ಹೆಂಗಸು ಮನೆ ಸೇರಲಿಲ್ಲ, ಮುದುಕನ ಮೇಲೆ ದರೋಡೆ, ರಿಕ್ಷಾದ ಗೂಂಡಾಗಳಿಂದ ಹಲ್ಲೆ... ಅಷ್ಟೇ ಅಲ್ಲ, ದುರ್ನಡತೆ. ಉಡುಪಿ ಹೋಟೆಲಿನ ಮಾಣಿ ಸೆಟೆದು ನಿಂತು ಇಡ್ಲಿ, ವಡೆ, ಮಸಾಲೆ ಎಂದು ಮಗ್ಗಿ ಒಪ್ಪಿಸುವುದಕ್ಕಿಂತ ಹೆಚ್ಚಿನ ಎಗ್ಗು, ಸಣ್ಣತನ ಅನೇಕ ರಿಕ್ಷಾವಾಲಾಗಳಲ್ಲಿರುತ್ತದೆ. ಇದರಿಂದ ಏನಾಗುತ್ತೆ ಗೊತ್ತೆ-ಈತನ ವ್ಯಾಪಾರ ಕಮ್ಮಿಯಾಗುತ್ತೆ, ಈತ ಒಳ್ಳೆಯವನಾಗಿದ್ದರೂ ಈತನ ಬಗ್ಗೆ ಸಂದೇಹ ಮೂಡುತ್ತದೆ.

ಸನ್ನಡತೆಯ ಸಂಪ್ರದಾಯವೊಂದು ಇದ್ದಿದ್ದರೆ ಹೀಗಾಗುತ್ತಿರಲಿಲ್ಲ. ಹೆಣ್ಣು ಮಗಳು ಬಂದರೆ, "ಅಮ್ಮ, ಎಲ್ಲಿ ಬಿಡಲಿ?" ಎನ್ನುವುದು ಸಂಪ್ರದಾಯವಾಗಿದ್ದರೆ ಅದನ್ನು ಹೇಳಲು ಪ್ರಯಾಸಪಡಬೇಕಾಗಿರಲಿಲ್ಲ; ಹಾಗೆಯೇ ಹೆಣ್ಣುಮಗಳು, "ಅಯ್ಯ, ಮಲ್ಲೇಶ್ವರಕ್ಕೆ" ಎನ್ನುವುದು ಸಂಪ್ರದಾಯವಾಗಿದ್ದರೆ ಆಕೆಗೂ ಕಷ್ಟವಾಗುತ್ತಿರಲಿಲ್ಲ. ಅದಕ್ಕಿಂತ ಹೆಚ್ಚಾಗಿ ಸುರಕ್ಷತೆಯ ಸಂಪ್ರದಾಯ. ನನ್ನ ರಿಕ್ಷಾದೊಳಕ್ಕೆ ಬಂದವರ ಕ್ಷೇಮ, ನೆಮ್ಮದಿ, ತಲುಪುವುದು ಇವೆಲ್ಲವೂ ನನ್ನ ಹೊಣೆ ಮತ್ತು ಹಕ್ಕು ಎನ್ನುವುದು ರಿಕ್ಷಾದವನ ಹೆಮ್ಮೆಯ ನಂಬಿಕೆ ಮತ್ತು ಸಂಪ್ರದಾಯ ಆಗಿದ್ದರೆ....

ಆಗಿದ್ದರೆ... ಈ ಹುಡುಗಿ ಬಸ್ಸಿನ ಕಂಡಕ್ಟರನ ದುರ್ನಡತೆಯನ್ನು ಸಹಿಸಿ ರಿಕ್ಷಾವನ್ನು ತಿರಸ್ಕರಿಸುತ್ತಿರಲಿಲ್ಲ.

ಬುದ್ಧ



ನನ್ನ ಲೇಖನವೊಂದನ್ನು ಪಿಯುಸಿ ಎರಡನೆ ವರ್ಷಕ್ಕೆ ಪಠ್ಯವಾಗಿ ಇಟ್ಟಿದ್ದಾರಂತೆ. ಬುದ್ಧನನ್ನು ಕುರಿತ ನನ್ನ ಲೇಖನ 'ಮೋಕ್ಷ ಹುಡುಕುತ್ತಾ ಪ್ರೀತಿಯ ಬಂಧನದಲ್ಲಿ' ಎಂಬ ಶೀರ್ಷಿಕೆಯದು. ಅದರಲ್ಲಿನ ಸರಳ ಸಂಗತಿಗಳೆರಡನ್ನ ಅಧ್ಯಾಪಕರು ವಿವರಿಸಲಿಲ್ಲವಂತೆ. ಆದ್ದರಿಂದ ಈ ಪತ್ರ ಕೊಟ್ಟು ವಿವರಿಸುತ್ತೇನೆ.

ಪಠ್ಯಪುಸ್ತಕದ 98 ನೇ ಪುಟದ ಮೂರನೆಯ ಪ್ಯಾರಾದಲ್ಲಿ ಗೌತಮನ ಮಾನವತ್ವವನ್ನು ವಿವರಿಸುವ ನೀವು, ಗೌತಮನೇ ಹೇಳುವಂತೆ, 'ನೀನು ಈ ಭೂಮಿಯಲ್ಲಿ ಸ್ವರ್ಗವನ್ನು ಕಾಣಬೇಕೆಂದಿದ್ದರೆ ಈ ಜಿಲ್ಲೆಯ ಗಿರಿಜನರ ಹೆಣ್ಣುಮಕ್ಕಳನ್ನು ನೋಡು'-ಎಂದು ಹೇಳಬಲ್ಲವನಾಗಿದ್ದ.

ನಿಮ್ಮ, ಅಲ್ಲಲ್ಲ... ಗೌತಮನ ಈ ಹೇಳಿಕೆ ನನಗೆ ಅರ್ಥವಾಗಲಿಲ್ಲ. ಈ ಬಗ್ಗೆ ಶಿಕ್ಷಕರನ್ನು, ನನ್ನ ಸಹಪಾಠಿಗಳನ್ನು ವಿಚಾರಿಸಿದರೂ ಸಮರ್ಪಕವಾದ ಉತ್ತರ ದೊರೆತಿಲ್ಲ. ನಿಮ್ಮಿಂದ ಮಾತ್ರ ತೃಪ್ತಿಕರವಾದ ಉತ್ತರ ಪಡೆಯಬಲ್ಲೆನೆಂಬ ವಿಶ್ವಾಸ ಹೊಂದಿದ್ದೇನೆ.

ಇದೇ ಲೇಖನದ (ಪಠ್ಯಪುಸ್ತಕದ 99 ನೇ ಪುಟ) ಬಗ್ಗೆ ಇನ್ನೊಂದು ಸಂದೇಹ.

ಆಡಳಿತಗಾರನಾಗಿ ಗೌತಮ ಏನನ್ನಾದರೂ ಸಾಧಿಸಲು ಆಗುತ್ತಿರಲಿಲ್ಲವೇ? ಇದಕ್ಕೆ ನಿಮ್ಮ ಸಣ್ಣ ಉತ್ತರ 'ಭಾರತಕ್ಕೆ ಸ್ವಾತಂತ್ರ್ಯ ಬಂದ ದಿನ ನೆಹರೂ ಪಟೇಲರೆಲ್ಲ ಸಂಭ್ರಮದಿಂದ ಕೂಗಾಡುತ್ತಿದ್ದ ದಿನ ಗಾಂಧೀಜಿ ಕೊಲ್ಕತ್ತಾದಲ್ಲಿ ಒಬ್ಬಂಟಿಯಾಗಿ ಓಡಾಡುತ್ತಿದ್ದರು' ಎಂದಿದೆ.



ಗೌತಮ ಆಡಳಿತಗಾರನಾಗಿ ಏನನ್ನಾದರೂ ಸಾಧಿಸುವುದಕ್ಕೂ, ಸ್ವಾತಂತ್ರ್ಯ ಸಿಕ್ಕದಿನ ನೆಹರೂ ಪಟೇಲರೆಲ್ಲ ಸಂಭ್ರಮದಿಂದ ಕೂಗಾಡುತ್ತಿದ್ದ ದಿನ ಗಾಂಧೀಜಿ ಕೊಲ್ಕತ್ತಾದಲ್ಲಿ ಒಬ್ಬಂಟಿಯಾಗಿ ಓಡಾಡುವುದಕ್ಕೂ ಇರುವ ಸಂಬಂಧವಾದರೂ ಏನು? ಈ ಪ್ರಶ್ನೆ ನನ್ನಲ್ಲಿ ಕೊನೆಗೂ ಪ್ರಶ್ನೆಯಾಗಿಯೇ ಉಳಿದುಬಿಡುತ್ತದೆ.

-ಓರ್ವ ವಿದ್ಯಾರ್ಥಿ

ಉತ್ತರ ಹೀಗಿದೆ:

ಬುದ್ಧ ಜ್ಞಾನ ಪಡೆದ ಮೇಲೂ ಒಣಕಲು ಮನುಷ್ಯನಾಗಿರಲಿಲ್ಲ. ಎಲ್ಲಿಯೋ ಇರುವ ಸ್ವರ್ಗದ ಬಗ್ಗೆ ಹೇಳುತ್ತಿರಲಿಲ್ಲ. ಗಿರಿಜನರ ಹೆಣ್ಣುಗಳ ಸೌಂದರ್ಯದಲ್ಲಿ ಮನುಷ್ಯನಿಗೆ ಸ್ವರ್ಗದ ಆನಂದ ದೊರೆತೀತು-ಎಂದು ಕೂಡ ಹೇಳಬಲ್ಲ ಮುಕ್ತ ಮನಸ್ಸಿನ ವ್ಯಕ್ತಿಯಾಗಿದ್ದ.

ಎರಡನೆಯ ಪ್ರಶ್ನೆಗೆ ಉತ್ತರವೇನೆಂದರೆ; ಭಾರತಕ್ಕೆ ಸ್ವಾತಂತ್ರ್ಯ ಬಂದು ನೆಹರೂ ಪಟೇಲರೆಲ್ಲ ರಾಜಕೀಯ ಅಧಿಕಾರದ ಮೂಲಕ, ಆಡಳಿತ ಯಂತ್ರದ ಮೂಲಕ ರಾಷ್ಟ್ರವನ್ನು ಮುನ್ನಡೆಸಲು ಸಿದ್ಧವಾಗಿದ್ದ ಕ್ಷಣ. ಈ ಬಗೆಯ ಅಧಿಕಾರದ ಮಿತಿ ಗಾಂಧೀಜಿಗೆ ಗೊತ್ತಿತ್ತು. ಬುದ್ಧನಂತೆಯೇ ಗಾಂಧೀಜಿ ಕೂಡ ಭಾರತೀಯ ಮನುಷ್ಯ ಕಳಚಿಕೊಳ್ಳಬೇಕಾದ ಪ್ರವೃತ್ತಿಗಳು, ದೌರ್ಬಲ್ಯಗಳು ಆಡಳಿತದ ಹಿಡಿತಕ್ಕೆ ಸಿಕ್ಕಲಾರವು ಎಂದು ನಂಬಿದ್ದರು. ಭಾರತದಲ್ಲಿ ಮತೀಯ ಹಿಂಸೆ, ಪರಸ್ಪರ ಸಂಶಯ ತುಂಬಿದ್ದಾಗ ಅಧಿಕಾರದ ವೈಭವದಲ್ಲಿ ನಾಯಕರು ಮೈ ಮರೆತಿದ್ದರು. ಅಂದರೆ, ಸಿದ್ಧಾರ್ಥ ರಾಜನಾಗಿ ಆಡಳಿತ ನಡೆಸಿದ್ದರೆ ಏನೇನು ಸಾಧಿಸಬಹುದಾಗಿತ್ತೋ ಅದಕ್ಕಿಂತ ಹೆಚ್ಚಿನದನ್ನ ಜ್ಞಾನೋದಯವನ್ನು ಹುಡುಕಿ ಹೋಗಿ ಪಡೆದಿದ್ದ. ನೆಹರೂ, ಪಟೇಲ್ ಸಿದ್ಧಾರ್ಥನ ರಾಜತ್ವ ಪ್ರತಿನಿಧಿಸಿದರೆ ಗಾಂಧೀಜಿಯ ಏಕಾಂಗಿತನ, ನೋವು ಬುದ್ಧನ ಜ್ಞಾನದ ಸ್ಥಿತಿ ಪ್ರತಿನಿಧಿಸಿತ್ತು.

ಲೈಂಗಿಕ ಶಿಕ್ಷಣದಲ್ಲಿ ಇರುವ ಸಿಲಬಸ್ ಯಾವುದು?

ಕಣ್ಣಾ ಮುಚ್ಚಾಲೆ

ತೊರಗಲ್ಲ ಜಯಲಕ್ಷ್ಮಿ, ಸಾಲಹಳ್ಳಿ

ರೇವಣ್ಣ ಮುಖ್ಯಮಂತ್ರಿಯಾದರೆ ಗೌಡರು ಆರಾಮಾಗಿ ಕಣ್ಣುಮುಚ್ಚಬಹುದಾ?

♦ ನಿಖಿಲ್ಲು, ಪಕ್ಕಿಲ್ಲು ಎಂಬ ಇನ್ನೂ ಹಲವು ತಿಕ್ಕಲು ಆಸೆಗಳಿವೆಯಂತೆ.

ಟಿ.ಯು. ಕುಮಾರ, ರಾಮದುರ್ಗ

ಕೃಷ್ಣ ಇನ್ನೊಮ್ಮೆ ಕರ್ನಾಟಕ ಮುಖ್ಯಮಂತ್ರಿ ಆಗಬಹುದೇ?

♦ ಅವರು ತಿನ್ನದೇ ಬಿಟ್ಟು ಹೋಗಿದ್ದನ್ನು ಧರ್ಮ್. ಕುಮಾರ, ಯಡ್ಡಿ ಮುಕ್ಕಿ ಮುಗಿಸಿದ್ದಾರೆ. ಇನ್ನು ಇಲ್ಲೇನು ಉಳಿದಿದೆ ಅಂತ ಕೃಷ್ಣ ಬರ್ತಾರೆ?

ಕವಿತಾ ಮಧುಸೂದನ್, ದಾವಣಗೆರೆ

ಕುಮಾರಸ್ವಾಮಿ-ಯಡಿಯೂರಪ್ಪಗೆ ಯಶಸ್ವಿ ಪುರುಷರನ್ನಾಗಿ ಮಾಡಲು ರಾಧಿಕಾ-ಕರಂದ್ಲಾಜೆ ಹಿಂದಿರುವರೆ?

♦ ಹಾಗೆಂದು ಹೇಳಿ ಬೆಂಗಳೂರೆಂಬ ಕಾಂಕ್ರೀಟ್ ಜಂಗಲ್‌ನಲ್ಲಿ ವನವಾಸ ಅನುಭವಿಸುತ್ತಿರುವ ಅನಿತಾ ಮತ್ತು ಈಗಾಗಲೇ ಸ್ಮಶಾನ ಸೇರಿರುವ ಅನ್ನಪೂರ್ಣಮ್ಮನವರಿಗೆ ಅವಮಾನ ಮಾಡಬೇಡಿ, ಪ್ಲೀಸ್.

ಅಬ್ದುಲ್ ರಜಾಕ್, ದೇವದುರ್ಗ

ಬಾಲಿವುಡ್ ಎದೆಗಾರ್ತಿ ಶಿಲ್ಪಾಳಿಗೆ ಯಾರು ಬೇಕಾದರೂ ಮುತ್ತಿಡಬಹುದಾ?

♦ ತಿರುಕನ ಕನಸು ಅಂದರೆ ಇದೇನೆ!

ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು

"ಮಧುರ ಯಾತನೆ" ಎಂದರೆ ಯಾವುದು?

♦ ಗಾಂಧಿನಗರದವರಿಂದ ಡಿಮ್ಯಾಂಡ್ ಕಂಡಿರುವ ಕಾಮ್ನಿಣಿ ಪರಿಸ್ಥಿತಿ!

ಕಾಳೀಹುಂಡಿ ಕೆ.ವಿ. ಶಿವಕುಮಾರ್, ಮೈಸೂರು

'ಮುಂಗಾರು ಮಳೆ' ಭಾಗ-2 ಚಿತ್ರ ತೆಗೆಯಬೇಕೆಂದಿದ್ದೇನೆ?

♦ ಹಿಂಗಾರು ಬೆಳೆ ಸಿಗಲ್ಲ ಅಂತ ಗೊತ್ತಿರಲಿ!

ಸಾಬಿಯಾ ಬೇಗಂ, ದೇವದುರ್ಗ

ಅಭ್ಯಾಸದ ವೇಳೆ ರಾಹುಲ್ ದ್ರಾವಿಡ್ ಮೂಗಿಗೆ ಪೆಟ್ಟಂತೆ?

♦ ಅಭ್ಯಾಸದಲ್ಲೇ ಹೀಗಾದರೆ ಇನ್ನು ಮ್ಯಾಚ್‌ನಲ್ಲಿ ಏನೇನಾಗಬಹುದು, ಯೋಚಿಸಿ ನೋಡಿ...

ಓದುಸಿದ್ದೇಗೌಡ ಕೆಬ್ಬೇಹಳ್ಳಿ, ಕನಕಪುರ

ಬಿಎಂಟಿಸಿ ನಿರ್ವಾಹಕರೆಲ್ಲ ತರುಣಸಾಗರರ ಅನುಯಾಯಿಗಳಾದರೆ ಹೇಗಿರುತ್ತೆ?

♦ ಕೆಬ್ಬೇಹಳ್ಳಿ ರೂಟಿನಲ್ಲಿ ಲೇಡಿ ನಿರ್ವಾಹಕಿ ಬಂದಳು ಅಂತ ಇಂಥ ರಸಿಕ ವೈರಾಗ್ಯ ಬರಬಾರದಿತ್ತು.

ಡಿ.ಎಲ್.ಶ್ವೇತಾ, ಹರಪನಹಳ್ಳಿ

ಗೋಸಮ್ಮೇಳನದಲ್ಲಿ ಎಮ್ಮೆಗಳಿಗೆ ಪ್ರವೇಶವೇ ಇಲ್ಲ, ಯಾಕೆ?

♦ ಕತ್ತೆಗೇನು ಗೊತ್ತು ಕಸ್ತೂರಿ ವಾಸನೆ?

ಪಿ.ಎನ್. ಶ್ರೀವತ್ಸ, ಬೆಂಗಳೂರು

ಅಭಿಷೇಕ್ ಬಚ್ಚನ್‌ಗೆ ಮೊದಲನೆಯ ರಾತ್ರಿ ತೃಪ್ತಿ ಸಿಗಲಿಲ್ಲವೆಂಬುದು ನಿಜವೇ....?!

♦ ಅವರಿಬ್ಬರಿಗೆ ಅದೇ ಮೊದಲನೆ ರಾತ್ರಿ ಆಗಿದ್ರೆ ತಾನೆ ಈ ಪ್ರಶ್ನೆ?

ಅಳ್ಳಿಮಾರನಹಳ್ಳಿ ಹರೀಶ್, ಕನಕಪುರ

ಎಸ್.ಎಲ್. ಭೈರಪ್ಪ 'ನಾರಾಯಣ' ದೇಗುಲದ ಪೂಜಾರಿಯಂತೆ ಹೌದಾ?

♦ ಪುರೋಹಿತಶಾಹಿಗಳ ಆ ದೇಗುಲದಲ್ಲಿ ರಾಷ್ಟ್ರಗೀತೆಗೆ ಕವಡೆ ಕಿಮ್ಮತ್ತೂ ಇಲ್ಲ.

ಬಹುಮಾನಿತ ಪ್ರಶ್ನೆ

ಡಿ.ಎಲ್. ಸುರೇಶ್, ಹರಪನಹಳ್ಳಿ

ಲೈಂಗಿಕ ಶಿಕ್ಷಣದಲ್ಲಿ ಇರುವ ಸಿಲಬಸ್ ಯಾವುದು?

♦ ಹಾಗಂತ ಅರ್ಜೆಂಟಾಗಿ ಸ್ಕೂಲ್ ಸೇರಬೇಡಿ. ಅಲ್ಲಿ ಬರೀ ಥಿಯರಿ ಇರುತ್ತೆ!

ಡಿ. ರಾಗಿಣಿ, ದೇವದುರ್ಗ

ಆರು ತಿಂಗಳಲ್ಲಿ ಪಕ್ಷದ ಶಕ್ತಿ ತೋರುಸ್ತೀನಿ ಅಂತಾ ಹೇಳಿದ್ದಾರಲ್ಲ ದೇವೇಗೌಡ್ರು?

♦ ಅವರಿಗೆ ಶಕ್ತಿ ಪಂಪ್ ಮಾಡುತ್ತಿರುವುದೇ ಅನಂತು ಅಂತ ಸುದ್ದಿ ಇದೆ.

ಡಿ.ಎಲ್. ನಾಗರಾಜು, ಹರಪನಹಳ್ಳಿ

ಮುತ್ತು ನೀಡುವಾಗ ಹೆಂಗಸರೇಕೆ ಕಣ್ಣುಮುಚ್ಚಿ ಕೊಳ್ಳುತ್ತಾರೆ?

♦ ಮಕ್ಕಳಿಗೆ ಮುತ್ತು ನೀಡುವಾಗ ಯಾಕೆ ಮುಚ್ಚಿಕೊಳ್ಳುವುದಿಲ್ಲ ಎಂದು ಚಿಂತಿಸಿದರೆ ನಿಮ್ಮ ಪ್ರಶ್ನೆಗೆ ಉತ್ತರ ಹೊಳೆಯುತ್ತೆ!

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಪುನರೂರರ ಪಂಚೆ ಎಳೆದವರ್‍ಯಾರು?

ಮೇ 16ರ ಸಂಚಿಕೆಯ ನಮ್ಮ ಪ್ರಶ್ನೆ: ಮಹಿಳೆಯರಿಗೆ ರಾತ್ರಿ ಪಾಳಿ ನಿಷೇಧ ಗೃಹಿಣಿಯರಿಗೂ ಅನ್ವಯಿಸಬಾರದೇಕೆ?

ಉತ್ತರ : ನಿಷೇಧಿಸಿದರೆ ಗಂಡ ಹೆಂಡತಿ ಜಗಳ, ಉಂಡು ಮಲಗುವ ಬದಲು ಮಲಗಿ ಏಳುವ ತನಕ


ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು : ಎಂ.ಎನ್. ಕುಮಾರಸ್ವಾಮಿ, ಮಂಡ್ಯ

ತುಪ್ಪದೂಟದವರಿಗೆ ಜನರ ಹಣ!

ಹೊಗಳಿಕೆ ತೆಗಳಿಕೆ

ಎಲ್ಲರೂ ಎಣಿಸಿದಂತೆ ಹಳ್ಳ ಹಿಡಿಯಲು ತಯಾರಾಗಿರುವ ಉಡುಪಿ ಸ್ವಾಮಿಯ ಬಡ್ಡಿ ವ್ಯವಹಾರ -ಧಮಕಿ-ಗೂಂಡಾಗಿರಿ ಪ್ರಕರಣ ಬೆಳಕಿಗೆ ಬಂದಾಗ ರಾಜ್ಯದ ಉಪಮುಖ್ಯಮಂತ್ರಿ ತನ್ನ ಬಾಲಕ್ಕೇ ಬೆಂಕಿ ಬಿದ್ದಂತೆ ಚೀರಾಡಿದ್ದ. ಕೊಲೆ ಆರೋಪದ ಮೇಲೆ ಕಂಚಿ ಸ್ವಾಮಿಯ ಬಂಧನವಾದಾಗ ಸಂಪ್ರದಾಯವಾದಿಗಳು ದೇಶದ ಕಾನೂನಿಗೆ ಅತೀತರಿವರು ಎಂಬಂತೆ ಹಾರಾಡಿದ್ದರು. ಈಗ ಪ್ರಚಾರದ ಹುಚ್ಚು ಹಿಡಿಸಿಕೊಂಡಿರುವ ದನದಂತೆ ಮೈಬೆಳೆಸಿಕೊಂಡ ಸ್ವಾಮೀಜಿಯೊಬ್ಬನ ಗೋ ಸಮ್ಮೇಳನಕ್ಕೆ ಸರ್ಕಾರವು ಜನರ ತೆರಿಗೆ ಹಣದಿಂದ ಕೋಟಿಗಟ್ಟಲೆ ದುಡ್ಡನ್ನು ಕಣ್ಮುಚ್ಚಿ ಕೊಟ್ಟಿದೆ. ಇದನ್ನೆಲ್ಲ ನೋಡಿದರೆ ಈ ಸ್ವಾಮಿಗಳೇನು ಆಕಾಶದಿಂದ ಉದುರಿ ಬಿದ್ದವರಾ? ಎಂಬ ಪ್ರಶ್ನೆ ಕಾಡುತ್ತದೆ.

ಬಹುಶಃ ಈ ರೀತಿಯಾಗಿ ಭಾವಿಸಿದ್ದರಿಂದಲೋ ಏನೋ, ಅಹಂಕಾರದ ಪಿತ್ಥವನ್ನು ತಲೆಗೇರಿಸಿಕೊಂಡ ಜೈನ್ ಸ್ವಾಮಿಯೊಬ್ಬ ತಾನು ತಾಳ್ಮೆ-ಅಹಿಂಸೆ ಪ್ರತಿಪಾದಿಸುವ ಧರ್ಮವೊಂದರ ಪ್ರತಿನಿಧಿ ಎಂಬುದನ್ನು ಮರೆತು ಯಾವುದೋ ಹಾದಿಬದಿಯ ಕುಡುಕ ಆಡುವ ರೀತಿಯಲ್ಲಿ ಕೇವಲ ತನ್ನ ಸಮಾರಂಭದಲ್ಲಿ ಉಪಸ್ಥಿತರಿಲ್ಲ ಎಂಬ ಕಾರಣಕ್ಕೆ ದೇಶದ ಮಾಜಿ ಪ್ರಧಾನಿ ಹಾಗು ರಾಜ್ಯದ ಹಾಲಿ ಮುಖ್ಯಮಂತ್ರಿಗಳನ್ನು "ವಂಚಕರು" ಎಂದು ನೇರವಾಗಿ ಟೀಕಿಸುವಷ್ಟರ ಮಟ್ಟಿಗಿನ ದಾರ್ಷ್ಟ್ಯ ತೋರುತ್ತಾನೆ. ಮರುದಿನ ಆ ತಪ್ಪನ್ನು ತಾನು ಒಪ್ಪಿಕೊಳ್ಳದೇ ಬಿದ್ದರೂ ಮೀಸೆ ಮಣ್ಣಾಗಿಲ್ಲ ಎಂಬಂತೆ "ಜನರಾಡುವ ಮಾತುಗಳೇ ನನ್ನ ಬಾಯಿಂದ ಬಂತು. ಇದು ನನ್ನ ಸ್ವಂತದ್ದಲ್ಲ" ಎಂದು ಜಾರಿಕೊಳ್ಳುತ್ತಾನೆ. ಇದೇ ಧರ್ಮದ ಸ್ವಾಮಿಯೊಬ್ಬನ ಕುರಿತ ಕಹಿಸತ್ಯ ಬರೆದವನನ್ನು ರಾತ್ರೋರಾತ್ರಿ ಹೆಂಡತಿಯ ಸಮೇತ ಮಂಗಳೂರಿನಲ್ಲಿ ಬಂಧನಕ್ಕೆ ದೂಡುತ್ತದೆ ಸರ್ಕಾರ.



ಅಹಂಕಾರ ತಲೆಗೇರಿಸಿಕೊಂಡ ಗುಣಧರ(?)ನ ಬಗ್ಗೆ ಓದಿದಾಗ ಇದು ಇವತ್ತಿನ ಕತೆಯಲ್ಲ, ಸ್ವಾಮೀಜಿ, ಮಠಾಧೀಶರು ತಾವು ದೈವಾಂಶ ಸಂಭೂತರು ತಾವು ಏನು ಮಾಡಿದರೂ ನಡೆಯುತ್ತದೆಂಬ ಅಹಂಕಾರ ನೆತ್ತಿಗೇರಿಸಿಕೊಂಡವರು ರಾಮಾಯಣ ಕಾಲದಿಂದಲೇ ಇದ್ದರೆಂಬುದಕ್ಕೆ ಅದರಲ್ಲಿನ ಒಂದು ಕತೆಯೇ ತಿಳಿಸುತ್ತವೆ. ಆ ಕತೆ ಹೀಗಿದೆ:

ರಾಮ ರಾಜ್ಯಭಾರವನ್ನು ನಡೆಸುತ್ತಿರುವಾಗ ಪೆಟ್ಟು ತಿಂದ ನಾಯಿಯೊಂದು ರಾಮನ ದರ್ಬಾರಿಗೆ ಬಂತಂತೆ. ಅದರ ಸ್ಥಿತಿಯನ್ನು ನೋಡಿ ವಿಚಾರಿಸಿದಾಗ ಸನ್ಯಾಸಿಯೊಬ್ಬ ಅದಕ್ಕೆ ಹೊಡೆದನೆಂಬುದು ತಿಳಿದು ಬಂದು ರಾಮನು ನಾಯಿಯಲ್ಲಿಯೇ ಸನ್ಯಾಸಿಗೆ ನೀಡಬೇಕಾದ ಶಿಕ್ಷೆಯ ಬಗ್ಗೆ ಕೇಳುತ್ತಾನೆ. ಆಗ ಆ ಸನ್ಯಾಸಿಯನ್ನು ಮಠಾಧಿಪತಿಯನ್ನಾಗಿ ಮಾಡು ಎಂದಿತಂತೆ ನಾಯಿ. ಅದು ಮುಂದುವರೆದು "ಪೂರ್ವ ಜನ್ಮದಲ್ಲಿ ನಾನೂ ಮಠಾಧಿಪತಿಯಾಗಿ ಅಹಂಕಾರದಿಂದ ಮಾಡಬಾರದ್ದನ್ನೆಲ್ಲ ಮಾಡಿದ್ದಕ್ಕಾಗಿಯೇ ಈ ಪಾಡು ಅನುಭವಿಸುತ್ತಿದ್ದೇನೆ. ಈತನೂ ಇದನ್ನು ಅನುಭವಿಸಲಿ" ಎಂದಿತಂತೆ. ಈ ಕತೆಯ ಸತ್ಯಾಸತ್ಯತೆ ಏನೇ ಇರಲಿ ಒಂದು ಧಾರ್ಮಿಕ ಗ್ರಂಥ ಬರೆದ ಕೃತಿಕಾರನಿಗೇ ಆ ಕಾಲದ ಮಠಾಧಿಪತಿಗಳ ಬಗ್ಗೆ ಇದ್ದ ಅಸಹನೆ ಈ ಕತೆಯಲ್ಲಿ ವ್ಯಕ್ತವಾಗಿದೆ.

ಇದೀಗ ನಡೆದ ಗೋ ಸಮ್ಮೇಳನದಲ್ಲಿ ಈ ಗೋವುಗಳು ಕೇವಲ ನೆಪಕ್ಕಷ್ಟೇ ಇದ್ದವೇ ವಿನಃ ನಡೆದದ್ದು ಬ್ರಾಹ್ಮಣಿಕೆಯ ವಿಜೃಂಭಣೆ ಮಾತ್ರ. ತುಲಾಭಾರ ಮಾಡಿದಾಕ್ಷಣ ಗೋವಿನ ಉದ್ಧಾರವಾಗುವುದಿದ್ದರೆ ಅದಕ್ಕಿಂತ ದೊಡ್ಡ ಮೂರ್ಖತನ ಬೇರಿನ್ನೇನಿದೆ? ಒಂದು ಹನಿ ಬೆವರನ್ನು ಚೆಲ್ಲದೇ ಹೊಟ್ಟೆ ಬರಿಯ ತುಪ್ಪದೂಟ ಉಣ್ಣುವವರಿಗಷ್ಟೇ ಯೋಗ್ಯ ಇಂತಹ ಸಮ್ಮೇಳನಗಳು. ಇಂತಹ ಧರ್ಮದ ಕೂಳು ತಿನ್ನುವವರ ಬಗ್ಗೆ ತಮ್ಮ ಆತ್ಮಚರಿತ್ರೆಯಲ್ಲಿ (ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು) ಶಿವರಾಮ ಕಾರಂತರ ಅಣ್ಣ ಕೋಟೆ ಲಕ್ಷ್ಮಿನಾರಾಯಣ ಕಾರಂತರು ಹೇಗೆ ಹೇಳಿದ್ದಾರೆ... ಉಡುಪಿಯ ಅಷ್ಟಮಠಗಳ ಎಷ್ಟೋ ಸಾವಿರ ಮುಡಿ ಉತ್ಪನ್ನಗಳು ಭೋಜನ ಶಾಲೆ ಹಾಗು ಚೌಕಿಗಳಲ್ಲಿಯೇ ಖರ್ಚಾಗಿ ನಾಲ್ಕೈದು ಮೈಲಿಗಳ ಸರಹದ್ದಿನ ಸುತ್ತ ಮೈಗಳ್ಳ ತಂಡವೊಂದು ಬೆಳೆದು ಚೌಕಿ ಹಾಗು ಭೋಜನ ಶಾಲೆಗಳಲ್ಲಿ ಕಾಲ ಕಳೆಯುತ್ತಿರುವುದೂ ಕಣ್ಣಿಗೆ ಬಿತ್ತು.

ಇಲ್ಲಿನ ಚಟುವಟಿಕೆ ಮತ್ತು ಕ್ರೈಸ್ತ ಮಿಷನರಿಗಳ ಕಾರ್ಯಗಳ ವ್ಯತ್ಯಾಸವನ್ನು ಮನಗಂಡೇ ಈ ನನ್ನ ಧರ್ಮದ ಮೇಲೆ ನನಗೆ ತಿರಸ್ಕಾರ ಮೂಡಿತು (ಪು. 107).

ಇಂತಹ ಮೈಗಳ್ಳರು ಹಾಗು ಮೈಗಳ್ಳರ ಗುಂಪು ಬೆಳೆಯಲು ನಮ್ಮ ಘನ ಸರ್ಕಾರ ಟೊಂಕ ಕಟ್ಟಿ ನಿಂತು ಸರ್ಕಾರದ ಹಣವನ್ನು ಪೋಲು ಮಾಡುತ್ತಿರುವುದು ಒಂದು ದುರಂತವೇ ಸೈ.

-ರವಿ ಪುತ್ತೂರ, ದಕ್ಷಿಣ ಕನ್ನಡ



ಇತ್ತೀಚೆಗೆ ನಾನು ಲಂಕೇಶ್ ಪ್ರಕಾಶನ ಪ್ರಕಟಿಸಿರುವ 'ಟ್ರೈನ್ ಟು ಪಾಕಿಸ್ತಾನ್' ಲೇ: ಖುಷ್‌ವಂತ್‌ಸಿಂಗ್, ಕನ್ನಡ ಅನುವಾದ : ಎಂ.ಬಿ. ರಾಮಮೂರ್ತಿ, ಪುಸ್ತಕ ಓದಿದೆ. ಖುಷ್ವಂತ್‌ಸಿಂಗ್‌ರ ಶೈಲಿಯಂತೂ ಅದ್ಭುತ. ಅದನ್ನು ಕನ್ನಡಕ್ಕೆ ಭಾವಾನುವಾದ ಮಾಡಿದ ರೀತಿಯೂ ಅನನ್ಯ. ಬಹಳ ಸೊಗಸಾಗಿ ಮೂಡಿಬಂದಿದೆ. ಸ್ವಾತಂತ್ರ್ಯ ಬಂದ ನಂತರ ಹುಟ್ಟಿದ ನಮ್ಮಂಥವರಿಗೆಲ್ಲ ಸ್ವಾತಂತ್ರ್ಯದ ಸಮಯದಲ್ಲಿ ನಡೆದ ಅನೇಕ ಅಮಾಯಕರ ಮಾರಣ ಹೋಮಗಳು, ದುರ್ಘಟನೆಗಳು, ಅಂದಿನ ಜನಜೀವನ, ಜನರ ಮನಸ್ಥಿತಿ, ಅಧಿಕಾರಿಗಳ ದಬ್ಬಾಳಿಕೆ, ಮುಗ್ಧಜನರ ಗುಲಾಮಗಿರಿ ಮುಂತಾದವುಗಳ ಕುರಿತು ಅರಿವು ಮೂಡುವುದು ಇಂತಹ ಪುಸ್ತಕಗಳನ್ನು ಓದಿದಾಗಲೇ ಅಲ್ಲವೇ? ಕಥೆಗೆ ಪೂರಕವಾಗಿ ಚಿತ್ರಗಳೂ ಇವೆ. ಕನ್ನಡಿಗರಿಗೆ ಖುಷ್ವಂತ್ ಸಿಂಗ್‌ರ ಒಂದು ಒಳ್ಳೆಯ ಪುಸ್ತಕವನ್ನು ಅನುವಾದಿಸಿ ಪ್ರಕಟಿಸಿದ್ದಕ್ಕಾಗಿ ಪತ್ರಿಕೆ ಪ್ರಕಾಶನಕ್ಕೂ, ಹಾಗೂ ಅನುವಾದಕರಾದ ಡಾ. ಎಂ.ಬಿ. ರಾಮಮೂರ್ತಿಯವರಿಗೂ ಧನ್ಯವಾದಗಳು.

ಕನ್ನಡಿಗರ ಮನೆ, ಮನಗಳನ್ನು ಈ ಪುಸ್ತಕ ತಲುಪಲಿ. ಎಲ್ಲರೂ ಕೊಂಡು ಓದಲಿ ಎಂಬ ಹಾರೈಕೆ ನನ್ನದು.

-ಡಾ. ವಸುಂಧರಾ ಭೂಪತಿ, ಆಯುರ್ವೇದ ವೈದ್ಯೆ, ಲೇಖಕಿ, ಬೆಂಗಳೂರು.

ಸಾಹಿತಿ ಕಟ್ಪಾಡಿಯವರಿಗೆ ಪತ್ರ

ಪ್ರಿಯರೆ,




ನಮ್ಮ ಮೇ 9, 2007 ರ ಸಂಚಿಕೆಯಲ್ಲಿ ಬ್ಯಾರಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ನಡೆಯುತ್ತಿರುವ ಪೈಪೋಟಿಯ ಬಗ್ಗೆ ಪ್ರಕಟವಾಗಿದ್ದ ವರದಿಯಲ್ಲಿನ ಒಂದು ಅವಘಡದ ಬಗ್ಗೆ ಹಿರಿಯ ಸಾಹಿತಿ ಸಾ.ರಾ. ಅಬೂಬಕ್ಕರ್‌ರವರು ನನ್ನ ಗಮನ ಸೆಳೆದರು. "ಯಾವ ಕಾರಣಕ್ಕೂ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ಮಹಮ್ಮದ್ ಬಡ್ಡೂರ್ ಅರ್ಹರಲ್ಲ, ಬದಲಾಗಿ ಅವರಿಗಿಂತ ಫಕೀರ್ ಮಹ್ಮದ್ ಕಟ್ಪಾಡಿಯವರೇ ವಾಸಿ. ಆದರೆ ಇದಕ್ಕೆ ತದ್ವಿರುದ್ಧವಾದ ಅಭಿಪ್ರಾಯ 'ಲಂಕೇಶ್'ನಲ್ಲಿ ಪ್ರಕಟಗೊಂಡಿದೆ" ಎಂದು ಅಬೂಬಕ್ಕರ್‌ರವರು ಹೇಳಿದರು.

ಆ ವರದಿಯಲ್ಲಿನ ತಪ್ಪು ನನ್ನ ಕಣ್ಣು ತಪ್ಪಿ ಸಂಭವಿಸಿದೆಯೆಂದೂ, ಇದರಿಂದ ನಿಮಗಾಗಿರುವಷ್ಟೇ ಬೇಸರ ನನಗೂ ಆಗಿದೆ ಎಂದೂ ತಮಗೆ ತಿಳಿಸಬಯಸುತ್ತೇನೆ. ಪತ್ರಿಕೆಯ ಮಿತ್ರರೂ, ನಮ್ಮ ಕೋಮು ಸೌಹಾರ್ದ ಆಶಯಗಳಲ್ಲಿ ಸಹಭಾಗಿಯೂ, ಉತ್ತಮ ಸಾಹಿತಿಯೂ ಆಗಿರುವ ತಾವು ನನ್ನ ಈ ಭಾವನೆಗೆ ಸ್ಪಂದಿಸುತ್ತೀರಿ ಎಂದು ಆಶಿಸುವೆ. ತಮ್ಮ ಸ್ನೇಹ ಮತ್ತು ಸಹಕಾರ ಹಿಂದಿನಂತೆಯೇ ಮುಂದುವರೆಯಲಿ ಎಂದೂ ಬಯಸುತ್ತೇನೆ.

ತಮ್ಮ ವಿಶ್ವಾಸಿ,
ಗೌರಿ ಲಂಕೇಶ್

ತೆರೆಯ ತಂಗಿಯರಲ್ಲೂ ತನ್ನ ತಂಗಿಯರನ್ನು ಕಾಣುತ್ತಿದ್ದ ಅಪ್ಪಾಜಿ

ಯಾಕೋ ಏನೋ ಅವರು 'ತವರಿಗೆ ಬಾ ತಂಗಿ' ಸಿನಿಮಾದ ಕಥೆ ಹೇಳಿದಾಗ ಅವರ ಪ್ರೀತಿಯ ತಂಗಿ ನಾಗಮ್ಮ ಮತ್ತು ಶಾರದಮ್ಮನವರನ್ನು ನೆನೆಸಿಕೊಂಡರು. ಅದರಲ್ಲೂ ತಂಗಿ ಸಾಯುವ ದೃಶ್ಯ ಬಂದಾಗ ಅಪ್ಪಾಜಿ ತುಂಬಾ ಗಲಿಬಿಲಿಗೊಂಡರು. ಒಂದು ಸಿನಿಮಾ ಕತೆಯನ್ನು ಕೇಳುವಾಗ ಅಥವಾ ಸಿನಿಮಾ ನೋಡುವಾಗ ಅಪ್ಪಾಜಿ ಮುಗ್ಧರಾಗಿ ಅದನ್ನು ಅವರ ಕುಟುಂಬದ ಸದಸ್ಯರ ಜೊತೆ ಹೋಲಿಕೆಮಾಡಿ ನೋಡುತ್ತಿದ್ದರು. ಇಲ್ಲದಿದ್ದರೆ 'ತವರಿಗೆ ಬಾ ತಂಗಿ' ಚಿತ್ರದ ತಂಗಿಯ ಸಾಯುವ ದೃಶ್ಯ ನೋಡುವಾಗ ಅವರಿಗ್ಯಾಕೆ ಅವರ ತಂಗಿಯ ನೆನಪಾಗಬೇಕು?



ಯಾವಾಗ ಅಪ್ಪಾಜಿಗೆ ಇದೀ ವ್ಯವಸ್ಥೆಯ ಬಗ್ಗೆ ಬೇಸರ ಆರಂಭಗಳು ಶುರುವಾಯಿತೋ ಆವಾಗ ನಾವು ಆದಷ್ಟು ಬೇಗ ಅವರನ್ನು ಮತ್ತೆ ಬಣ್ಣದ ಲೋಕದ ಕಡೆಗೆ ಕರೆತರಬೇಕೆಂದು ನಿರ್ಧರಿಸಿದೆವು. ಏಕೆಂದರೆ ಅಪಹರಣದ ಘಟನೆಯಿಂದ ಅವರು ಮಾನಸಿಕವಾಗಿ ಮಾತ್ರವಲ್ಲ, ದೈಹಿಕವಾಗಿಯೂ ಕುಗ್ಗಿಹೋಗಿದ್ದರು. ಆದಕ್ಕಿಂತಲೂ ಮುಖ್ಯವಾಗಿ ಎಮೋಷನಲಿ ಅವರು ತುಂಬಾ ಆಘಾತಕ್ಕೊಳಗಾಗಿದ್ದರು. ಈ ವ್ಯವಸ್ಥೆ ಜನರನ್ನು ಎಷ್ಟು ಸುಲಭವಾಗಿ ಮೂರ್ಖರನ್ನಾಗಿಯೂ, ಬಲಹೀನರನ್ನಾಗಿಯೂ ಮಾಡುತ್ತದೆ ಎಂಬಿತ್ಯಾದಿ ಬಗ್ಗೆ ಅಪ್ಪಾಜಿ ನನ್ನಲ್ಲಿ ಕೆಲವು ಬಾರಿ ಮಾತನಾಡಿದ್ದರು. ನನಗೂ ಅವರು ಹೇಳಿದ್ದೆಲ್ಲಾ ನಿಜ ಎಂದು ಅನ್ನಿಸುತ್ತಿತ್ತು, ಈ ಸರ್ಕಾರ, ಈ ಪೊಲೀಸ್ ಇಲಾಖೆ, ಆಧುನಿಕ ಶಸ್ತ್ರಾಸ್ತ್ರಗಳೆಲ್ಲ ಇದ್ದೂ ವೀರಪ್ಪನ್‌ನಂತಹ ಸಮಾಜಘಾತುಕ ವ್ಯಕ್ತಿಯನ್ನು ಯಾಕೆ ಹಿಡಿಯಲಾಗಿಲ್ಲ ಎಂದು ನನಗೂ ಅನ್ನಿಸುತ್ತಿತ್ತು.

ನಿಧಾನವಾಗಿ ನಾವು ಚಿತ್ರದ ಕಥೆಯ ಆಯ್ಕೆಯ ವಿಷಯಕ್ಕೆ ಸಂಬಂಧಿಸಿದಂತೆ ಮತ್ತೆ ಅಪ್ಪಾಜಿ ಹಾಗು ಅಪ್ಪಣ್ಣನನ್ನು ಕುಳಿತುಕೊಳ್ಳಲು ಒತ್ತಾಯ ಮಾಡಿದೆವು. ಹೀಗೆ ಕಥೆಯ ಚರ್ಚೆಗೆ ಕುಳಿತಾಕ್ಷಣ ವೀರಪ್ಪನ್ ದುರ್ಘಟನೆಯನ್ನು ಮರೆತು ಅಪ್ಪಾಜಿ ಮತ್ತೆ ಹಿಂದಿನಂತೆ ಲವಲವಿಕೆಯಿಂದ ಮಾತನಾಡಲು ಶುರು ಮಾಡುತ್ತಿದ್ದರು.


'ಯುವರಾಜ' ಚಿತ್ರದಲ್ಲಿ ನಾನು ನಟಿಸುತ್ತಿದ್ದಾಗ ನಿರ್ದೇಶಕ ಪೂರಿ ಜಗನ್ನಾಥ್ ನನಗೊಂದು ಕಥೆಯನ್ನು ಹೇಳಿದರು. "ಈ ಕಥೆ ನನ್ನ ಸಹೋದರ ಪುನೀತ್‌ಗೆ ಸರಿ ಹೊಂದುತ್ತದೆ" ಎಂದು ಅಪ್ಪಾಜಿಗೆ ತಿಳಿಸಿದ ನಂತರ ಪೂರಿ ಜಗನ್ನಾಥ್ ಒಂದು ಕಥೆಯನ್ನು ಅಪ್ಪಾಜಿಗೆ ಹೇಳಿದರು. ಪುನೀತ್ ಈ ಚಿತ್ರದ ಮುಖಾಂತರ ನಾಯಕ ನಟನಾಗಿ ಚಿತ್ರರಂಗಕ್ಕೆ ಆರಂಗೇಟ್ರಂ ಮಾಡುವುದೆಂದು ಮನೆಯವರೆಲ್ಲ ನಿರ್ಧರಿಸಿದರು.

"ನಮ್ಮ ಮಕ್ಕಳ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ" ಎಂದು ಆಗಾಗ ಸಂತೋಷದಿಂದ ಹೇಳುತ್ತಿದ್ದ ಅಪ್ಪಾಜಿಗೆ "ಅಪ್ಪು ಈ ಸಿನಿಮಾ ಮಾಡಲಿ" ಎಂದು ನಾನು ಹೇಳಿದ್ದು ಬಹಳ ಸಂತೋಷವನ್ನು ನೀಡಿತ್ತು. "ಅಲ್ಲ ಕಂದಾ... ನೀನೊಬ್ಬ ನಾಯಕನಟನಾಗಿದ್ದೂ ಈ ಚಿತ್ರವನ್ನು ಅಪ್ಪುಗೆ ಯಾಕೆ ಬಿಟ್ಟುಕೊಟ್ಟೆ ಗೊತ್ತಾ? ನಿನ್ನ ಮನಸ್ಸು ವಿಶಾಲವಾಗಿರುವುದಕ್ಕೆ. ನಿನ್ನಲ್ಲಿ ಸ್ವಲ್ಪವೂ ಜೆಲಸ್ ಎಂಬುದಿಲ್ಲ. ಎಲ್ಲಾ ನಿನ್ನ ತಾತನ ಬುದ್ಧಿ ನಿನಗೆ ಬಂದಿದೆ" ಎಂದು ಅಂದು ಅವರು ನನ್ನನ್ನು ಹೊಗಳಿದರು. ಆಗ ನಾನು "ಇಲ್ಲಪ್ಪ, ಇದೆಲ್ಲ ನಾವು ಕಲಿತದ್ದೇ ನಿಮ್ಮಿಂದ. ಅಪ್ಪಾಗಿಯೂ ಅಪ್ಪು ಚಿಕ್ಕ ವಯಸ್ಸಿನಲ್ಲೇ ನಮಗಿಂತ ಮೊದಲು ಬಾಲನಟನಾಗಿ ಪ್ರಖ್ಯಾತಿ ಪಡೆದವನು. ಹಾಗಾಗಿ ಸಹಜವಾಗಿ ಆತನ ಬಗ್ಗೆ ನಮಗೂ ಪ್ರೀತಿ ಮತ್ತು ಕುತೂಹಲ" ಎಂದೆ.

ಅದ್ಯಾಕೋ ಅಪ್ಪುವನ್ನು ಕಂಡರೆ ಆತ ಬಾಲನಟನಾಗಿ ನಟಿಸುತ್ತಿದ್ದ ಕಾಲದಿಂದಲೂ ಅವನ ಬಗ್ಗೆ ಹೆಮ್ಮೆ ಮತ್ತು ವಿಶ್ವಾಸ ನನಗೆ. ಆ ವಿಶ್ವಾಸವನ್ನು ಆತ ಮೊದಲ ಚಿತ್ರದಲ್ಲೇ ನಿಜಗೊಳಿಸಿದ್ದ. ಆ ಚಿತ್ರದ ಕ್ಯಾಸೆಟ್ ರಿಲೀಸ್ ಸಮಾರಂಭದಲ್ಲಿ ದಿಢೀರನೆ ನಾನು ಭಾವುಕನಾದೆ. ನನಗೆ ಅರಿವಿಲ್ಲದೇ ನನ್ನ ಕಣ್ಣಿಂದ ನೀರಹನಿ ಉದುರಿತು. ಸಾಧಾರಣವಾಗಿ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ನಾನು ಈ ರೀತಿ ಅತ್ತಿದ್ದೇ ಇಲ್ಲ. ಅಂದು ನಾನು ಅತ್ತಿದ್ದನ್ನು ನೋಡುತ್ತಿದ್ದ ಅಪ್ಪಾಜಿ ಒಂದು ರೀತಿಯಲ್ಲಿ ಒಳಗೊಳಗೇ ಕೃತಿಯಲ್ಲಿ ಸಂತಸಪಟ್ಟರು. ಯಾಕೆಂದರೆ ನಾನು ಮತ್ತು ಅಪ್ಪು ಹೇಗೆ ಒಂದೇ ಆತ್ಮ ಎರಡು ದೇಹಗಳಂತೆ ಬದುಕುತ್ತಿದ್ದೆವೋ ಹಾಗೆಯೇ ನಾನು, ರಾಘು ಮತ್ತು ಪುನೀತ್ ಇರಬೇಕೆಂಬುದು ಅವರ ಬಹುದಿನದ ಆಸೆಯಾಗಿತ್ತು.

ಇದಾದ ನಂತರ 'ಚಿಗುರಿದ ಕನಸು' ಚಿತ್ರ ಸೆಟ್ಟೇರಿದಾಗ ಮತ್ತೆ ಅವರು ಸಿಕ್ಕಾಪಟ್ಟೆ ಲವಲವಿಕೆಯಿಂದ ಓಡಾಡಲು ಶುರು ಮಾಡಿದರು. ಆ ಕತೆಯ ಬಗ್ಗೆ ಅವರಿಗೆ ಅದಮ್ಯವಾದ ವಿಶ್ವಾಸವಿತ್ತು. ಸಿನಿಮಾ ಬಿಡುಗಡೆಯಾದ ನಂತರ ಅದು ನಿರೀಕ್ಷಿಸಿದಷ್ಟು ಹಿಟ್ ಆಗದಿದ್ದರೂ "ಚಿತ್ರ ಅದ್ಭುತವಾಗಿದೆ ಕಂದಾ. ನನಗಂತೂ ಬಹಳ ಸಂತೋಷ" ಎಂದು ನನ್ನ ಬೆನ್ನು ತಟ್ಟಿದರು. ಈ ಚಿತ್ರ ಯಾಕೆ ಯಶಸ್ಸಾಗಲಿಲ್ಲ? ಎಂದು ಒಂದೇ ಒಂದು ದಿನ ಕೂಡ ಅಪ್ಪಾಜಿ ಕೊರಗಲೇ ಇಲ್ಲ. ಅದರ ಬದಲಿಗೆ ಶಿವರಾಮ ಕಾರಂತರ ಪ್ರತಿಭೆಯನ್ನು ಸಿಕ್ಕಾಪಟ್ಟೆ ಕೊಂಡಾಡುವುದರಲ್ಲೇ ಅವರು ಸಂತೋಷ ಪಡುತ್ತಿದ್ದರು.

ಆಗ ಬಂತು ನೋಡಿ 'ತವರಿಗೆ ಬಾ ತಂಗಿ' ಚಿತ್ರ. ಈ ಚಿತ್ರದ ಹೆಸರು ಕೇಳಿದಾಕ್ಷಣ "ಈ ಚಿತ್ರ ಚೆನ್ನಾಗಿರುತ್ತೆ ನೋಡಿ. ಏನೂ ಚಿಂತೆ ಇಲ್ಲದೆ ಸಿನಿಮಾ ಮುಗಿಸಿಬಿಡಿ" ಎಂದು ಆದೇಶ ನೀಡಿದರು. ಯಾಕೋ ಏನೋ ಅವರು ಈ ಸಿನಿಮಾದ ಕಥೆ ಹೇಳಿದಾಗ ಅವರ ಪ್ರೀತಿಯ ತಂಗಿ ನಾಗಮ್ಮ ಮತ್ತು ಶಾರದಮ್ಮನವರನ್ನು ನೆನೆಸಿಕೊಂಡರು. ಅದರಲ್ಲೂ ತಂಗಿ ಸಾಯುವ ದೃಶ್ಯ ಬಂದಾಗ ಅಪ್ಪಾಜಿ ತುಂಬಾ ಗಲಿಬಿಲಿಗೊಂಡರು. ಸಿನಿಮಾ ನೋಡಿದ ನಂತರ "ಏನೋ ಮೊದಲ ಎರಡು ಮೂರು ರೀಲು ಮಾಮೂಲಿ ಆಗಿದೆಯಲ್ಲಾ ಅಂತ ಅನ್ನಿಸಿತು. ಆದ್ರೆ ನಾಲ್ಕನೇ ರೀಲಿನಿಂದ ಅಲ್ಲಾಡಕ್ಕೇ ಬಿಟ್ಟಿಲ್ಲ ನೋಡು..." ಎಂದು ಅವರು ಹೇಳಿದ್ದು ನನಗಿನ್ನೂ ನೆನಪಿದೆ.



ಇದೆಲ್ಲಾ ನಾನು ಯಾಕೆ ಹೇಳುತ್ತಿದ್ದೇನೆ ಎಂದರೆ ಒಂದು ಸಿನಿಮಾ ಕತೆಯನ್ನು ಕೇಳುವಾಗ ಅಥವಾ ಸಿನಿಮಾ ನೋಡುವಾಗ ಅಪ್ಪಾಜಿ ಮುಗ್ಧರಾಗಿ ಅದನ್ನು ಅವರ ಕುಟುಂಬದ ಸದಸ್ಯರ ಜೊತೆ ಹೋಲಿಕೆಮಾಡಿ ನೋಡುತ್ತಿದ್ದರು. ಇಲ್ಲದಿದ್ದರೆ 'ತವರಿಗೆ ಬಾ ತಂಗಿ' ಚಿತ್ರದಲ್ಲಿ ತಂಗಿಯ ಸಾಯುವ ದೃಶ್ಯ ನೋಡುವಾಗ ಅವರಿಗ್ಯಾಕೆ ಅವರ ತಂಗಿಯ ನೆನಪಾಗಬೇಕು? ಅವರ ತಂದೆ, ತಾಯಿ, ತಂಗಿ ನಿಧನ ಹೊಂದಿ ಎಷ್ಟೇ ವರ್ಷವಾದರೂ ಅವರ ಮೇಲಿನ ಪ್ರೀತಿ, ಮಮತೆ ಮಾತ್ರ ಅಪ್ಪಾಜಿಗೆ ಕಡಿಮೆಯಾಗಲೇ ಇಲ್ಲ.

ನಾವು - ಅಂದರೆ ರಾಧಿಕಾ ಮತ್ತು ನಾನು - 'ಅಣ್ಣ ತಂಗಿ' ಚಿತ್ರದಲ್ಲಿ ಮತ್ತೆ ಒಟ್ಟಿಗೇ ನಟಿಸುವಾಗ ಅಪ್ಪಾಜಿ ಪುನಃ ಅದೇ ಮಾತನ್ನು ಪುನರುಚ್ಛರಿಸಿದರು. "ಅದೇ ಹುಡುಗಿ ತಾನೇ ಈಕೆ?" ಎನ್ನುತ್ತಾ... "ಹಾಗಾದ್ರೆ ನಿಮ್ಮಿಬ್ಬರನ್ನು ಜನ ಈ ಬಾರಿಯೂ ಮೆಚ್ಚುತ್ತಾರೆ ಬಿಡಿ. ಅಣ್ಣತಂಗಿ ಹೆಸರೇ ಎಷ್ಟು ಚೆನ್ನಾಗಿದೆಯಲ್ಲಾ?" ಎಂದು ಸಂತೋಷ ವ್ಯಕ್ತಪಡಿಸಿದ್ದರು.

ಹೀಗೆ ಅಪ್ಪಾಜಿ ನನ್ನ ಮತ್ತು ಅಪ್ಪು ಚಿತ್ರದ ಕಥೆಗಳಲ್ಲಿ ತಲ್ಲೀನರಾಗುತ್ತಿದ್ದಂತೆ, ವೀರಪ್ಪನ್‌ನನ್ನು ನಿಧಾನವಾಗಿ ಅವರು ಮರೆಯಲಾರಂಭಿಸಿದ್ದರು. ಆದರೂ ಅವರ ಮಂಡಿ ನೋವು ಮಾತ್ರ ಅವರನ್ನು ಮೊದಲಿನಂತೆ ಓಡಾಡಲು ಬಿಡುತ್ತಿರಲಿಲ್ಲ. ಈ ಸಂದರ್ಭದಲ್ಲಿ ನನ್ನ 'ಜೋಗಿ' ಚಿತ್ರ ಸೆಟ್ಟೇರಿತು. ಅದರ ಮುಹೂರ್ತದಂದು ಅಪ್ಪಾಜಿ ನನ್ನನ್ನು ಪಕ್ಕಕ್ಕೆ ಎಳಕೊಂಡು ತಬ್ಬಿ ಮುತ್ತಿಟ್ಟರು. ಯಾಕೋ ಅಂದು ಅಪ್ಪಾಜಿ ನನಗೆ ಮುತ್ತು ಕೊಟ್ಟ ಕ್ಷಣ ಇನ್ನೂ ರೋಮಾಂಚಕಾರಿಯಾಗಿಯೇ ನನ್ನ ಮನಸ್ಸಿನಲ್ಲಿ ಉಳಿದಿದೆ. ಇಂತಹ ನೂರಾರು ಮುತ್ತುಗಳನ್ನು ನಾನು ಅಪ್ಪಾಜಿಯಿಂದ ಪಡೆದಿದ್ದರೂ ಈ ಮುತ್ತಿಗೆ ಮಾತ್ರ ಯಾಕೆ ಇಷ್ಟೊಂದು ಮಹತ್ವ ನೀಡುತ್ತಿದ್ದೇನೆ ಎಂದು ನನಗೇ ಗೊತ್ತಿಲ್ಲ. ಅಂದು ಕೂಡಾ ಅಷ್ಟೇ, ಚಿತ್ರದ ಹೆಸರು ಕೇಳಿದಾಕ್ಷಣ "ಈ ಸಿನಿಮಾ ಏನೋ ಒಂದು ಮಾಡುತ್ತೆ ನೋಡು ಕಂದಾ..." ಎಂದು ಹೇಳಿದ್ದರು. ಈ ಥರ ಸಿನಿಮಾದ ಹೆಸರು ಕೇಳಿದಾಕ್ಷಣ ಅವರು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ನಾನು ಪ್ರತೀ ಬಾರಿಯೂ ಕಾತುರದಿಂದ, ಕುತೂಹಲದಿಂದ ನಿರೀಕ್ಷಿಸುತ್ತಿದ್ದೆ.


'ಜೋಗಿ' ಚಿತ್ರ ಬಿಡುಗಡೆಯಾದ ನಂತರ ರಜನೀಕಾಂತ್ ಮತ್ತು ಅಪ್ಪಾಜಿ ಎಂಬ ಇಬ್ಬರು ದಿಗ್ಗಜರು ಈ ಚಿತ್ರವನ್ನು ನೋಡಿದ್ದು ನಾನು ಮರೆಯಲಾಗದ ಮತ್ತೊಂದು ಸಂಗತಿ. ನಿಜ ಹೇಳುತ್ತೇನೆ ನಾನು ಅಂದು ಮಾತ್ರ ಸಿನಿಮಾವನ್ನು ನೋಡಲೇ ಇಲ್ಲ. ನಾನು ಕತ್ತಲಲ್ಲಿ ಗಮನಿಸುತ್ತಿದ್ದದ್ದು ಅವರಿಬ್ಬರ ಮುಖವನ್ನು. ಇಬ್ಬರೂ ಸಿನಿಮಾ ನೋಡಿ ಎಂಜಾಯ್ ಮಾಡುತ್ತಿದ್ದರು, ಎಮೋಷನಲ್ ಆಗಿದ್ದರು, ಸಿನಿಮಾ ನೋಡುತ್ತಾ ಕಣ್ಣೀರು ಹಾಕುತ್ತಿದ್ದರು.

ಸಿನಿಮಾ ಮುಗಿದ ನಂತರ ಇಬ್ಬರೂ ನನ್ನನ್ನು ತಬ್ಬಿಕೊಂಡು ಮುತ್ತಿಕ್ಕಿದರು. ಆಗಲೂ ಅಷ್ಟೇ ಅವರ ಕಣ್ಣಂಚಿನಲ್ಲಿ ನೀರ ಹನಿ ಇತ್ತು. ಇಬ್ಬರು ಮಹಾನ್ ನಟರು ನನ್ನ ಅಭಿನಯವನ್ನು ನೋಡಿ ಕಣ್ಣೀರು ಸುರಿಸಿದ್ದನ್ನು ನೋಡಿ ನನ್ನ ಜೀವನ ಪಾವನವಾಯಿತು ಅಂದುಕೊಂಡೆ.

ಹೀಗೆ ನಾವು ಕುಟುಂಬದವರು ಅಪ್ಪಾಜಿಯನ್ನು ವೀರಪ್ಪನ್ ಅಪಹರಣದ ಹ್ಯಾಂಗೋವರ್‌ನಿಂದ ಹೊರತರುವಲ್ಲಿ ಯಶಸ್ವಿಯಾಗಿದ್ದೆವು. ಅದೇ ಸಂದರ್ಭದಲ್ಲಿ ನಾವು ಹೆಚ್ಚು ಹೆಚ್ಚು ಮನೆಯ ಸಮಾರಂಭಗಳನ್ನು ನಡೆಸುತ್ತಿದ್ದೆವು. ಅದರಲ್ಲಿ ಕುಟುಂಬದ ಎಲ್ಲ ಸದಸ್ಯರೂ ಭಾಗವಹಿಸುತ್ತಿದ್ದರು. ಅಂತಹ ಒಂದು ಸಮಾರಂಭ 2006ನೇ ಹೊಸ ವರ್ಷಾಚರಣೆಯ ರಾತ್ರಿಯ ಸಂಭ್ರಮ. ಅಂದು ಡಿಸೆಂಬರ್ 31. ನನ್ನ ಆರೋಗ್ಯ ಕೈಕೊಟ್ಟಿತು. ಆ ಕೂಡಲೇ ನಾನು ಮತ್ತು ಗೀತಾ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಹೋಗಿ ನನ್ನ ಆರೋಗ್ಯ ತಪಾಸಣೆ ಮಾಡಿಸಿದೆವು. ಎಲ್ಲ ಪರೀಕ್ಷಿಸಿದ ನಂತರ "ನೀವು ಈ ಕೂಡಲೇ ಇಲ್ಲಿ ದಾಖಲಾಗಬೇಕು; ಪರಿಸ್ಥಿತಿ ಸ್ವಲ್ಪ ಗಂಭೀರವಾಗಿದೆ" ಎಂದು ವೈದ್ಯರು ಹೇಳಿದರು. "ಅದು ಸಾಧ್ಯವಿಲ್ಲ, ಯಾವುದೇ ಕಾರಣಕ್ಕೆ ನಾನು ಕುಟುಂಬದ ಸಂತೋಷಕೂಟವನ್ನು ತಪ್ಪಿಸಲು ಸಾಧ್ಯವಿಲ್ಲ" ಎಂದು ವೈದ್ಯರಿಗೆ ಹೇಳಿದೆ. ಇವತ್ತು ಮನೆಗೆ ಹೋಗಿ ಅಪ್ಪಾಜಿ ಬಳಿ ಹೊಸ ವರ್ಷದ ಆಶೀರ್ವಾದವನ್ನು ಪಡೆದು ನಾಳೆ ಬರುತ್ತೇನೆ ಎಂದು ತಿಳಿಸಿದೆ. ಇದಕ್ಕೆ ವೈದ್ಯರು ಒಲ್ಲದ ಮನಸ್ಸಿನಿಂದ ಒಪ್ಪಿಗೆ ನೀಡಿದರು.

ಅಂದು ಡಿಸೆಂಬರ್ 31ರ ರಾತ್ರಿ ನಮ್ಮ ಮನೆಯಲ್ಲಿ ನಡೆದ ಹೊಸ ವರ್ಷದ ಸಂತೋಷ ಸಮಾರಂಭದಲ್ಲಿ ನಾನು ಭಾಗಿಯಾಗಿ ಅಪ್ಪಾಜಿಯವರ ಆಶೀರ್ವಾದ ಪಡೆದೆ. ಆದರೆ ನನ್ನ ಅನಾರೋಗ್ಯದ ವಿಷಯ ತಿಳಿದಾಕ್ಷಣ ಅವರು ಸಿಕ್ಕಾಪಟ್ಟೆ ನೊಂದುಕೊಂಡರು. "ನಮ್ ಶಿವಣ್ಣನಿಗೆ ಹೊಸ ವರ್ಷದ ದಿನ ಯಾಕೆ ಹಿಂಗಾಯ್ತು?" ಎಂದು ಬೇಸರಪಟ್ಟುಕೊಂಡರು. ನಾನು ಅಂದು ರಾತ್ರಿಯೇ ಆಸ್ಪತ್ರೆಗೆ ಹೋಗಿ ದಾಖಲಾದೆ. ಮರುದಿನ ಬೆಳಿಗ್ಗೆ ನಾನು ಏಳುವ ಮುನ್ನವೇ ನನ್ನ ಹಾಸಿಗೆಯಲ್ಲಿ ಅಪ್ಪಾಜಿ ಕುಳಿತಿದ್ದರು. ಅಂದು ಅವರು ನನಗೆ ಏನು ಹೇಳಿದರು ಗೊತ್ತಾ?

(ಮುಂದುವರೆಯುವುದು)




R.B.P. LANKESH, Kannada Weekly   Price Rs. 10/-   23-5-2007   RNI No. KARKAN2005/14648   Regd.No.KA/BG(S)/2036/2005-07

ಮಂಜುರವರ ಎದೆಗಾರಿಕೆ



'ಅಹಂ ಪ್ರೇಮಾಸ್ಮಿ' ನಂತರ ರವಿಚಂದ್ರನ್ ಮತ್ತು ಅವರ ಸಹೋದರ ಬಾಲಾಜಿ ಮತ್ತೆ ಜೊತೆಯಾಗಿ ನಟಿಸಲಿದ್ದಾರೆ. ಇವರಿಬ್ಬರನ್ನು ಒಂದೇ ಚಿತ್ರದಲ್ಲಿ ಹಾಕುವ ಎದೆಗಾರಿಕೆ ತೋರಿಸಿರುವವರು 'ಗಂಡುಗಲಿ' ಖ್ಯಾತಿಯ ಕೆ. ಮಂಜು. ಎಸ್. ನಾರಾಯಣ್ ಅವರ ಸಹೋದರ ಗೋವಿಂದು ಈ ಚಿತ್ರವನ್ನು ನಿರ್ದೇಶಿಸಲಿದ್ದಾರೆ. ಈ ಹಿಂದೆ ಎಸ್. ನಾರಾಯಣ್ ಕಾಲ್‌ಶೀಟಗಾಗಿ ತಡಕಾಡುತ್ತಿದ್ದ ಕೆ. ಮಂಜು ಈಗ ಅವರ ಸಹೋದರನನ್ನು ಆಲಂಗಿಸಿರುವುದು ಗಾಂಧಿನಗರದವರಲ್ಲಿ ಅಚ್ಚರಿ ಹುಟ್ಟಿಸಿದೆ. ಮಂಜು ಬಹಳ ಲೆಕ್ಕಾಚಾರದ ಮನುಷ್ಯರಾಗಿರುವುದರಿಂದ ಲಾಭವಿಲ್ಲದೇ ಹೀಗೆ ಮಾಡಲಾರರು ಎಂಬುದು ಸದ್ಯಕ್ಕೆ ಚಾಲ್ತಿಯಲ್ಲಿರುವ ಮಾತು.

ರಾಮಪ್ರಸಾದರ ಡಬ್ಬಲ್ ಲಾಟರಿ



ಸದ್ಯಕ್ಕೆ ಕನ್ನಡ ಚಿತ್ರರಂಗದ ಅತ್ಯಂತ ಜನಪ್ರಿಯ ನಾಯಕ ನಟರುಗಳಾದ ಪ್ರೇಮ್ ಮತ್ತು ಗಣೇಶ್ ಇವರಿಬ್ಬರನ್ನು ಒಂದೇ ಚಿತ್ರದಲ್ಲಿ ಹಾಕಲು ಅನೇಕ ನಿರ್ಮಾಪಕರು ಪ್ರಯತ್ನಿಸುತ್ತಿರುವಾಗಲೇ ಅಶ್ವಿನಿ ರಾಮ್‌ಪ್ರಸಾದ್ ಯಶಸ್ವಿಯಾಗಿದ್ದಾರೆ ಎಂಬ ಗರ್ಮಾಗರಂ ಸುದ್ದಿ ಗಾಂಧಿನಗರದಿಂದ ಬಂದಿದೆ.

ಈ ಜೋಡಿಯನ್ನು ಒಟ್ಟುಗೂಡಿಸಿದವರು ಝೀ ಟೀವಿಯಲ್ಲಿ ನಿರೂಪಕರಾಗಿರುವ ರಘುರಾಮ್. ಇವರು ಈ ಚಿತ್ರದ ಮುಖಾಂತರ ನಿರ್ದೇಶಕರಾಗಿ ಗಾಂಧಿನಗರಕ್ಕೆ ಪಾದಾರ್ಪಣೆ ಮಾಡಲಿದ್ದಾರೆ.

ಈ ಹಿಂದೆ ಈ ಹೀರೋಗಳಿಬ್ಬರ ಚಿತ್ರವನ್ನು 'ಎಕ್ಸ್‌ಕ್ಯೂಸ್ ಮಿ' ಖ್ಯಾತಿಯ ಎನ್.ಎಂ. ಸುರೇಶ್ ನಿರ್ಮಿಸಲಿದ್ದಾರೆಂದು ಸುದ್ದಿಯಾಗಿತ್ತು. ಆದರೆ ಈ ಪ್ರಾಜೆಕ್ಟನ್ನು ಅಶ್ವಿನಿ ರಾಮ್‌ಪ್ರಸಾದ್ ಹೇಗೆ ಹೈಜಾಕ್ ಮಾಡಿದ್ದಾರೆಂಬುದೇ ಈಗ ಗಾಂಧಿನಗರದಲ್ಲಿ ಎರಡು ಕೋಟಿ ರೂಪಾಯಿಗಳ ಪ್ರಶ್ನೆಯಾಗಿದೆ!

ಕಳೆದ ಎರಡು ವರಮಹಾಲಕ್ಷ್ಮಿ ಹಬ್ಬದಂದು ರಾಮ್‌ಪ್ರಸಾದ್ ಕ್ರಮವಾಗಿ 'ಜೋಗಿ' ಮತ್ತು 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರಗಳನ್ನು ಆರಂಭಿಸಿದ್ದರು. ಈ ಬಾರಿಯ ಹಬ್ಬದಂದು ಈ ಚಿತ್ರವನ್ನು ಆರಂಭಿಸಲಿದ್ದಾರಂತೆ.

ಈಗ ಪತ್ರಕರ್ತರ ಸರದಿ



'ಕೌದಿಬೆಳದಿಂಗಳು' ಎಂಬ ಕಲಾತ್ಮಕ ಚಿತ್ರದ ಮುಖಾಂತರ ಮೂವರು ಸಿನಿಮಾ ಪತ್ರಕರ್ತರು ಒಮ್ಮೆಗೇ ಚಿತ್ರರಂಗಕ್ಕೆ ಧುಮುಕಿದ್ದಾರೆ. ಛಾಯಾಗ್ರಾಹಕ ಕೆ.ಎಂ. ವೀರೇಶ್ ಈ ಚಿತ್ರದ ನಿರ್ಮಾಪಕರಲ್ಲೊಬ್ಬರಾಗಿದ್ದರೆ, ಅವರ ಗೆಳೆಯರಾದ ಜೋಗಿ ಮತ್ತು ಉದಯ ಮರಕಿಣಿ ಚಿತ್ರದ ಕಥೆ, ಚಿತ್ರಕತೆ, ಸಂಭಾಷಣೆಯ ಜವಾಬ್ದಾರಿ ವಹಿಸಿಕೊಂಡು ಎಲ್ಲರಿಂದ ಭೇಷ್ ಎನಿಸಿಕೊಂಡಿದ್ದಾರೆ.

ಈಗ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸಿನಿಮಾ ಪತ್ರಕರ್ತರು ಚಿತ್ರರಂಗಕ್ಕೆ ಧುಮುಕುವ ಮಾತು ಕೇಳಿಬರುತ್ತಿದೆ. ಒಂದೆಡೆ 'ಉದಯವಾಣಿ'ಯ ವರದಿಗಾರ ಪರಮೇಶ್ ಗುಂಡ್ಕಲ್ ಸದ್ಯದಲ್ಲೇ ಉಪೇಂದ್ರ ನಟಿಸಲಿರುವ ಚಿತ್ರವನ್ನು ನಿರ್ದೇಶಿಸುವುದು ಬಹುತೇಕ ಗ್ಯಾರಂಟಿಯಾಗಿದೆ. ಇನ್ನೊಂದೆಡೆ 'ಝೀ ಟೀವಿ'ಯ ರಘುರಾಮ್ ಪ್ರೇಮ್ ಮತ್ತು ಗಣೇಶ್‌ನನ್ನು ಒಂದುಗೂಡಿಸಿ ಸಿನಿಮಾ ತೆಗೆಯಲು ಹೊರಟಿದ್ದಾರೆ. ಮತ್ತೊಂದೆಡೆ 'ಗುಡ್‌ಲಕ್' ಎಂಬ ಸಿನಿಮಾ ನಿರ್ದೇಶಿಸಿದ್ದ ನಂದಕುಮಾರ್ ತಮ್ಮ ಎರಡನೇ ಚಿತ್ರವನ್ನು ಮುಂದಿನ ತಿಂಗಳು ಆರಂಭಿಸಲಿದ್ದಾರಂತೆ. ಇದೇ ಹೊತ್ತಿಗೆ, ಹಲವಾರ ಇತರೆ ಪತ್ರಕರ್ತರ ಹೆಸರುಗಳೂ ಆಗಾಗ್ಗೆ ಕೇಳಿಬರುತ್ತಿರುತ್ತವೆ.

ಒಂದಂತೂ ಸತ್ಯ, ಗಾಂಧಿನಗರದಲ್ಲಿ ಈಗ ಬದಲಾಗುತ್ತಿರುವ ಟ್ರೆಂಡ್‌ನಲ್ಲಿ, ಹಲವಾರು ವರ್ಷಗಳಿಂದ ಸಿನಿಮಾಗಳನ್ನು ನೋಡುತ್ತಾ, ವಿಮರ್ಶಿಸುತ್ತಾ, ಚಿತ್ರರಂಗದೊಂದಿಗೆ ಕಳ್ಳುಬಳ್ಳಿ ಸಂಪರ್ಕವನ್ನು ಹೊಂದಿರುವ ಸಿನಿಮಾ ಪತ್ರಕರ್ತರಿಗೂ ಈಗ ಚಾನ್ಸ್ ಸಿಗಲಾರಂಭಿಸಿದೆ.

ಶಿವಣ್ಣನ ಸೆಂಚುರಿ ನಾಯಕಿ ಯಾರು?



'ಲವ-ಕುಶ' ಸಿನಿಮಾದಲ್ಲಿ ನಟಿಸುತ್ತಿರುವ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಆ ಚಿತ್ರದೊಂದಿಗೆ ಒಂದು ಹೊಸ ದಾಖಲೆಯ ಹೊಸ್ತಿಲಿನಲ್ಲಿದ್ದಾರೆ. ಅದೇನೆಂದರೆ ಇನ್ನೆರಡು ಹೊಸ ನಾಯಕಿಯರೊಂದಿಗೆ ಶಿವಣ್ಣ ನಟಿಸಿದರೆ, ಅವರು ಬರೋಬ್ಬರಿ ಒಂದು ನೂರು ನಾಯಕನಟಿಯರೊಂದಿಗೆ ನಟಿಸಿದ ಖ್ಯಾತಿಗೆ ಪಾತ್ರರಾಗುತ್ತಾರೆ. ಈ ಅಂಕಿ ಅಂಶವನ್ನು ಶಿವಣ್ಣನ ಅಭಿಮಾನಿಯಾದ ಮಂಡ್ಯದ ಸಂತೋಷ್ ಕುಮಾರ್ ಮೊನ್ನೆ ಸ್ವತಃ ಶಿವಣ್ಣನಿಗೆ ತೋರಿಸಿದಾಗ ಅವರಿಗೆ ಆಶ್ಚರ್ಯ!

ಅಂದಹಾಗೆ ಸುಧಾರಾಣಿಯಿಂದ ಜನ್ನಿಫರ್ ಕೊತ್ವಾಲ್ ತನಕ ಶಿವಣ್ಣನ ನಾಯಕಿಯರನ್ನು ನೆನಪಿಸಿಕೊಳ್ಳುತ್ತಾ ಹೋದರೆ ಈಗಲೂ ಪ್ರೇಕ್ಷಕರಿಗೆ ಥಟ್ಟನೆ ನೆನಪಾಗುವ ಜನಪ್ರಿಯ ಜೋಡಿಯೆಂದರೆ ಶಿವಣ್ಣ-ಸುಧಾರಾಣಿ. ಎಷ್ಟೋ ಜನ ಇವರಿಬ್ಬರ ಜೋಡಿಯನ್ನು ಭಾರತಿ-ರಾಜ್ ಜೋಡಿಯಂತಿದೆ ಎಂದು ಮನಸಾರೆ ಹೊಗಳಿದ್ದೂ ಉಂಟು. ಆನಂತರ 'ಓಂ' ಮತ್ತು 'ನಮ್ಮೂರ ಮಂದಾರ ಹೂವೇ' ಚಿತ್ರಗಳಲ್ಲಿ ಪ್ರೇಮಾ-ಶಿವಣ್ಣ ಜೋಡಿ ಹಿಟ್ ಆದರೂ ಸುಧಾರಾಣಿಯಷ್ಟು ಹೆಚ್ಚು ಸಂಖ್ಯೆಯಲ್ಲಿ ಬೇರೆ ನಾಯಕಿಯರ ಜೊತೆ ಶಿವಣ್ಣ ನಟಿಸಲೇ ಇಲ್ಲ. ಈ ಮಧ್ಯೆ ಆಮದು ತಾರೆಯರಾದ ಸೊನಾಲಿ ಬೇಂದ್ರೆ, 'ಮೇನೆ ಪ್ಯಾರ್ ಕಿಯಾ' ಖ್ಯಾತಿಯ ಭಾಗ್ಯಶ್ರೀ, ತಮಿಳಿನ ಲೈಲಾ, ಮಹೇಶ್ವರಿ.... ಮೊದಲಾದವರು ಬಂದುಹೋದರು.

ಈಗಿರುವ ಕುತೂಹಲಕರ ಪ್ರಶ್ನೆ ಯಾವುದೆಂದರೆ ಶಿವಣ್ಣನ ನೂರನೆ ನಾಯಕಿಯಾಗಿ ಯಾರು ನಟಿಸಲಿದ್ದಾರೆ ಎಂಬುದು!




'ಗುಣವಂತ' ಎಂದು ತೋರಿಸಿದ ಪ್ರೇಮ್ '?'

'ನೆನಪಿರಲಿ' ಖ್ಯಾತಿಯ ಪ್ರೇಮ್ ಮೊಟ್ಟಮೊದಲಿಗೆ 'ಪ್ರಾಣ' ಎಂಬ ಚಿತ್ರದಲ್ಲಿ ನಾಯಕನಟನಾಗಿ ಅಭಿನಯಿಸಿದ್ದು, ಆ ಚಿತ್ರ ಅಕ್ಷರಶಃ ದಯನೀಯವಾಗಿ ಪ್ರಾಣ ಬಿಟ್ಟಿದ್ದು ಪ್ರಾಯಶಃ ಯಾರಿಗೂ ನೆನಪಿಲ್ಲ. ಅಷ್ಟೇ ಅಲ್ಲ, 'ಪ್ರಾಣ' ಚಿತ್ರ ಬಾಕ್ಸ್ ಆಫೀಸಿನಲ್ಲಿ ಪ್ರಾಣ ತೆತ್ತಾಗ ಪ್ರೇಮ್‌ನ ಎರಡನೇ ಚಿತ್ರ '?' ಕೂಡ ಸೆಟ್ಟೇರಿದ ಹಲವು ದಿನಗಳಲ್ಲೇ ಪೂರ್ವಾರ್ಥಕವಾಗಿಯೇ ನಿಂತುಬಿಟ್ಟಿದ್ದೂ ಗೊತ್ತಿರಲಿಕ್ಕಿಲ್ಲ.

ಆದರೆ ಅಂದು ಮಾರ್ಕೆಟ್ ಇಲ್ಲದಿದ್ದ ಪ್ರೇಮ್ ಇವತ್ತು ಗಾಂಧಿನಗರದ ಪಾಲಿಗೆ 'ಓಡುವ ಕುದುರೆ' ಆಗಿದ್ದಾನೆ. ಆದ್ದರಿಂದಲೇ ಅಂದು ಆತನ ಬಗ್ಗೆ ನಂಬಿಕೆ ಇಲ್ಲದೇ ನಿಂತು ಹೋಗಿದ್ದ '?' ಚಿತ್ರಕ್ಕೆ ಅದರ ನಿರ್ದೇಶಕ ಲಕ್ಕಿ ಶಂಕರ್ ಮತ್ತೆ ಚಾಲನೆ ನೀಡಿದ್ದಾರೆ. ಆದರೆ ಅಂದು ಪ್ರೇಮ್ ಬಳಿ ಬಹಳ ಬಿಡುವಿನ ಸಮಯವಿತ್ತು, ಈಗ ಆತ ಎರಡು ವರ್ಷಗಳ ತನಕ ಡೇಟ್ಸ್ ಹಂಚಿದ್ದಾನೆ. ಇಂತಹ ಸಂದರ್ಭದಲ್ಲಿ ಆದು ಹೇಗೆ '?' ಚಿತ್ರವನ್ನು ಮುಗಿಸುತ್ತಾರೆ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ.

ಅದಕ್ಕೆ ಪ್ರೇಮ್ ವ್ಯಕ್ತಿತ್ವದಲ್ಲೇ ಉತ್ತರವಿದೆ. ಅಂದು ತಾನು ಏನೂ ಆಗದಿದ್ದಾಗ ತನಗೆ ಅವಕಾಶ ಕೊಟ್ಟಿದ್ದನ್ನು ಮರೆಯದಿರುವ ಪ್ರೇಮ್ ಲಕ್ಕಿ ಶಂಕರ್‌ಗೆ ಅದು ಹೇಗೋ ಸಮಯ ಮಾಡಿಕೊಟ್ಟು, ಚಿತ್ರ ಸಂಪೂರ್ಣವಾಗುವುದಕ್ಕೆ ಸಹಕರಿಸಿ ನಿಜ ಜೀವನದಲ್ಲೂ ತಾನು 'ಗುಣವಂತ' ಎನಿಸಿಕೊಂಡಿದ್ದಾನೆ.



'ಮೀರಾ ಮಾಧವ ರಾಘವ' ಚಿತ್ರದಲ್ಲಿ ರಮ್ಯಾ

ಸತ್ಯ ಇನ್ ಗ್ರೀಸ್



'ಸತ್ಯ ಇನ್ ಲವ್' ಚಿತ್ರದ ಹಾಡುಗಳ ಚಿತ್ರೀಕರಣಕ್ಕಾಗಿ ಗ್ರೀಸ್ ದೇಶಕ್ಕೆ ಆ ಸಿನಿಮಾದ ತಂಡ ಪ್ರಯಾಣ ಬೆಳೆಸಿದೆ. ಕನ್ನಡ ಚಿತ್ರರಂಗದ ಮಟ್ಟಿಗೆ ಗ್ರೀಸ್‌ನಲ್ಲಿ ಚಿತ್ರವೊಂದರ ಹಾಡುಗಳು ಚಿತ್ರೀಕರಣವಾಗುತ್ತಿರುವುದು ಇದೇ ಮೊದಲ ಬಾರಿ.

ಮೊನ್ನೆ ಮೊನ್ನೆಯಷ್ಟೇ ಪೀಟರ್ ಹೇಯ್ಸ್ ಎಂಬ ಖ್ಯಾತ ಸ್ಟಂಟ್‌ಮನ್‌ನನ್ನು ಕರೆಸಿ ಹೊಡೆದಾಟ ನಡೆಸಿದ್ದ ಈ ತಂಡ ಅದಕ್ಕೆಂದು ಸಾಹಸ ಕಲಾವಿದರನ್ನೂ ದುಬಾರಿ ಬೆಲೆ ತೆತ್ತು ಮಲೇಶಿಯಾ ಮತ್ತು ಹಾಂಕಾಂಗ್‌ಗಳಿಂದ ಕರೆಸಿತ್ತು.

'ಅನ್ನಿಯನ್', 'ಶಿವಾಜಿ' ಮೊದಲಾದ ಅನೇಕ ತಮಿಳು ಚಿತ್ರಗಳಿಗೆ ಸ್ಟಂಟ್ ಮಾಸ್ಟರ್ ಆಗಿ ಕೆಲಸ ನಿರ್ವಹಿಸಿ ಖ್ಯಾತಿ ಗಳಿಸಿರುವ ಪೀಟರ್ ಹೇಯ್ಸ್‌ನನ್ನು ಇಷ್ಟು ಬೇಗ ಕನ್ನಡದವರು ಕರೆದುಕೊಂಡು ಬಂದಿರುವುದು ನಿಜವಾಗಲೂ ಅಚ್ಚರಿ ಹುಟ್ಟಿಸುತ್ತದೆ. ಅದೇನೇ ಇರಲಿ, ಪೀಟರ್ ಆಗಮನದಿಂದ 'ಸತ್ಯ' ತಂಡದಲ್ಲಿ ಹೊಸ ಹುರುಪು ಕಾಣಿಸುತ್ತಿದೆ. ಈತನಕ ಶಿವಣ್ಣನ ಜಪ ಮಾಡುತ್ತಿದ್ದ ಚಿತ್ರತಂಡದ ಹುಡುಗರೆಲ್ಲಾ ಈಗ 'ಪೀಟರ್, ಪೀಟರ್' ಎನ್ನುತ್ತಿದ್ದಾರೆ.

'ಮೂಡಲ ಮನೆ'ಗೆ 'ಮುತ್ತಿನ ತೋರಣ'



'ಮೂಡಲ ಮನೆ' ಧಾರಾವಾಹಿಯ ಮೂಲಕ ಜನಪ್ರಿಯ ನಟನಾಗಿ ಹೆಸರು ಮಾಡಿದ್ದ ಕೆ.ಎಸ್.ಎಲ್. ಸ್ವಾಮಿ ಉರುಫ್ ರವಿ ಈಗ ಮತ್ತೊಮ್ಮೆ ಕಿರುತೆರೆ ಕಡೆಗೆ ನಡೆದು ವೈಶಾಲಿ ಕಾಸರವಳ್ಳಿ ನಿರ್ದೇಶನದ 'ಮುತ್ತಿನ ತೋರಣ' ಧಾರಾವಾಹಿಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈ ಧಾರಾವಾಹಿಯಲ್ಲಿ ಸ್ವಾಮಿಯವರು ಹಿಂದೂಸ್ತಾನಿ ಸಂಗೀತಗಾರನ ಪಾತ್ರದಲ್ಲಿ ನಟಿಸುತ್ತಿರುವುದರಿಂದ ಅವರು ಈ ಇಳಿವಯಸ್ಸಿನಲ್ಲೂ ಸಂಗೀತಾಭ್ಯಾಸ ಮಾಡುತ್ತಿದ್ದಾರಂತೆ.

ಅಂದಹಾಗೆ 'ಮೂಡಲ ಮನೆ'ಗೆಂದು ಸಾಹಿತಿ ಚಂದ್ರಶೇಖರ ಕಂಬಾರರು ಬರೆದಿದ್ದ ಶೀರ್ಷಿಕೆ ಗೀತೆ ಎಲ್ಲರ ಬಾಯಲ್ಲೂ ಗುನುಗುನಿಸುತ್ತಿತ್ತು. ಆದರೆ ಈ ಶೀರ್ಷಿಕೆ ಗೀತೆ ಜನಪ್ರಿಯವಾದ ನಂತರ ಪ್ರತಿ ದಿನದ ಸಂಚಿಕೆಗೂ ಹಣ ನೀಡಬೇಕೆಂದು ಕಂಬಾರರು ಗಲಾಟೆ ಮಾಡಿದ್ದರು. ಈ ಕಾರಣಕ್ಕೋ ಏನೋ 'ಮುತ್ತಿನ ತೋರಣ'ಕ್ಕೆ ಕಂಬಾರರ ಬದಲು ಖ್ಯಾತ ಬರಹಗಾರ್ತಿ ವೈದೇಹಿಯವರಿಂದ ಶೀರ್ಷಿಕೆ ಗೀತೆಯನ್ನು ರಚಿಸಿದ್ದಾರಂತೆ.

ದೀರ್ಘಕಾಲದ ಅನಾರೋಗ್ಯದಿಂದ ಈಗ ತಾನೇ ಹಾಸಿಗೆಯಿಂದ ಮೇಲೆದ್ದಿರುವ ವೈಶಾಲಿಯವರ ಈ ಪ್ರಯತ್ನವೂ ಸಫಲವಾಗಲಿ ಎಂಬುದೇ ಎಲ್ಲರ ಹಾರೈಕೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44